ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 26 ಶುಕ್ರವಾರ 2026

47

ಸಂಪುಟ: 47 | ಸಂಚಿಕೆ: 71 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸ್ವಾಮಿಗೆ ಸ್ವಾತಿ ನಕ್ಷತ್ರದ ಪೂಜೆ



ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯಕ್ಕೆ ಮಾಜಿ ಸಚಿವ ಅಶ್ವತ್ಥನಾರಾಯಣ್ ಭೇಟಿ ನೀಡಿ ಭಕ್ತರಿಗೆ ಪ್ರಸಾದ ವಿತರಿಸಿದರು.

ಮೈಸೂರು.ಜೂ.25(ಜಿಎ)–ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಗುರುವಾರದಂದು ಶ್ರೀ ಸ್ವಾಮಿಗೆ ವಿಶೇಷ ಸ್ವಾತಿ ನಕ್ಷತ್ರ ಪೂಜೆ ನೆರವೇರಿಸಲಾಯಿತು. ದೇವಾಲಯದ ಸಂಸ್ಥಾಪಕರೂ ಆದ

ಮಾಜಿ ಡಿಸಿಎಂ ಅಶ್ವಥ್ ನಾರಾಯಣ್ ಭಾಗಿ

ನಾಡೋಜ ಪ್ರೊ. ಭಾಷ್ಯಂ ಸ್ವಾಮೀಜಿ ಅವರ ನೇತೃತ್ವದಲ್ಲಿ ಬೆಳಗ್ಗೆಯಿಂದಲೇ ಮಹಾಮಂಗಳಾರತಿ ನೆರವೇರಿದಂತೆ, ಇನ್ನಿತರ ವಿಶೇಷ ಪೂಜಾ ಕೈಂಕರ್ಯ ಜರುಗಿತು.

ನೂರಾರು ಭಕ್ತರು ದೇಗುಲಕ್ಕೆ ಆಗಮಿಸಿ, ದೇವರ ದರ್ಶನ ಪಡೆದು, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾದರು. ಬಳಿಕ ಎಲ್ಲಾ ಭಕ್ತಾದಿಗಳಿಗೂ ಪ್ರಸಾದ ವಿತರಿಸಲಾಯಿತು. ಮಾಜಿ ಸಚಿವರು ಹಾಗೂ ಬಿಜೆಪಿ ಪಕ್ಷದ ಹಾಲಿ ಶಾಸಕರೂ ಆದ ಅಶ್ವಥ್ ನಾರಾಯಣ್ ಅವರು ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾ ನರಸಿಂಹಸ್ವಾಮಿ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು, ಸ್ವಾತಿ ನಕ್ಷತ್ರದ ವಿಶೇಷ ಪೂಜೆಯಲ್ಲಿ ಪಾಲ್ಗೊಂಡಿದ್ದು, ವಿಶೇಷವಾಗಿತ್ತು.

ತದನಂತರ ದೇವಾಲಯಕ್ಕೆ ಬಂದಂತಹ ಭಕ್ತಾದಿಗಳಿಗೆ ತಾವೇ ಸ್ವತಃ ಪ್ರಸಾದ ವಿತರಿಸಿದರು. ಈ ಸಂದರ್ಭದಲ್ಲಿ ದೇವಸ್ಥಾನದ ಪ್ರಧಾನ ಅರ್ಚಕರಾದ ಶೇಷಾದ್ರಿ, ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಇನ್ನಿತರರು ಉಪಸ್ಥಿತರಿದ್ದರು.

ಮಾದಕ ವಸ್ತುಗಳ ಬಗ್ಗೆ ಜಾಗೃತಿ ಸಪ್ತಾಹ ಜಾಥಾ

ಅಪರಾಧ ಚಟುವಟಿಕೆಗಳಿಗೆ ದಾರಿ ಮಾಡಿಕೊಡುವ ಮಾದಕ ವಸ್ತುಗಳ ಬಗ್ಗೆ ಕಡಿವಾಣ ಅಗತ್ಯ



ಅಂತರ ರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನದ ಅಂಗವಾಗಿ ವಿಜಯನಗರ ಪೊಲೀಸ್ ಠಾಣಾ ವತಿಯಿಂದ ಜಾಗೃತಿ ಸಪ್ತಾಹ ಜಾಥಾ ನಡೆಸಲಾಯಿತು.

ಮೈಸೂರು, ಜೂ.25(ಜಿಎ)–ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ, ಮೈಸೂರು ನಗರ ಪೊಲೀಸರ ಸಹಯೋಗದೊಂದಿಗೆ ವಿಜಯನಗರ ಪೊಲೀಸ್ ಠಾಣಾ ವತಿಯಿಂದ ಗುರುವಾರ ಜಾಗೃತಿ ಸಪ್ತಾಹ ಜಾಥಾ ನಡೆಸಲಾಯಿತು.

ಇದೇ ವೇಳೆ ವಿಜಯನಗರ ಉಪವಿಭಾಗದ ಎಸಿಪಿ ರವಿಪ್ರಸಾದ್ ಮಾತನಾಡಿ, ಮಾದಕ ವಸ್ತುಗಳ ಸೇವನೆ ವ್ಯಕ್ತಿಯ ಆರೋಗ್ಯ, ಶಿಕ್ಷಣ, ಕುಟುಂಬ ಹಾಗೂ ಸಮಾಜದ ಮೇಲೆ ಗಂಭೀರ ದುಷ್ಪರಿಣಾಮಗಳನ್ನು ಉಂಟುಮಾಡುವುದರ ಜೊತೆಗೆ ಅಪರಾಧ ಚಟುವಟಿಕೆಗಳಿಗೆ ದಾರಿಮಾಡಿಕೊಡುತ್ತದೆ ಎಂದರು.

ಸಾರ್ವಜನಿಕರು ವಿಶೇಷವಾಗಿ ಯುವ ಜನತೆ ಮತ್ತು ವಿದ್ಯಾರ್ಥಿಗಳು ಮಾದಕ ವ್ಯಸನದ ದುಷ್ಪರಿಣಾಮಗಳ ಬಗ್ಗೆ ಅರಿವು ಹೊಂದಿ, ಇಂತಹ ದುಶ್ಚಟಗಳಿಂದ ದೂರ ವಿದ್ದು ಆರೋಗ್ಯಕರ ಹಾಗೂ ಶಿಸ್ತುಬದ್ಧ ಜೀವನವನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ ಎಂದು ತಿಳಿಸಿದರು.

ಪ್ರತಿ ವರ್ಷ ಜೂನ್ 26ರಂದು ಆಚರಿಸಲಾಗುವ ಅಂತರ ರಾಷ್ಟ್ರೀಯ ಮಾದಕ ವಸ್ತುಗಳ ದುರ್ಬಳಕೆ ಮತ್ತು ಅಕ್ರಮ ಸಾಗಣಿಕೆ ವಿರೋಧಿ ದಿನಾಚರಣೆ ಅಂಗವಾಗಿ ಈ ವಾರವನ್ನು ಮಾದಕ ವಸ್ತುಗಳ ವಿರೋಧಿ ಸಪ್ತಾಹ–2026 ಎಂದು ಆಚರಿಸುತ್ತಿದ್ದು, ಅಂತೆಯೇ ಇಂದು ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸಾರ್ವಜನಿಕರಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಎಸಿಪಿ ರವಿಪ್ರಸಾದ್ ಹೇಳಿದರು.

ಡ್ರಗ್ ನಂತಹ ಮಾರಕ ವ್ಯಸನಗಳಿಗೆ ಬಲಿಯಾಗುತ್ತಿರುವ ಯುವಕರನ್ನು ರಕ್ಷಿಸುವುದು ಇದರ ಮುಖ್ಯ ಗುರಿಯಾಗಿದ್ದು, ಮಾದಕ ವಸ್ತುಗಳನ್ನು ನಾಶಪಡಿಸುವ ಮೂಲಕ ಕಠಿಣ ಸಂದೇಶವನ್ನು ರವಾನಿಸಲಾಗುತ್ತದೆ.

ಮಾದಕ ವ್ಯಸನಿಗಳಿಗೆ ಪುನರ್ವಸತಿ ಕೇಂದ್ರಗಳ ಮೂಲಕ ಸೂಕ್ತ ಚಿಕಿತ್ಸೆ ನೀಡಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಪ್ರಯತ್ನಗಳನ್ನು ನಗರ ಪೊಲೀಸ್ ಇಲಾಖೆ ವತಿಯಿಂದ ಉತ್ತೇಜಿಸಲಾಗುತ್ತಿದೆ ಎಂದ ಅವರು, ಯುವಜನತೆ ಇಂತಹ ದುಶ್ಚಟದಿಂದ ದೂರವಿದ್ದು, ಕ್ರೀಡೆ ಮತ್ತು ಉತ್ತಮ ಶೈಲಿಯ ಜೀವನದತ್ತ ಗಮನಹರಿಸಬೇಕೆಂಬುದು ಇಂದಿನ ಜಾಗೃತಿ ಜಾಥಾದ ಆಶಯವಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮೈಸೂರು ವಿಜಯನಗರದ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ವಿಜಯನಗರ ಠಾಣಾ ಇನ್ಸ್ ಪೆಕ್ಟರ್ ಲವ, ಮೇಟಗಳ್ಳಿ ಠಾಣಾ ಇನ್ಸ್‌ಪೆಕ್ಟರ್ ಅರುಣ್‌ಕುಮಾರ್, ಸರಸ್ವತಿಪುರಂ ಠಾಣೆಯ ರವಿಕಿರಣ್, ಹೆಬ್ಬಾಳು ಠಾಣೆಯ ಲಕ್ಷ್ಮೀಕಾಂತ್ ಸೇರಿದಂತೆ ನೂರಾರು ಆರಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

72,186 ಹುದ್ದೆಗಳ ನೇಮಕಾತಿಗೆ ಅನುಮೋದನೆ

ಬೆಂಗಳೂರು: ರಾಜ್ಯ ಸರ್ಕಾರ ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಒಟ್ಟು 72,186 ಹುದ್ದೆಗಳ ನೇಮ ಕಾತಿಗೆ ಅನುಮೋದನೆ ನೀಡಲಾಗಿದ್ದು, ಈ ಕುರಿತು ಉನ್ನತ ಮಟ್ಟದ ಅಧಿಕಾರಿಗಳಿಗೆ ಮೇಲುಸ್ತುವಾರಿ ಜವಾಬ್ದಾರಿ ನೀಡಲಾಗಿದೆ.

2023–24ನೇ ಸಾಲಿನಿಂದ ಇಲ್ಲಿಯವರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 40,009 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಕಲ್ಯಾಣ–ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 32,177 ಹುದ್ದೆಗಳ ಪೈಕಿ ಶೇ.80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಸಹಮತಿಸಲಾಗಿದೆ. ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಆಯ್ಕೆ ಪ್ರಾಧಿಕಾರಗಳಿಂದ ಕ್ರಿಯಾ ಯೋಜನೆಗಳನ್ನು ಪಡೆದು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿತ್ತು. ಸಚಿವ ಸಂಪುಟ ಅನುಮೋದನೆ ನೀಡಿತ್ತು.

17 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಿಗೆ ಜವಾಬ್ದಾರಿ ನೀಡಲಾಗಿದೆ. ಇನ್ನು, 34 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ಜವಾಬ್ದಾರಿ ನೀಡಲಾಗಿದೆ.

4 ತಿಂಗಳಲ್ಲಿ ನೇಮಕಾತಿ: ಎಲ್ಲಾ ನೇರ ನೇಮಕಾತಿ ಹುದ್ದೆಗಳಿಗೆ ಮುಂದಿನ ಎರಡು ತಿಂಗಳುಗಳಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚಿಸಲಾಗಿದೆ. ಮುಂದಿನ ನಾಲ್ಕು ತಿಂಗಳುಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಿ, ಆರು ತಿಂಗಳಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ನೇಮಕಾತಿ ಆದೇಶಗಳನ್ನು ಹೊರಡಿಸಲು ಸರ್ಕಾರ ಸೂಚಿಸಿದೆ.

ನಟರಾಜ್ ಜೋಯಿಸ್‌ಗೆ ಸಾಲುಮರದ ತಿಮ್ಮಕ್ಕ ಪ್ರಶಸ್ತಿ



ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದಿಂದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಅವರಿಗೆ ಗಣ್ಯರು ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಮಕ್ಕಳ ಹೆಸರಲ್ಲಿ ನೂರು ಮರ ಬೆಳೆಸಿದರೆ ಒಳಿತು

ಮೈಸೂರು, ಜೂ.25(ಜಿಎ)–ಮೈಸೂರಿನ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಸಮಾರಂಭದಲ್ಲಿ ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್‌ಗೆ ಗಣ್ಯರು ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ನಮ್ಮ ಮಕ್ಕಳಿಗೆ ಏನೇನೋ ಕೊಡುವ ಬದಲು ಅವರ ಹೆಸರಿನಲ್ಲಿ ನೂರು ಮರ ಬೆಳೆಸಿದರೆ ಅದೇ ಅವರಿಗೆ ನೀಡುವ ದೊಡ್ಡ ಕೊಡುಗೆಯಾಗಿರುತ್ತದೆ. ಪ್ರಾಕೃತಿಕ ಅಸಮತೋಲನಕ್ಕೆ ಮಾನವನ ವಿಕೃತಿಯೇ ಕಾರಣವಾಗಿದೆ. ಹೀಗಾಗಿ ಪ್ರಕೃತಿಯನ್ನು ಉಳಿಸಿಕೊಳ್ಳುವ ಮೂಲಕ ಸಮತೋಲನದ ಅಭಿವೃದ್ಧಿ ಕೈಗೊಳ್ಳಬೇಕಾಗಿದೆ ಎಂದರು.

ಪ್ರಕೃತಿಯೊಡನೆ ಸಂಪರ್ಕ ಇದ್ದರೆ ಮಾತ್ರ ಬದುಕು ಹಸನಾಗುತ್ತದೆ. ನಗರದಲ್ಲಿ ಫ್ಲೈ ಓವರ್ ನಿರ್ಮಾಣಕ್ಕೆ ಮರ ಕಡಿಯಬೇಕಾಗುತ್ತದೆ ಎಂಬ ಕಾರಣಕ್ಕೆ ಹಲವರು ಅಡ್ಡಿಪಡಿಸಿದರು. ಇದು ಉತ್ತಮ ಬೆಳವಣಿಗೆಯಾಗಿದೆ. ಸಂಘ ಸಂಸ್ಥೆಗಳ ಹಸಿರೀಕರಣಕ್ಕೆ ಪಾಲಿಕೆ ಸಹಾ ಪ್ರೋತ್ಸಾಹಿಸಬೇಕಾದ ಅಗತ್ಯವಿದೆ ಎಂದರು.

ಅಷ್ಟೇನೂ ಓದಿರದಿದ್ದರೂ ಸಾಲು ಮರದ ತಿಮ್ಮಕ್ಕ ಪ್ರಕೃತಿ ಸಂರಕ್ಷಣೆ, ವರ್ಧನೆಗೆ ನೀಡಿದ ಕೊಡುಗೆ ಮೂಲಕ ಇಂದು ವಿಶ್ವ ಪ್ರಸಿದ್ಧಿ ಹೊಂದಿದ್ದಾರೆ. ಹೀಗಾಗಿ ಇಂತಹವರ ಹೆಸರಿನಲ್ಲಿ ಪ್ರಶಸ್ತಿ ನೀಡುವುದು ಸ್ವಾಗತಾರ್ಹ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಇಡೀ ವಿಶ್ವ ಪ್ರಕೃತಿ ಸಂರಕ್ಷಣೆ ವಿಷಯದಲ್ಲಿ ಒಂದಾಗಬೇಕಾಗಿದೆ. ಜನಸಂಖ್ಯೆ ನಿಯಂತ್ರಿಸದಿದ್ದರೆ ಪ್ರಕೃತಿಗೆ ದೊಡ್ಡ ಆಘಾತವಾಗುತ್ತದೆ. ಈ ಹಿಂದೆ ಮಲೆನಾಡಿನಲ್ಲಿ ಹರಿಯುತ್ತಿದ್ದ ಝರಿಗಳ ನೀರು ಸೇವನೆಗೆ ಯೋಗ್ಯವಾಗಿತ್ತು. ಆದರೆ ಈಗ ಬೆಳೆಗಳಿಂದ ಪಡೆಯುವ ಫಸಲಿನಷ್ಟೇ ರಾಸಾಯನಿಕ ಹಾಕುತ್ತಿರುವ ಕಾರಣ ನೀರು ವಿಷಮಯವಾಗುತ್ತಿದೆ ಎಂದು ಬೇಸರಿಸಿದರು.

ಪ್ರಶಸ್ತಿ ಸ್ವೀಕರಿಸಿ ನಟರಾಜ್ ಜೋಯಿಸ್ ಮಾತನಾಡಿ, ಯಾರೋ ಕಷ್ಟ ಪಟ್ಟು ನೆಟ್ಟ ಗಿಡಗಳನ್ನು ಎಲ್ಲಿ, ಹೂಗಳಿಗಾಗಿ ಕೊಂಬೆಯನ್ನೇ ಮುರಿಯುವುದೂ ಹೆಚ್ಚು. ಇದು ತಪ್ಪಬೇಕು. ಗಿಡಗಳ ಸಂರಕ್ಷಣೆಗೆ ಎಲ್ಲರೂ ಗಮನ ಹರಿಸಬೇಕೆಂದು ಕೋರಿದರು.

ಕಾರ್ಯಕ್ರಮದಲ್ಲಿ ಅಂಬಳೆ ಶಿವಣ್ಣ, ರಾಜು ಕಾರ್ಯ, ಮಲ್ಲಿಕಾ ಮಹದೇವಸ್ವಾಮಿ, ಸಂಸ್ಥೆಯ ಅಧ್ಯಕ್ಷ ಬಸವರಾಜೇಂದ್ರ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು.

ಪಾಸ್‌ಪೋರ್ಟ್ ಇನ್ನೂ ದುಬಾರಿ



ನವದೆಹಲಿ, ಜೂ. 25–ವಿದೇಶ ಪ್ರವಾಸ ಕೈಗೊಳ್ಳುವ ಯೋಚನೆಯಲ್ಲಿರುವ ನಾಗರಿಕರಿಗೆ ಕೇಂದ್ರ ಸರ್ಕಾರವು ಬೆಲೆ ಏರಿಕೆಯ ಬಿಸಿ ಮುಟ್ಟಿಸಿದೆ. ಪಾಸ್‌ಪೋರ್ಟ್ ಅರ್ಜಿ ಸಲ್ಲಿಕೆ ಮತ್ತು ಮರುಹಂಚಿಕೆ ಪ್ರಕ್ರಿಯೆಯ ಶುಲ್ಕ ವನ್ನು ಕೇಂದ್ರ ಸರ್ಕಾರವು ಅಧಿಕೃತವಾಗಿ ಏರಿಕೆ ಮಾಡಿದೆ. ಪರಿಷ್ಕೃತ ದರಗಳ ಪ್ರಕಾರ, ಸಾಮಾನ್ಯ ಹಾಗೂ ತತ್ಕಾಲ್ ಪಾಸ್‌ಪೋರ್ಟ್ ಗಳ ದರದಲ್ಲಿ ಭಾರಿ ಏರಿಕೆಯಾಗಿದೆ. ಈ ಹೊಸ ಶುಲ್ಕ ನಿಯಮಗಳು ತಕ್ಷಣದಿಂದಲೇ ಜಾರಿಗೆ ಬರಲಿವೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಮೂಲಗಳು ತಿಳಿಸಿವೆ.

36 ಪುಟಗಳನ್ನು ಹೊಂದಿರುವ ಹೊಸ ಸಾಮಾನ್ಯ ಪಾಸ್‌ಪೋರ್ಟ್‌ನ ಶುಲ್ಕ 2,500 ರೂ. ಆಗಿದೆ. ಈ ಶುಲ್ಕವು ವಯಸ್ಕರಿಗೆ ಮತ್ತು 15ರಿಂದ 18 ವರ್ಷದೊಳಗಿನ ಅಪ್ರಾಪ್ತ ವಯಸ್ಕರಿಗೆ ಅನ್ವಯಿಸುತ್ತದೆ. ಅರ್ಜಿ ಸಲ್ಲಿಸಲು, ಪಾಸ್‌ಪೋರ್ಟ್ ಸೇವಾ ಆನ್‌ಲೈನ್ ಪೋರ್ಟಲ್‌ನಲ್ಲಿ ಖಾತೆಯನ್ನು ರಚಿಸಿ.

ಸಾಮಾನ್ಯ ಪಾಸ್‌ಪೋರ್ಟ್ (36 ಪುಟಗಳು): ನೀವು ಮೊದಲ ಬಾರಿಗೆ ಹೊಸ ಪಾಸ್‌ಪೋರ್ಟ್‌ಗೆ ಅರ್ಜಿ ಸಲ್ಲಿಸುತ್ತಿದ್ದರೆ ಅಥವಾ 36 ಪುಟಗಳನ್ನು ಹೊಂದಿರುವ ಹಳೆಯ ಪಾಸ್‌ಪೋರ್ಟ್ ಅನ್ನು ನವೀಕರಿಸಲು ಬಯಸಿದರೆ, ಇನ್ಮುಂದೆ 2,500 ರೂ. ಶುಲ್ಕವನ್ನು ಪಾವತಿಸಬೇಕಾಗುತ್ತದೆ.

ತತ್ಕಾಲ್ ಪಾಸ್‌ಪೋರ್ಟ್ ಸೇವೆ: ತುರ್ತಾಗಿ ಪಾಸ್‌ಪೋರ್ಟ್ ಅಗತ್ಯ ವಿರುವ ಗ್ರಾಹಕರು ತತ್ಕಾಲ್ ಯೋಜನೆ ಯಡಿ ಅರ್ಜಿ ಸಲ್ಲಿಸಲು ಈಗ ಭಾರಿ ಮೊತ್ತವನ್ನು ಖರ್ಚು ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರವು ತತ್ಕಾಲ್ ಪಾಸ್‌ಪೋರ್ಟ್ ಶುಲ್ಕವನ್ನು ಬರೋಬ್ಬರಿ 5,000 ರೂ.ಗೆ ಏರಿಕೆ ಮಾಡಿದೆ.

ದರ ಹೆಚ್ಚಳಕ್ಕೆ ಕಾರಣ: ಪಾಸ್ ಪೋರ್ಟ್ ವಿತರಣಾ ಪ್ರಕ್ರಿಯೆಯಲ್ಲಿ ತಾಂತ್ರಿಕ ಸುಧಾರಣೆಗಳು, ಉನ್ನತ ದರ್ಜೆಯ ಭದ್ರತಾ ಫೀಚರ್‌ಗಳ ಅಳವಡಿಕೆ (ಉದಾಹರಣೆಗೆ: ಇ–ಪಾಸ್‌ಪೋರ್ಟ್ ಚಿಪ್ ತಂತ್ರಜ್ಞಾನ) ಮತ್ತು ಆಡಳಿತಾತ್ಮಕ ವೆಚ್ಚಗಳು ಹೆಚ್ಚಾಗಿರುವುದರಿಂದ ಈ ದರ ಪರಿಷ್ಕರಣೆ ಮಾಡಲಾಗಿದೆ. ಕಳೆದ ಹಲವು ವರ್ಷಗಳಿಂದ ಪಾಸ್‌ಪೋರ್ಟ್ ಶುಲ್ಕದಲ್ಲಿ ಯಾವುದೇ ಪ್ರಮುಖ ಬದಲಾವಣೆ ಆಗಿರಲಿಲ್ಲ. ಆದರೆ, ಈಗ ಏಕಕಾಲಕ್ಕೆ ದರ ಹೆಚ್ಚಿಸಿರುವುದು ಹೊಸದಾಗಿ ಪಾಸ್ ಪೋರ್ಟ್ ಪಡೆಯುವ ಜನಸಾಮಾನ್ಯರಿಗೆ ಕೊಂಚ ಆರ್ಥಿಕ ಹೊರೆಯಾಗಲಿದೆ. ಅಧಿಕೃತ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಹೊಸ ಶುಲ್ಕದ ಅನ್ವಯವೇ ಪಾವತಿ ಮಾಡಬೇಕಾಗುತ್ತದೆ.

ವಿವಾಹ ಆಹ್ವಾನ ಪತ್ರಿಕೆಯಲ್ಲಿ ವಧು–ವರರ ಜನ್ಮ ದಿನಾಂಕ ನಮೂದು ಕಡ್ಡಾಯ!

ಮುಂಬೈ: ಬಾಲ್ಯ ವಿವಾಹ ತಡೆಯಲು ಮಹಾರಾಷ್ಟ್ರ ಸರ್ಕಾರ ಹೊಸ ಕಾನೂನು ಜಾರಿಗೆ ತರಲು ಸಿದ್ಧತೆ ನಡೆಸಿದ್ದು, ಇನ್ನು ಮುಂದೆ ಮದುವೆಯ ಆಮಂತ್ರಣ ಪತ್ರಿಕೆಗಳಲ್ಲಿ ವಧು–ವರರ ಜನ್ಮ ದಿನಾಂಕ ಮುದ್ರಿಸುವುದನ್ನು ಕಡ್ಡಾಯಗೊಳಿಸಲು ನಿರ್ಧರಿಸಿದೆ ಎನ್ನಲಾಗಿದೆ.

ಈ ನಿಯಮ ಉಲ್ಲಂಘಿಸುವ ಮುದ್ರಣಾಲಯಗಳ ಲೈಸೆನ್ಸ್ ರದ್ದು ಮಾಡುವುದಷ್ಟೇ ಅಲ್ಲದೆ, ಆ ಪ್ರೆಸ್‌ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪ್ರೆಸ್ ಮಾಲೀಕರು ವಧು–ವರರ ಅಧಿಕೃತ ವಯಸ್ಸಿನ ದಾಖಲೆಗಳನ್ನು ಪರಿಶೀಲಿಸಿ, ನಂತರ ಮುದ್ರಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅದಿತಿ ತತ್ಕರೆ ವಿಧಾನಸಭೆಯಲ್ಲಿ ಘೋಷಿಸಿದ್ದಾರೆ. ರಾಜಸ್ಥಾನ ಸರ್ಕಾರ ಈಗಾಗಲೇ ಯಶಸ್ವಿಯಾಗಿ ಜಾರಿಗೆ ತಂದಿರುವ ಮಾದರಿಯನ್ನು ಆಧರಿಸಿ ಮಹಾರಾಷ್ಟ್ರದಲ್ಲೂ ಈ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದೆ.


ಬಾಲ್ಯ ವಿವಾಹ ತಡೆಯಲು ಕೇವಲ ಪೋಷಕರನ್ನು ಮಾತ್ರವಲ್ಲದೆ, ಮದುವೆ ಮಾಡಿಸುವ ಪುರೋಹಿತರು, ಮಂಗಳ ವಾದ್ಯ ನುಡಿಸುವವರು, ಅಡುಗೆ ವ್ಯವಸ್ಥಾಪಕರು ಎಲ್ಲರ ವಿರುದ್ಧವೂ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಬಾಲ್ಯ ವಿವಾಹ ತಡೆ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಲು ಪ್ರತಿ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವಿಶೇಷ ಕಾರ್ಯಪಡೆ ರಚನೆ, ಆರೋಪಿಗಳಿಗೆ ತಕ್ಷಣವೇ ಶಿಕ್ಷೆ ವಿಧಿಸಲು ವಿಶೇಷ ನ್ಯಾಯಾಲಯ ಸ್ಥಾಪನೆ, ಗೌಪ್ಯವಾಗಿ ಬಾಲ್ಯ ವಿವಾಹಗಳ ಬಗ್ಗೆ ದೂರು ನೀಡಲು ವಿಶೇಷ ವೆಬ್‌ಸೈಟ್ ಆರಂಭಿಸಲಾಗುವುದು ಎಂದು ಸರ್ಕಾರ ತಿಳಿಸಿದೆ.

ಶಾಸಕ ಪ್ರದೀಪ್ ಈಶ್ವರ್ ವಿರುದ್ಧದ ಮಾಜಿ ಸಂಸದ ಪ್ರತಾಪ್ ಸಿಂಹ ಅರ್ಜಿ ವಿಚಾರಣೆ

ಮೈಸೂರು, ಜೂ.25– ಮೈಸೂರು–ಕೊಡಗು ಕ್ಷೇತ್ರದ ಮಾಜಿ ಸಂಸದ ಪ್ರತಾಪ್ ಸಿಂಹ, ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಪ್ರದೀಪ್ ಈಶ್ವರ್ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಮಾನನಷ್ಟ ಪ್ರಕರಣವು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, 42ನೇ ಅಪರ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ವಿಚಾರಣೆಗೆ ಒಳಪಡಲಿದೆ.

ಪ್ರದೀಪ್ ಈಶ್ವರ್ ಮಾಡಿದ್ದ ಆಕ್ಷೇಪಾರ್ಹ ಮತ್ತು ಅಸಭ್ಯ ಹೇಳಿಕೆಗಳ ಸಂಬಂಧ ಪ್ರತಾಪ್ ಸಿಂಹ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ವಿಚಾರಣೆ ಸಂದರ್ಭದಲ್ಲಿ ಕರ್ನಾಟಕ ಹೈಕೋರ್ಟ್, ದೂರಿನಲ್ಲಿ ಉಲ್ಲೇಖಿಸಲಾದ ಅಪಪ್ರಚಾರಗಳು ಮೇಲ್ನೋಟಕ್ಕೆ ಮಾನನಷ್ಟಕರವಾಗಿ ಕಂಡುಬರುತ್ತಿದ್ದು, ವಿಚಾರಣೆಗೆ ಒಳಪಡಿಸಲು ಯೋಗ್ಯವಾಗಿದೆ ಎಂದು ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದ್ದಲ್ಲದೆ, ಪ್ರತಿವಾದಿ ಬೇಷರತ್ ಕ್ಷಮಾಯಾಚನೆ ಸಲ್ಲಿಸಲು ಬಯಸಿದಲ್ಲಿ, ಅದನ್ನು ದಾಖಲೆಯಲ್ಲಿ ಸ್ವೀಕರಿಸಿ ಅರ್ಜಿ ವಿಲೇವಾರಿ ಮಾಡಬಹುದೆಂದು ಸೂಚಿಸಿತ್ತು. ಆದರೆ ಪ್ರದೀಪ್ ಈಶ್ವರ್, ಕ್ಷಮೆ ಯಾಚಿಸದ ಹಿನ್ನೆಲೆಯಲ್ಲಿ ಮಾನನಷ್ಟ ಪ್ರಕರಣದ ವಿಚಾರಣೆ ಮತ್ತೆ ಚಾಲನೆ ಪಡೆದಿದೆ.

ಅಭಿನಂದನೆ...



ವಿಧಾನಪರಿಷತ್ ನೂತನ ಸದಸ್ಯ ರಘು ಕೌಟಿಲ್ಯ ಅವರನ್ನು ಉದ್ಯಮಿಗಳಾದ ಅಶೋಕ್ ಗೋವಿಂದೇಗೌಡ, ಎಲ್‌ಐಸಿ ಶೇಖರ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎನ್.ಯೋಗಾನಂದ ಆತ್ಮೀಯವಾಗಿ ಅಭಿನಂದಿಸಿದರು.

ಉತ್ತಮ ಗ್ರಂಥಾಲಯ ಪುರಸ್ಕಾರ...



ಮಂಡ್ಯ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ರಾಷ್ಟ್ರೀಯ ಪಂಚಾಯತ್‌ರಾಜ್ ದಿನಾಚರಣೆ ಕಾರ್ಯಕ್ರಮದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಗ್ರಾಪಂ ಗ್ರಂಥಾಲಯ–ಅರಿವು ಕೇಂದ್ರಕ್ಕೆ ಉತ್ತಮ ಗ್ರಂಥಾಲಯ ಪುರಸ್ಕಾರ ಲಭಿಸಿದ್ದು, ಪಿಡಿಓ ರವಿ, ಗ್ರಂಥ ಪಾಲಕ ಸಿ.ಚಂದ್ರು ಅವರಿಗೆ ಜಿಪಂ ಸಿಇಓ ಕೆ.ಆರ್.ನಂದಿನಿ ಪ್ರಶಸ್ತಿ ಪ್ರದಾನ ಮಾಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.06.2026 ಶುಕ್ರವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2026ರಿಂದ 05.07.2026ವರೆಗೆ, ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಕುತ್ತಿಗೆ ನೋವು, ಸ್ಪಾಂಡಿಲೋಸಿಸ್, ಭುಜನೋವು, ಬೆನ್ನು ನೋವು ಯೋಗ ಚಿಕಿತ್ಸಾ ಶಿಬಿರ, ಅರ್ಥೈಟಿಸ್ ಚಿಕಿತ್ಸಾ ಶಿಬಿರ, ಅಸೃಗ್ದರ (ಗರ್ಭಾಶಯ ರಕ್ತಸ್ರಾವ), ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ** : ಭಗಂದರ (ಫಿಸ್ತೂಲ), ಚರ್ಮದ ಕಾಯಿಲೆ, ಮೂಗು ಸೋರುವಿಕೆ, ಕಟ್ಟಿದ ಮೂಗು, ಸೀನುವುದು, ಗಂಟಲು ನೋವು, ತಲೆ ನೋವು ಸಮಸ್ಯೆಗಳಿಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ಸ್ವಸ್ತಿ ಅರ್ಥೋ ಅಂಡ್ ಇಎನ್‌ಟಿ ಕ್ಲಿನಿಕ್** : ಉಚಿತ ಶ್ರವಣ ಪರೀಕ್ಷೆ, ವೈದ್ಯರ ಸಮಾಲೋಚನೆ, ಸ್ಥಳ: ಕ್ಲಿನಿಕ್ ಆವರಣ, ಶ್ರೀ ಕರುಮಾರಮ್ಮ ದೇವಸ್ಥಾನದ ಬಳಿ, ವಿದ್ಯಾರಣ್ಯಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ತಾಲೂಕು ನಾಯಕರ ಸಂಘ** : ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಗೌರವ ಸಮರ್ಪಣೆ, ಸಾನ್ನಿಧ್ಯ : ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಉದ್ಘಾಟನೆ : ಸಂಸದ ಜಿ. ಕುಮಾರ್ ನಾಯಕ್, ವಿಶೇಷ ಆಹ್ವಾನಿತರು : ಶಾಸಕರಾದ ಜಿ.ಟಿ. ದೇವೇಗೌಡ, ಅನಿಲ್ ಚಿಕ್ಕಮಾದು, ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಅಧ್ಯಕ್ಷ ಎಂ. ಅಪ್ಪಣ್ಣ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ. ರಾಮಚಂದ್ರ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ** : ಗ್ರಾಪಂ ನೌಕರರ ಸರ್ವ ಸದಸ್ಯರ ಸಭೆ, ಮುಖ್ಯ ಅತಿಥಿಗಳು : ರಾಜ್ಯ ಉಪಾಧ್ಯಕ್ಷ ಜಿ. ರಾಮಕೃಷ್ಣ, ರಾಜ್ಯ ಸಹ ಕಾರ್ಯದರ್ಶಿ ಎಸ್. ರೇಖಾ, ಸಿಐಟಿಯು ಮೈಸೂರು ಜಿಲ್ಲಾಧ್ಯಕ್ಷ ಅಣ್ಣಪ್ಪ, ಅಧ್ಯಕ್ಷತೆ : ಜಿಲ್ಲಾಧ್ಯಕ್ಷ ಕೆ. ಬಸವರಾಜು, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ** : ವಿಪ್ರ ಚಂದ್ರ ಕವನ ಸಂಕಲನ ಬಿಡುಗಡೆ ಸಮಾರಂಭ, ಉದ್ಘಾಟನೆ : ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಪುಸ್ತಕ ಬಿಡುಗಡೆ : ಚಲನಚಿತ್ರ ನಿರ್ದೇಶಕ ಎಸ್. ನಾರಾಯಣ್, ಉಪಸ್ಥಿತರು : ಮೈಸೂರು ವಿವಿ ಆಡಳಿತಾಧಿಕಾರಿ ಪ್ರೊ. ಎಸ್.ಟಿ. ರಾಮಚಂದ್ರ, ಅಧ್ಯಕ್ಷತೆ : ಪ್ರಸಾರಾಂಗದ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಚಿಂತಕ ಸವಿತಾ ಪ. ಮಲ್ಲೇಶ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಅಖಿಲ ಕರ್ನಾಟಕ ಒಕ್ಕಲಿಗರ ಸಂಘ, ಜಿಲ್ಲಾ ಘಟಕ:** ಶ್ರೀ ಕೆಂಪೇಗೌಡರ 517ನೇ ಜಯಂತಿ, ಸಾನ್ನಿಧ್ಯ: ಯೋಗನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ಡಾ. ಭಾಷ್ಯಂ ಸ್ವಾಮೀಜಿ, ಪುಷ್ಪಾರ್ಚನೆ: ಶಾಸಕ ಸಿ.ಎನ್.ಮಂಜೇಗೌಡ, ಉಪಸ್ಥಿತರು: ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಹಿರಿಯ ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡ, ಸಂಘದ ಜಿಲ್ಲಾ ಗೌರವಾಧ್ಯಕ್ಷ ಡಾ.ಸಿ.ವೈ.ಶಿವೇಗೌಡ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಗೋಲ್ಡನ್ ಸುರೇಶ್, ಮರಿಸ್ವಾಮಿ, ಅಧ್ಯಕ್ಷತೆ: ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್, ಸ್ಥಳ: ಅಗ್ರಹಾರ ವೃತ್ತ, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ಏಕೀಕರಣ ಟ್ರಸ್ಟ್:** ಕರ್ನಾಟಕ ಏಕೀಕರಣ ಹೋರಾಟಗಾರರಾದ ಡಾ.ಸಿದ್ಧನಾಥ ಬಳ್ಳಾರಿ ಸ್ಮರಣಾರ್ಥ ಡಾ.ಸುಜಾತ ಅಕ್ಕಿಯವರ ಮೂರು ಏಕವ್ಯಕ್ತಿ ಪ್ರದರ್ಶನ ನಾಟಕೋತ್ಸವ, ಉದ್ಘಾಟನೆ: ಅಂಕಣಕಾರ ನಾ.ದಿವಾಕರ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಉಪಸ್ಥಿತರು: ನಾಟಕ ರಚನೆಕಾರರಾದ ಡಾ.ಸುಜಾತ ಅಕ್ಕಿ, ಪ್ರಾಸ್ತಾವಿಕ ನುಡಿ: ಹಿರಿಯ ರಂಗಕರ್ಮಿ ಎನ್.ಎಸ್.ಗೋಪಿನಾಥ್, ಹರಿಣಾಕ್ಷಿ ರಾವ್ ಅವರಿಂದ ಅಹಲ್ಯೆ ಏಕವ್ಯಕ್ತಿ ನಾಟಕ ಪ್ರದರ್ಶನ, ನಿರ್ದೇಶನ: ಡಾ.ಸುಜಾತ ಅಕ್ಕಿ, ಸಹ ನಿರ್ದೇಶನ : ಅರಸೀಕೆರೆ ಯೋಗಾನಂದ ರಂಗಾಯಣ, ಸ್ಥಳ: ಕಿರುರಂಗಮಂದಿರ ಆವರಣ, ಸಂಜೆ 6ಕ್ಕೆ.

■ **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್** : ಗರುಡಗಂಭ (ದೀಪಸ್ತಂಭ) ಪ್ರತಿಷ್ಠಾಪನಾ ಕಾರ್ಯಕ್ರಮ, ಸಂಜೆ 6ರಿಂದ ಅನುಜ್ಞೆ, ವಿಶ್ವಕ್ಸೇನ, ಮಹಾಗಣಪತಿ ಪೂಜೆ, ಭಗವದ್ ವಾಸುದೇವ, ಪುಣ್ಯಾವಾಚನ, ಕಳಶಾರಾಧನೆ ಅಗ್ನಿ ಪ್ರತಿಷ್ಠಾಪನೆ, ಮಹಾಗಣಪತಿ ಹೋಮ, ನವಗ್ರಹ ಹೋಮ, ವಾಸ್ತುಹೋಮ, ಲಘು ಪೂರ್ಣಾವತಿ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ಹನುಮಂತನಗರ.

■ **ಗಾನಭಾರತೀ** : ಶ್ರೀಮತಿ ಗೌರಿ ಮಿರ್ಲೆ ಜ್ಞಾಪಕಾರ್ಥ ವಿದ್ವಾನ್ ನರೇಂದ್ರ ಗುಂಡೂರಾವ್ ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ವೀಣೆಶೇಷಣ್ಣ ಭವನ, ಕುವೆಂಪುನಗರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ– ಡಾ. ಡಿ. ಸತೀಶ್ಚಂದ್ರ, 6.35 ಮತ್ತುಸಂಜೆ 6.10 ಜ್ಞಾನ ಜ್ಯೋತಿ–ಜೀವನ ಪಾಠ ಕಲಿಸಿದ ಸಾಧಕಿಯರ ಪರಿಚಯ ಮಾಲಿಕೆ, ಪ್ರಸ್ತುತಿ : ಬಿ.ಕೆ. ಮೀನಾಕ್ಷಿ, 6.40 ಪದ ಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ 'ಕಾಡುಕಲಿಸುವ ಪಾಠ', ಪ್ರಾಯೋಜಕರು-Prabha Super Specialty Eye Clinic, Bengaluru & Vittala Institute of Ophthalmology, Bengaluru. ಪ್ರಸ್ತುತಿ–ಟಿ. ಎಸ್. ಗೋಪಾಲ್, 8.30 ಕನ್ನಡ ಚಿತ್ರಗೀತೆಗಳು, 9.00 ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಮಿತಾ ಶ್ರೀಕಿರಣ್–ಕೊಳಲುವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸ್ವರ ಸಂಚಾರ' ಸಂಗೀತ ಲೋಕದಲ್ಲೊಂದು ವಿಹಾರ, ಪ್ರಸ್ತುತಿ: ಅಹಿರಿ ಪುಟ್ಟಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ–ಕೃಪಾಕರ ಸೇನಾನಿ ಅವರ 'ಕೆನ್ನಾಯಿಯ ಜಾಡಿನಲಿ' ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಎಸ್. ಆನಂದ್ ಮತ್ತು ತಂಡ–ನಾದಸ್ವರ ವಾದನ, 4.00 ಮಹಿಳಾರಂಗ ನಾಟಕ–ಬಂಗಾರದೊಡವೆ ಬೇಕೆ ನೀರೆ, ರಚನೆ–ಗಾಯತ್ರಿ ಚಂದ್ರಶೇಖರ್, ನಿರ್ದೇಶನ ಹಾಗೂ ನಿರ್ಮಾಣ –ದಿಗ್ವಿಜಯ್ ಬಿ, 4.30 ವೃತ್ತಿ ಮಾರ್ಗದರ್ಶನ –ಆರ್ಕಿಟೆಕ್ಚರ್ ಮತ್ತು ಅರ್ಬನ್ ಪ್ಲಾನಿಂಗ್ ನಲ್ಲಿರುವ ಅಧ್ಯಯನ ಹಾಗೂ ಉದ್ಯೋಗಾವಕಾಶಗಳ ಕುರಿತು ಆರ್ಕಿಟೆಕ್ಟ್ ಮತ್ತು ಅರ್ಬನ್ ಪ್ಲಾನರ್ ಆದ ಶ್ರೀಮತಿ ಪದ್ಮಶ್ರೀ ಅರಸ್ ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ–ಅರ್ಚನಾ ಆರ್ಯ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪ್ರಾಯೋಜಿತ ಕಾರ್ಯಕ್ರಮ : ಕೃಷಿ ಮಾರಾಟ ರಂಗ, ಪ್ರಾಯೋಜಕರು –ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಮೈಸೂರು. ಬೆಂಬಲ ಬೆಲೆ ಯೋಜನೆ ಹಾಗೂ ಮಾರುಕಟ್ಟೆ ಮಧ್ಯಂತರ ಯೋಜನೆ ಕುರಿತು ಮೈಸೂರಿನ ಕೃಷಿ ಮಾರಾಟ ಅಧ್ಯಯನ ಸಂಸ್ಥೆಯ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಕೆ.ಪಿ. ಸೋಮಯ್ಯ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ–ಹೊಸ ತಲೆಮಾರಿನ ಮಹಿಳಾ ಕಾವ್ಯ: ವಸ್ತು, ವೈವಿಧ್ಯ ಈ ಕುರಿತು ಮಾತನಾಡುತ್ತಾರೆ ಲೇಖಕರಾದ ಡಾ. ಚಂದ್ರನಾಯಕ್, 8.00 ಸಂಧ್ಯಾರಾಗ–ನಿವೃತ್ತ ಬ್ಯಾಂಕ್ ಅಧಿಕಾರಿಗಳಾದ ಬಿ.ಪಿ. ಬಾಲಚಂದ್ರ ಅರಸ್ ಅವರೊಂದಿಗೆ ಮಾತುಕತೆ, ಪ್ರಸ್ತುತಿ–ಜಿ. ಎನ್. ಮಂಜುನಾಥ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಲಿತಾ ಮತ್ತು ಹರಿಪ್ರಿಯಾ–ಯಗಳ ಹಾಡುಗಾರಿಕೆ, 10.00 ತತ್ವ ಸಂಚಾರ–ಜನಪದ ಗಾಯಕರ ತತ್ವಗಾಯನ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

47

ಜೂನ್ 26 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 71 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ನೀವು ಹೀಂಗೇ ಆಡ್ತಾ ಇರಿ
ನರಕದಲ್ಲೂ ಜಾಗ ಸಿಗೋಲ್ಲ.

ಗಂಡ : ಪ್ರತಿಯೊಂದು ಜಾಗಕ್ಕೂ
ನಿನ್ನ ಜೊತೆ ಬರೋಕೆ ನನಗಿಷ್ಟ ಇಲ್ಲ.

ಮೈಸೂರು ಮಿತ್ರ

ಶುಕ್ರವಾರ, ಜೂನ್ 26, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಶ್ರಮವು ನಿನ್ನದೆ... ಸಮಯವು ನಿನ್ನದೆ... ಸಾಧಿಸುವ ಛಲವಿದ್ದರೆ ಪ್ರತಿಫಲ ಕೂಡ ನಿನ್ನದಾಗುವುದು...!!

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು } ಎಲ್ಲ ಮುಗಿದ ಮೇಲೆ ತೀರ್ಥಯಾತ್ರೆಗೆ ಹೊರಟಂತೆ.

ನಿಮ್ಮ ಪತ್ರಗಳು

ಖಾಸಗೀಕರಣ ಸರ್ಕಾರದ ದೌರ್ಬಲ್ಯವೇ?

ಮಾನ್ಯರೆ,

ಸರ್ಕಾರಿ ಸ್ವಾಮ್ಯದ ಅಥವಾ ಒಡೆತನದ ಸಂಸ್ಥೆ ಅಥವಾ ಕಂಪನಿಗಳನ್ನು ಬೇರೆಯವರಿಗೆ ಅಥವಾ ಖಾಸಗಿ ವ್ಯಕ್ತಿಗಳಿಗೆ ನೀಡುವುದು ಸರ್ಕಾರದ ವೈಫಲ್ಯ ಮತ್ತು ದೌರ್ಬಲ್ಯ ಎಂದು ಹೇಳಬಹುದು. ಅದು ರಾಜ್ಯ ಅಥವಾ ಕೇಂದ್ರ ಸರ್ಕಾರವಾಗಿರಬಹುದು.

ಖಾಸಗೀಕರಣ ಸಂಸ್ಥೆಯ ನೌಕರ ಮತ್ತು ಗ್ರಾಹಕರ ಮೇಲೆ ನೇರ ಪರಿಣಾಮ ಬೀರುತ್ತದೆ. ಅಲ್ಲದೆ ಉದ್ಯೋಗ ಮೀಸಲಾತಿ ಮತ್ತು ಅಸಮಾನತೆಯನ್ನು ಸೃಷ್ಟಿಸುತ್ತದೆ ಇದನ್ನು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹಿಂದೆಯೇ ಪ್ರತಿಪಾದಿಸಿದ್ದರು. ಅಂಬೇಡ್ಕರ್ ಅವರ ಆರ್ಥಿಕ ಚಿಂತನೆಗಳನ್ನು ಅಳವಡಿಸಿಕೊಂಡರೆ ಸರ್ಕಾರಿ ಸ್ವಾಮ್ಯದ ಕಂಪನಿಗಳು ಅಭಿವೃದ್ಧಿ ಪಥದಲ್ಲಿ ಸಾಗುವುದರಲ್ಲಿ ಸಂದೇಹವಿಲ್ಲ.

ಟೆಲಿಕಾಂ ಕಂಪನಿಯ ನಂತರ ಈಗ ವಿದ್ಯುತ್ ಕಂಪನಿಗಳ ಖಾಸಗೀಕರಣದ ಸರದಿ ಆರಂಭವಾಗಿದೆ. ಆದರೆ ಇದಕ್ಕೆ ಕರ್ನಾಟಕದಲ್ಲಿ ತೀವ್ರ ಸ್ವರೂಪದ ವಿರೋಧ ವ್ಯಕ್ತವಾಗುತ್ತಿದೆ ಟಾಟಾ ಪವರ್ ಕಂಪನಿಯು ಈಗಾಗಲೇ ಕೆಇಆರ್‌ಸಿ ಮುಂದೆ ಅರ್ಜಿ ಸಲ್ಲಿಸಿದ್ದು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುತ್ತದೆ ಎಂಬುದಾಗಿ ಕಾದು ನೋಡಬೇಕು. ಒಂದೊಮ್ಮೆ ವಿದ್ಯುತ್ ಕಂಪನಿ ಖಾಸಗೀಕರಣಗೊಂಡರೆ ಸಂಪತ್ತು ಖಾಸಗಿಯವರಲ್ಲಿ ಕೇಂದ್ರೀಕೃತವಾಗುವುದಲ್ಲದೆ ಸರ್ಕಾರಿ ಯೋಜನೆಗಳು ರೈತರು ಮತ್ತು ಸಾರ್ವಜನಿಕರ ಕೈ ತಪ್ಪುವುದರಲ್ಲಿ ಸಂದೇಹವಿಲ್ಲ. ಎಲ್ಲಾ ವಲಯಗಳನ್ನು ಒಂದೊಂದಾಗಿ ಖಾಸಗಿಯವರಿಗೆ ನೀಡಿದರೆ ಸರ್ಕಾರದ ಕೆಲಸ ಏನು? ಇದು ಸರ್ಕಾರದ ದೌರ್ಬಲ್ಯವಲ್ಲವೆ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕರ್ತವ್ಯಲೋಪ

ಮಾನ್ಯರೆ,

ಮೈಸೂರಿನ ಜ್ಯೋತಿನಗರ ವಲಯದ ಸೆಸ್ಕಾಂನವರು ವಿದ್ಯುತ್ ಬಿಲ್ ಪಾವತಿ ಮಾಡಲಿಲ್ಲವೆಂದು ಅಂಗಡಿಯ ವಿದ್ಯುತ್ ಸಂಪರ್ಕವನ್ನು ಸ್ಥಗಿತ ಮಾಡಿದ್ದಾರೆ. ತದನಂತರ ನಾವು ಜ್ಯೋತಿ ನಗರದ ಸೆಸ್ಕಾಂ ವಲಯಕ್ಕೆ ಭೇಟಿ ನೀಡಿ ವಿದ್ಯುತ್ ಬಿಲ್ಲನ್ನು ಪಾವತಿಸಿದ್ದೇವೆ. ಪಾವತಿಸಿದ ನಂತರ ನಮಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಿ ಎಂದು ಕೇಳಿದರೆ ಈ ದಿನ ಭಾನುವಾರ ನೌಕರರು ಇಲ್ಲ ಎಂದು ಸಬೂಬು ಹೇಳಿ ವಾಪಸ್ ಕಳಿಸುತ್ತಾರೆ. (ಭಾನುವಾರ ಬಿಲ್ ಪಾವತಿಸಬಹುದೇ?!). 24X7 ಎಂದು ಹೇಳುವ ಸೆಸ್ಕಾಂ ನವರು ಸಾರ್ವಜನಿಕರಿಗೆ ಈ ರೀತಿ ಸಬೂಬು ಹೇಳಿ ಕರ್ತವ್ಯ ಲೋಪ ಎಸಗುವುದು ಸರಿಯೇ? ಇದಕ್ಕೆ ಸಂಬಂಧಪಟ್ಟ ಮೇಲಾಧಿಕಾರಿಗಳು ಭಾನುವಾರ ಬಿಲ್ ಪಾವತಿಸಿದವರಿಗೆ ಸಂಪರ್ಕ ಕಲ್ಪಿಸಿಕೊಡುವ ವ್ಯವಸ್ಥೆ ಮಾಡಲಿ.

–ಪಿ.ಸಿ.ಕಂಗಾಣಿಗೌಡ, ಕ್ಯಾತಮಾರನಹಳ್ಳಿ, ಮೈಸೂರು

ತಳ ಸಮುದಾಯಗಳನ್ನು ರಕ್ಷಣೆ ಮಾಡುವವರು ಯಾರು?

ಮಾನ್ಯರೆ,

ದೇಶದಲ್ಲಿ, ಜೀತ ಪದ್ಧತಿ ಇನ್ನೂ ಜೀವಂತವಾಗಿದೆ ಎಂಬುದಕ್ಕೆ ಮೈಸೂರು ಜಿಲ್ಲೆಯ ಟಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಬೇವಿನಹಳ್ಳಿ ಗ್ರಾಮದ ಹೊರವಲಯದಲ್ಲಿ ಬಾಲ ಕಾರ್ಮಿಕರು ಸೇರಿದಂತೆ 18 ಜನರು ಕಳೆದ ಹಲವಾರು ವರ್ಷಗಳಿಂದ ಜೀತಕ್ಕಿದ್ದದ್ದು ಇಟ್ಟಿಗೆ ತಯಾರಿಕೆ ಫ್ಯಾಕ್ಟರಿಯಲ್ಲಿ ಪತ್ತೆಯಾಗಿದೆ. ಇಟ್ಟಿಗೆ ತಯಾರಿಕೆಯ ಮಾಲೀಕರು ಇಬ್ಬರು ದಂಪತಿಗಳಿಗೆ ವಾರಕ್ಕೆ ಒಂದು ಸಾವಿರ ರೂಪಾಯಿ ಕೂಲಿ ನೀಡಿ ಬಲವಂತವಾಗಿ ಕಳೆದ ಐದು ವರ್ಷಗಳಿಂದ ದುಡಿಸಿಕೊಳ್ಳುತ್ತಿದ್ದರು ಎನ್ನಲಾಗಿದೆ. ಮತ್ತು ಕೆಲವು ಬಾರಿ ಮಾಲೀಕರು ಹಲ್ಲೆ ಮಾಡುತ್ತಿದ್ದರು ಎಂದು ಹೇಳಲಾಗುತ್ತಿದೆ. ವಿಷಯ ತಿಳಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ (ಡಿಎಲ್‌ಎಸ್‌ಎ) ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಿ ಬಾಲ ಕಾರ್ಮಿಕರು ಸೇರಿದಂತೆ 18 ಜನರನ್ನು ರಕ್ಷಣೆ ಮಾಡಿದ್ದಾರೆ. ಈ ಕೂಲಿಕಾರರು ತಳ ಸಮುದಾಯಕ್ಕೆ ಸೇರಿದವರು. ಇದು ಬೆಳಕಿಗೆ ಬಂದಿರುವುದು. ರಾಜ್ಯದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿನಿಧಿಸುವ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಅಧಿಕಾರಕ್ಕೆ ಬರಲು ಅಹಿಂದ ಹೆಸರಿನಲ್ಲಿ ತಳಸಮುದಾಯಗಳ ಮತ ಬೇಕು. ನಂತರ ತಳಸಮುದಾಯಗಳನ್ನು ರಕ್ಷಣೆ ಮಾಡುವವರು ಯಾರು?. ಓಟು ನಮ್ಮದು ಅಧಿಕಾರ ನಿಮ್ಮದು ಎನ್ನುವಂತಾಗಿದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು


ಬ್ರಿಟನ್ ಪ್ರಧಾನಿಯವರ ಮಾದರಿ ನಡೆ

ಮಾನ್ಯರೆ,

ಬ್ರಿಟನ್ನಿನ ಪ್ರಧಾನ ಮಂತ್ರಿ ಹಾಗೂ ಆಡಳಿತಾರೂಢ ಲೇಬರ್ ಪಕ್ಷದ ನಾಯಕ ಕೀರ್ ಸ್ಟಾರ್ಮರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹೇಳಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಕುಸಿಯುತ್ತಿರುವ ತಮ್ಮ ಜನಪ್ರಿಯತೆ ಹಾಗೂ ಆಂತರಿಕ ಒತ್ತಡಗಳಿಗೆ ಮಣಿದು ತಾವು ರಾಜೀನಾಮೆ ನೀಡಲು ನಿರ್ಧರಿಸಿರುವುದಾಗಿ ಹೇಳಿರುವ ಸ್ಟಾರ್ಮರ್, ಸುಗಮ ಅಧಿಕಾರ ಹಸ್ತಾಂತರಕ್ಕೆ ಅಗತ್ಯ ಕ್ರಮ ಕೈಗೊಳ್ಳುವುದಾಗಿಯೂ ಮತ್ತು ಹೊಸ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡುವುದಾಗಿಯೂ ಹೇಳಿದ್ದಾರೆ.

ಹಾಗೆಯೇ ದೇಶದ ಹಿತಕ್ಕಾಗಿ ತಾವು ಯಾವುದೇ ತ್ಯಾಗಕ್ಕೂ ಸಿದ್ಧ ಎಂದು ಹೇಳಿದ್ದಾರೆ. ಜಗತ್ತಿನ ಇಂದಿನ ವಿದ್ಯಮಾನವನ್ನು ಅವಲೋಕಿಸಿದಾಗ, ಒಮ್ಮೆ ಅಧಿಕಾರಕ್ಕೆ ಅಂಟಿಕೊಂಡ ನಾಯಕರನ್ನು ಪದವಿಯಿಂದ ಇಳಿಸುವುದು ಭಗೀರಥ ಪ್ರಯತ್ನದಂತಾಗುತ್ತದೆ. ಹೀಗಿರುವಾಗ, ತಮ್ಮ ಜನಪ್ರಿಯತೆ ಕುಸಿಯುತ್ತಿರುವುದನ್ನು ಕಂಡು ಸ್ವಯಂ ಪ್ರೇರಿತರಾಗಿ ರಾಜೀನಾಮೆ ನಿರ್ಧಾರ ಪ್ರಕಟಿಸಿರುವ ಬ್ರಿಟನ್ ಪ್ರಧಾನಿ ನಿಜಕ್ಕೂ ಅಭಿನಂದನಾರ್ಹರು. ಅಂದ ಹಾಗೆ ಎಲ್ಲಾ ಪ್ರಜಾಪ್ರಭುತ್ವಗಳ ತಾಯ್ನಾಡು (mother of all democracies) ಎಂದು ಕರೆಯಲ್ಪಡುವ ಬ್ರಿಟನ್ನಿನಲ್ಲಿ ಕಳೆದ 10 ವರ್ಷಗಳಲ್ಲಿ ಒಂದಲ್ಲಾ ಒಂದು ಕಾರಣಕ್ಕಾಗಿ 06 ಜನ ಪ್ರಧಾನಿಗಳು ರಾಜೀನಾಮೆ ನೀಡಿದ್ದಾರೆ. ಇವರ ಪೈಕಿ ಭಾರತೀಯ ಮೂಲದ ರಿಷಿ ಸುನಕ್ (2022ರ ಅಕ್ಟೋಬರ್‌ನಲ್ಲಿ) ಕೂಡ ಒಬ್ಬರು ಎಂಬುದು ಇಲ್ಲಿ ಉಲ್ಲೇಖನಾರ್ಹವಾಗಿದೆ. ಇಷ್ಟಾದರೂ ಬ್ರಿಟನ್ನಿನ ಪ್ರಜಾಪ್ರಭುತ್ವ ಹೆಚ್ಚು ಹೆಚ್ಚು ಬಲಿಷ್ಠವಾಗುತ್ತಿರುವುದು ಮತ್ತೊಂದು ಶ್ಲಾಘನೀಯ ಸಂಗತಿ.


–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಸದ್ಗುರು
ಸಂಸ್ಥಾಪಕರು, ಇಶಾ ಫೌಂಡೇಷನ್

ಅನುಭಾವದ ಚಿಂತನೆಗಳು

ನಗು ನಿಜವಾಗಿಯೂ ಅತ್ಯುತ್ತಮವಾದ ಔಷಧವೇ?



ಆನಂದದ ಒಂದು ಅಭಿವ್ಯಕ್ತಿ

ಬಹಳ ಕಾಲದಿಂದಲೂ ನಗುವು ಒಂದು ಅತ್ಯುತ್ತಮವಾದ ಔಷಧವೆಂದು ಜನರು ಹೇಳುತ್ತಾ ಬಂದಿದ್ದಾರೆ. ಇದರರ್ಥ, ಆನಂದದಿಂದ ಇರುವವರು ಸ್ವಾಭಾವಿಕವಾಗಿ ತಮ್ಮನ್ನು ತಾವು ಗುಣಪಡಿಸಿಕೊಳ್ಳುತ್ತಾರೆ ಎಂಬುದನ್ನು ಎಲ್ಲೋ ಯಾರೋ ತಿಳಿದುಕೊಂಡಿದ್ದಾರೆ ಎಂದಾಯಿತು.

ನೀವು ಆರೋಗ್ಯದಿಂದಿದ್ದೀರೋ ಅಥವಾ ಅನಾರೋಗ್ಯದಿಂದ ನರಳುತ್ತಿದ್ದೀರೋ ಎನ್ನುವುದು ನಿಮ್ಮ ಶರೀರವು ಎಷ್ಟು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಅದರ ಕಾರ್ಯನಿರ್ವಹಣೆಯು ಉತ್ತಮವಾಗಿದ್ದರೆ, ಅದನ್ನು ಆರೋಗ್ಯವೆಂದು, ಇಲ್ಲದಿದ್ದರೆ ಅದನ್ನು ಅನಾರೋಗ್ಯವೆಂದೂ ಕರೆಯುತ್ತೇವೆ. ನೀವು ಆನಂದವಾಗಿದ್ದಾಗ ನಿಮ್ಮ ಭೌತಿಕ ಶರೀರವು ಅತ್ಯಮೋಘವಾದ ರೀತಿಯಲ್ಲಿ ಕೆಲಸ ಮಾಡುತ್ತದೆ. ನಿಮ್ಮ ರೋಗವನ್ನು ಗುಣಪಡಿಸುವುದು ನಗುವಲ್ಲ; ಅದನ್ನು ಗುಣಪಡಿಸುವುದು ಆನಂದ. ಆದರೆ, ನಗು ಎಂದರೆ ಆನಂದವಾಗಿರುವುದು ಎಂಬುವಷ್ಟರ ಮಟ್ಟಿಗೆ ಅವೆರಡೂ ಕೂಡಿಕೊಂಡುಬಿಟ್ಟಿದೆ.

ನಗುವು ಒಂದು ಬಂಧನವಾಗಿಯೂ ಬಿಡಬಹುದು. ಆನಂದವಾಗಿರುವುದು ಎಂದರೆ ನೀವು ಯಾವಾಗಲೂ "ಹ್ಹಹ್ಹಹ್ಹ" ಎಂದು ನಗುತ್ತಿರಬೇಕು ಎಂದು ನೀವು ನಂಬಿದ್ದರೆ, ನೀವು ತುಂಬಾ ಹಾಸ್ಯಾಸ್ಪದವಾಗಿಬಿಡುತ್ತೀರಿ. ಏಕೆಂದರೆ, ನೀವು ಯಾವುದೇ ಸಂದರ್ಭದ ಗಹನತೆ ಮತ್ತು ವ್ಯಾಪ್ತಿಯನ್ನು ಅರಿಯದೆ, ಎಲ್ಲಾ ಸಂಧರ್ಭಗಳಲ್ಲೂ "ಹ್ಹಹ್ಹಹ್ಹ" ಎಂದು ನಗುತ್ತಿರುತ್ತೀರಿ.

ಆನಂದದ ಅರ್ಥ ನಗುವಲ್ಲ. ಆನಂದವೆನ್ನುವುದು ಪ್ರತಿಯೊಂದು ಸಂಭವನೀಯ ರೀತಿಯಲ್ಲೂ ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳಬಹುದು–ಅದು ಯಾವುದೇ ಒಂದು ನಿರ್ದಿಷ್ಟ ರೀತಿಯಲ್ಲಿರಬೇಕಿಲ್ಲ. ನಗುವು ಅದರ ಒಂದು ಅಭಿವ್ಯಕ್ತಿಯಾಗಬಹುದು, ಮೌನವು ಅದರ ಇನ್ನೊಂದು ಅಭಿವ್ಯಕ್ತಿಯಾಗಬಹುದು. ಆನಂದವು ನಿಮ್ಮಲ್ಲಿ ಸ್ಥಿರತೆ ಉಂಟುಮಾಡಬಹುದು ಅಥವಾ ಅದು ನಿಮ್ಮನ್ನು ಕ್ರಿಯಾಶೀಲರನ್ನಾಗಿಸಬಹುದು ಅಥವಾ ಅದು ನಿಮ್ಮಲ್ಲಿ ಕಣ್ಣೀರನ್ನು ತರಿಸಬಹುದು.

ಗೌತಮ ಬುದ್ಧನು ಆನಂದದ ಮೂರ್ತರೂಪವಾಗಿದ್ದರೂ ಸಹ, ಅವನು ನಗುತ್ತಿರುವುದನ್ನು ಯಾವ ಸಮಯದಲ್ಲಿಯೂ ಯಾರೂ ನೋಡಿರಲಿಲ್ಲ. ಗೌತಮನು ಕೇಕೆ ಹಾಕಿ ನಗಲಿಲ್ಲ; ಅಥವಾ ವ್ಯಕ್ತವಾಗುವ ರೀತಿಯಲ್ಲಿ ಮುಗುಳ್ನಗೆಯನ್ನೂ ಬೀರಲಿಲ್ಲ; ಅವನ ಮಂದಹಾಸವೂ ಬಹಳ ಚಿಕ್ಕದಾಗಿದ್ದಿತು. ಆನಂದವೆಂದರೆ ನಗು ಅಥವಾ ಮುಗುಳ್ನಗೆ ಎಂದರ್ಥವಲ್ಲ. ಆನಂದವೆಂದರೆ ನೀವು ಜೀವನದ ಅಂತರ್ಯದಲ್ಲಿದ್ದೀರಿ ಎಂದರ್ಥ.

ಆನಂದ ಎಂದರೇನು?

ಆನಂದವೆಂದರೆ, ಮೂಲಭೂತವಾಗಿ ನೀವು ಜೀವನದಲ್ಲಿ ಆಳವಾಗಿ ಬೇರೂರಿದ್ದೀರಿ ಎಂದರ್ಥ. ಕೇವಲ ಅದರ ಮೇಲ್ಮೈಯಲಲ್ಲ. ನೀವು ಆನಂದದ ಮೂಲದಲ್ಲಿದ್ದೀರಿ, ಆದ ಕಾರಣ ನೀವೇ ಆನಂದ. ಜನರು ಆನಂದವನ್ನು ಪಡೆಯಲು ವಿರುದ್ಧ ದಿಕ್ಕಿನಲ್ಲಿ ಯಾವಾಗಲೂ ಪ್ರಯತ್ನಿಸುತ್ತಿದ್ದಾರೆ. ಕೆಲವರು ಮದ್ಯಪಾನ ಮಾಡುವುದು ಆನಂದವೆಂದುಕೊಂಡರೆ, ಇನ್ನು ಕೆಲವರು ನಗುವುದನ್ನು ಆನಂದವೆಂದು ಕೊಳ್ಳುತ್ತಾರೆ. ನಿಮಗೇ ಗೊತ್ತಿಲ್ಲ, ಕೆಲವರು ನಗುತ್ತಿರುವ ಜನರ ಒಂದು ಸಮಾಜವನ್ನೇ ಕಟ್ಟಿದ್ದಾರೆ. ಬೀದಿಯಲ್ಲಿ ಎಲ್ಲೆಡೆಯೂ ಅವರು "ಹಹ್ಹಾ, ಹೋಹ್ಹೋ, ಹೀಹ್ಹೀ!" ಎಂದು ನಗುತ್ತಿರುತ್ತಾರೆ. ಆರಂಭದಲ್ಲಿ ಅದು ವಿನೋದವೆನಿಸಬಹುದು, ಆದರೆ ನೀವು ಎಲ್ಲ ಸಮಯದಲ್ಲೂ ನಗುತ್ತಿರುವವರೊಟ್ಟಿಗೆ ಬದುಕಬೇಕೆಂದಾದರೆ, ಅವರ ನಗುವನ್ನು ನಿಲ್ಲಿಸುವ ಸಲುವಾಗಿ ಒಂದು ದಿನ ನಿಮಗವರನ್ನು ಕೊಂದುಬಿಡಬೇಕು ಎಂದೆನಿಸಬಹುದು!

> “ ಆನಂದವೆನ್ನುವುದು ನೀವು ಮಾಡಬೇಕಾದಂತಹ ವಿಷಯವಲ್ಲ. ನಿಮ್ಮೊಳಗೆ ತುಡಿಯುತ್ತಿರುವ ಜೀವದ ಮೂಲ ಪ್ರಕ್ರಿಯೆಗೆ ನೀವು ಯಾವುದೇ ಅಡೆತಡೆಗಳನ್ನು ಒಡ್ಡದಿದ್ದರೆ, ಆನಂದವೆನ್ನುವುದು ಒಂದು ಸ್ವಾಭಾವಿಕ ಫಲಿತಾಂಶ. ಆನಂದವೆನ್ನುವುದು ಒಂದು ಸಾಧನೆಯಲ್ಲ, ಆನಂದವು ನಿಮ್ಮ ಮೂಲ ಸ್ಥಿತಿ.

ನಗುವು ಒಂದು ಪರಿಣಾಮ

ಇತ್ತೀಚಿನ ದಿನಗಳಲ್ಲಿ 'ನಗುವ ಯೋಗ' ರೀತಿಯ ಯೋಗವು ಚಾಲ್ತಿಯಲ್ಲಿದೆ. ಒಬ್ಬರ ಎದುರು ಇನ್ನೊಬ್ಬರು ನಿಂತು, ನೀವು "ಹ್ಹಿ, ಹ್ಹಿ, ಹ್ಹಿ" ಎನ್ನಿರಿ, ನಾನು "ಹ್ಹೆ ಹ್ಹೆ ಹ್ಹೆ" ಎಂದು ನಗುತ್ತೇನೆ ಎಂಬ ರೀತಿಯದ್ದು. ಇದು ಹುಚ್ಚುತನವಷ್ಟೆ. ಅಮೆರಿಕನ್ ಶಿಕ್ಷಕನೊಬ್ಬ ನೀವು ದಿನಕ್ಕೆ ಹತ್ತು ನಿಮಿಷಗಳಷ್ಟು ಕಾಲ ನಗಬೇಕು ಎಂದು ಉಪದೇಶ ಮಾಡಿರುವುದನ್ನು ನಾನು ಎಲ್ಲೋ ಓದಿದೆ. ನೀವು ಹಾಗೇನಾದರೂ ಮಾಡಿದ್ದೇ ಆದರೆ, ಶೀಘ್ರದಲ್ಲೇ ಹುಚ್ಚಾಸ್ಪತ್ರೆಯನ್ನು ಸೇರುತ್ತೀರಿ!

ನೋಡಿ, ನಿಮ್ಮ ತೋಟದಲ್ಲಿ ನಿಮಗೆ ಹೂಗಳಿರಬೇಕು ಎಂದಾದರೆ, ನೀವು ಪ್ಲ್ಯಾಸ್ಟಿಕ್ ಹೂಗಳನ್ನು ಖರೀದಿಸಿ, ಅವುಗಳನ್ನು ನಿಮ್ಮ ತೋಟದಲ್ಲಿರಿಸುವುದಿಲ್ಲ ತಾನೇ? ಅದಕ್ಕಾಗಿ ನೀವು ಹೂಗಳಂತೆ ಕಾಣಿಸದಂತಹ ವಿಷಯಗಳಲ್ಲಿ ತೊಡಗಿಸಿಕೊಳ್ಳಬೇಕು –ಮಣ್ಣು, ಗೊಬ್ಬರ, ನೀರು, ಸೂರ್ಯನ ಬೆಳಕು ಸರಿಯಾಗಿ ಇರುವಂತೆ ನೋಡಿಕೊಳ್ಳಬೇಕು. ಇವುಗಳಲ್ಲಿ ಯಾವುದೂ ಸಹ ಹೂಗಳಂತೆ ಕಾಣಿಸುವುದಿಲ್ಲ, ಭಾಸವಾಗುವುದಿಲ್ಲ ಅಥವಾ ಪರಿಮಳವನ್ನೂ ಬೀರುವುದಿಲ್ಲ, ಆದರೆ ನೀವು ಈ ವಿಷಯಗಳನ್ನು ಸರಿಯಾಗಿ ನಿರ್ವಹಿಸಿದ್ದೇ ಆದರೆ ಹೂಗಳು ಅರಳುತ್ತವೆ. ಅಂತೆಯೇ "ಪ್ರತಿದಿನ, ನಾನು ನಗುತ್ತೇನೆ" ಎಂಬ ನಿಲುವನ್ನು ನೀವು ತೆಗೆದುಕೊಂಡ ಮಾತ್ರಕ್ಕೆ ನೀವು ನಗುವುದಿಲ್ಲ. ನಿಮ್ಮೊಳಗೆ ನೀವು ಒಂದು ರೀತಿಯ ಸವಿಯಾದ ಸ್ಥಿತಿಯಲ್ಲಿದ್ದರೆ, ಏತಕ್ಕೆ ಎಂದು ತಿಳಿಯದೆಯೇ ಮಂದಹಾಸವೊಂದು ನಿಮ್ಮ ಮುಖದಲ್ಲಿ ಅರಳುತ್ತದೆ. ಒಂದು ಸಣ್ಣ ಕಚಗುಳಿಯಿಂದ ನೀವು ನಗುತ್ತೀರಿ. ನಗು ಒಂದು ಪರಿಣಾಮ. ಆ ಪರಿಣಾಮವನ್ನು ಸೃಷ್ಟಿಸಲು ಪ್ರಯತ್ನಿಸಬೇಡಿ. ಅದರ ಪ್ರಕ್ರಿಯೆಯತ್ತ ಗಮನಹರಿಸಿ, ಅದರ ಮೂಲದತ್ತ ಗಮನಹರಿಸಿ.

ಆನಂದವೆನ್ನುವುದು ನೀವು ಮಾಡಬೇಕಾದಂತಹ ವಿಷಯವಲ್ಲ. ನಿಮ್ಮೊಳಗೆ ತುಡಿಯುತ್ತಿರುವ ಜೀವದ ಮೂಲ ಪ್ರಕ್ರಿಯೆಗೆ ನೀವು ಯಾವುದೇ ಅಡೆತಡೆಗಳನ್ನು ಒಡ್ಡದಿದ್ದರೆ, ಆನಂದವೆನ್ನುವುದು ಒಂದು ಸ್ವಾಭಾವಿಕ ಫಲಿತಾಂಶ. ಆನಂದವೆನ್ನುವುದು ಒಂದು ಸಾಧನೆಯಲ್ಲ, ಆನಂದವು ನಿಮ್ಮ ಮೂಲ ಸ್ಥಿತಿ. ಯೋಗದಲ್ಲಿ, ನಾವು ಮಾನವ ದೇಹವನ್ನು ಐದು ಶರೀರಗಳ ಒಂದು ರಚನೆಯಾಗಿ ನೋಡುತ್ತೇವೆ: ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ ಮತ್ತು ಆನಂದಮಯ ಕೋಶ. ಆದ್ದರಿಂದ ನಿಮ್ಮ ಅಂತರಾಳವೇ ಆನಂದ. ದೇಹದ ಮೊದಲ ಮೂರು ಆಯಾಮಗಳು–ಭೌತಿಕ, ಮಾನಸಿಕ ಮತ್ತು ಪ್ರಾಣಶಕ್ತಿ ಶರೀರಗಳು ಸರಿಯಾದ ಹೊಂದಾಣಿಕೆಯಲ್ಲಿದ್ದರೆ, ನಿಮ್ಮ ಅಂತರಾಳವು, ಅಂದರೆ ಪರಮಾನಂದವು ಸ್ವಾಭಾವಿಕವಾಗಿ ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತದೆ.

ಮಾವು ಬೆಳೆಗಾರರಿಗೆ ಕೇಂದ್ರದ ಸಹಾಯ ಹಸ್ತ

ಪ್ರತಿ ಕ್ವಿಂಟಲ್‌ಗೆ 1,750 ರೂ.ನಂತೆ 1.30 ಲಕ್ಷ ಮೆಟ್ರಿಕ್ ಟನ್ ಮಾವು ಖರೀದಿ



ಕೇಂದ್ರದ ಕೃಷಿ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಅವರೊಂದಿಗೆ ಕೇಂದ್ರ ಸಚಿವ ಕುಮಾರಸ್ವಾಮಿ ಚರ್ಚಿಸಿದರು.

ಬೆಂಗಳೂರು, ಜೂ.25(ಕೆಎಂಶಿ)– ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರೊಂದಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಚರ್ಚೆ ನಡೆಸಿದ ಫಲವಾಗಿ ಕೇಂದ್ರ ಸರ್ಕಾರ ರಾಜ್ಯದ ಮಾವು ಬೆಳೆಗಾರರ ನೆರವಿಗೆ ಧಾವಿಸಿದೆ.

ವಾತಾವರಣ ವೈಪರೀತ್ಯ ಮತ್ತು ಬೆಲೆ ಕುಸಿತದಿಂದ ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದ ಮಾವು ಬೆಳೆಗಾರರಿಗೆ ನೆರವಿನ ಹಸ್ತ ಚಾಚಿರುವ ಕೇಂದ್ರ ಸರ್ಕಾರ, ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯಡಿ 1.30 ಲಕ್ಷ ಮೆಟ್ರಿಕ್ ಟನ್ ಮಾವಿಗೆ ಪ್ರತಿ ಕ್ವಿಂಟಾಲ್‌ಗೆ 1,750 ರೂ. ನೆರವು ಘೋಷಿಸಿದೆ.

ಈ ಸಂಬಂಧ ಸಚಿವ ಕುಮಾರಸ್ವಾಮಿ, ಬುಧವಾರ ನವದೆಹಲಿಯಲ್ಲಿ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿ, ಮಾವು ಬೆಳೆಗಾರರ ರಕ್ಷಣೆಗೆ ತಕ್ಷಣ ಧಾವಿಸುವಂತೆ ಮನವಿ ಮಾಡಿದ್ದರು.

ಮನವಿಗೆ ಸ್ಪಂದಿಸಿದ ಸಚಿವ ಚೌಹಾಣ್, ಮಾವು ಬೆಳೆಗಾರರಿಗೆ ಆರ್ಥಿಕ ನೆರವು ಘೋಷಿಸಿದ್ದಾರೆ.

ಧಾರಣೆ ಕುಸಿತ ಹಿನ್ನೆಲೆಯಲ್ಲಿ ಕೋಲಾರ ಜಿಲ್ಲೆ ಮಾವು ಬೆಳೆಗಾರರು ಪ್ರತಿಭಟನೆ ಆರಂಭಿಸುತ್ತಿದ್ದಂತೆ ಅಂದು ಸಂಜೆಯೇ ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಕೇಂದ್ರ ಸರ್ಕಾರದ ಈ ಉಪಕ್ರಮದಿಂದ ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳ ಮಾವು ಬೆಳೆಗಾರರಿಗೆ ನೆರವಾಗಲಿದೆ.

ಕೇಂದ್ರ ಕೃಷಿ ಸಚಿವರಿಗೆ ಧನ್ಯವಾದ ತಿಳಿಸಿರುವ ಕುಮಾರಸ್ವಾಮಿ, ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆಯಡಿ ಬೆಲೆ ಕೊರತೆ ಪಾವತಿ ಯೋಜನೆ ಜಾರಿಗೆ ತ್ವರಿತ ನಿರ್ಧಾರ ಕೈಗೊಳ್ಳಲಾಗಿದೆ.


ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ ಮಾರ್ಗಸೂಚಿಯಂತೆ ಪ್ರಸಕ್ತ ಹಂಗಾಮಿನಲ್ಲಿ ತೋತಾಪುರಿ ಮಾವಿಗೆ ಬೆಲೆ ಕೊರತೆ ಪಾವತಿ ಜಾರಿಗೆ ಬರಲಿದೆ, ಗರಿಷ್ಠ 1,30,000 ಮೆಟ್ರಿಕ್ ಟನ್‌ವರೆಗೆ ಪ್ರತೀ ಕ್ವಿಂಟಲ್‌ಗೆ 1,750 ರೂ. ಸಹಾಯಧನ ಘೋಷಣೆ ಮಾಡಿ ಮಾರ್ಗಸೂಚಿ ಹೊರಡಿಸಲಾಗಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿ ನಾಯಕತ್ವದಲ್ಲಿ ರೈತರನ್ನು ಬೆಲೆ ಕುಸಿತ ಹಾಗೂ ಹವಾಮಾನ ವೈಪರೀತ್ಯದಂತಹ ಸಂಕಷ್ಟಗಳಿಂದ ಸಕಾಲದಲ್ಲಿ ಪಾರು ಮಾಡಲು ಕೇಂದ್ರ ಸರ್ಕಾರ ಅವಿರತ ಶ್ರಮಿಸುತ್ತಿದೆ ಮತ್ತು ರೈತರ ಹಿತ ರಕ್ಷಣೆಗೆ ಬದ್ಧವಾಗಿದೆ ಎಂದು ಕುಮಾರಸ್ವಾಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.28, ದಿ ಆಕ್ಮಿ ಶಾಲೆಯಲ್ಲಿ ಯೋಗ ದಿನ

ಮೈಸೂರು: ಮೈಸೂರಿನ ನಿವೇದಿತಾ ನಗರದಲ್ಲಿರುವ ದಿ ಆಕ್ಮಿ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಜೂ.28 ರಂದು ಶಾಲೆಯ ಆವರಣದಲ್ಲಿ ಬೆಳಗ್ಗೆ 7 ಗಂಟೆಗೆ ಆಯೋಜಿಸಲಾಗಿದೆ ಎಂದು ಶಾಲೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಗಳಿಂದ ಆಶೀರ್ವಾದ



ಮೈಸೂರಿನ ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರದಲ್ಲಿ ಶ್ರೀವೀರಾಂಜನೇಯ ಮಹಾ ಸಂಸ್ಥಾನಮ್ ಬಂಗಾರಮಕಿ ಪೀಠಾಧಿಪತಿ ಶ್ರೀ ಮಾರುತಿ ಗುರೂಜಿ ಅವರ ಸಾನ್ನಿಧ್ಯದಲ್ಲಿ ನಡೆಯುತ್ತಿರುವ ಶ್ರೀರಾಮತಾರಕ ಹೋಮ, ಸಿಂಧೂರ ಅರ್ಚನೆ, ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಭಾಗವಹಿಸಿ ಆಶೀರ್ವಾದ ಪಡೆದರು. ಈ ವೇಳೆ ಸಂಚಾಲಕರಾದ ಮನು.ವಿ, ಪ್ರದೀಪ್‌ಗೌಡ, ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಟಿ.ಎಸ್.ಅರುಣ್ ಇನ್ನಿತರರಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ಬಿಲ್ಡರ್ ಅಸೋಸಿಯೇಷನ್ ಆಫ್ ಇಂಡಿಯಾ ವತಿಯಿಂದ 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿರುವ ಮೈಸೂರು ಜಿಲ್ಲೆಯ ಕಟ್ಟಡ ಕಾರ್ಮಿಕರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಶೈಕ್ಷಣಿಕ ದಾಖಲೆಗಳೊಂದಿಗೆ ಜು.4 ರೊಳಗೆ ಇಂಡಸ್ಟ್ರೀಯಲ್ ಸಬರ್ಬ್, ವಿಶ್ವೇಶ್ವರನಗರ 2ನೇ ಹಂತ ಅಕ್ಕ ಮಹಾದೇವಿ ರಸ್ತೆಯಲ್ಲಿರುವ ಬಿಎಐ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಮೊ: 9448434061. ಸಂಪರ್ಕಿಸಬಹುದು.

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವವರು ಪತ್ರಿಕೆ ಓದುವುದು ಒಳ್ಳೆಯದು

● ಮೈಸೂರು ನಗರ ಡಿಸಿಪಿ ಡಾ.ಹರ್ಷ ಪ್ರಿಯಂವದ ಕಿವಿಮಾತು ● ಮುಖ್ಯವಾಗಿ ಮಾನಸಿಕವಾಗಿ ಸಜ್ಜಾಗಿರಬೇಕು



ಕರ್ನಾಟಕ ರಾಜ್ಯ ಮುಕ್ತ ವಿವಿಯ ಗಂಗಾ ಸಭಾಂಗಣದಲ್ಲಿ ಗುರುವಾರ ನಡೆದ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ 'ಮುಕ್ತಭಂಡಾರ' ಅಧ್ಯಯನ ಪುಸ್ತಕವನ್ನು ಎಡಿಸಿ ಆರ್.ಐಶ್ವರ್ಯ ಬಿಡುಗಡೆ ಮಾಡಿದರು. ಈ ವೇಳೆ ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಡಿಸಿಪಿ ಡಾ.ಹರ್ಷ ಪ್ರಿಯಂವದ ಮತ್ತಿತರರಿದ್ದರು.

ಮೈಸೂರು, ಜೂ.25(ಎಂಕೆ)– ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳು ನಿಗದಿತ ವಿಷಯಗಳ ಜೊತೆಗೆ ನಿಯಮಿತವಾಗಿ ದಿನ ಪತ್ರಿಕೆಗಳನ್ನು ಓದಬೇಕು ಎಂದು ಮೈಸೂರು ನಗರ ಪೊಲೀಸ್ ಉಪ ಆಯುಕ್ತೆ ಡಾ.ಹರ್ಷ ಪ್ರಿಯಂವದ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗಂಗಾ ಸಭಾಂಗಣದಲ್ಲಿ ಜ್ಞಾನಬುತ್ತಿ ಶೈಕ್ಷಣಿಕ ಸಂಸ್ಥೆ ಸಹಯೋಗದೊಂದಿಗೆ ಆಯೋಜಿಸಿದ್ದ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸ್ಪರ್ಧಾತ್ಮಕ ಪರೀಕ್ಷೆಗಳು ನಮ್ಮ ಬದುಕನ್ನೇ ಬದಲಿಸಲಿವೆ. ಆದ್ದರಿಂದ ವಿದ್ಯಾರ್ಥಿಗಳು ತಮ್ಮ ದೈನಂದಿನ ಪಠ್ಯಗಳ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ ಪುಸ್ತಕಗಳನ್ನು ಕಡ್ಡಾಯವಾಗಿ ಓದಬೇಕು ಎಂದರು.

ಪ್ರತಿಯೊಬ್ಬರ ಜೀವನದಲ್ಲಿಯೂ ಸಾಧನೆ ಎಂಬುದು ಕಷ್ಟದ ದಾರಿ. ಪರಿಶ್ರಮ ಮತ್ತು ಶ್ರದ್ಧೆ ಸಾಧನೆಯ ಭಾಗವಾಗಿದ್ದು, ಪದವಿ ಪಡೆಯುವ ಮುನ್ನವೇ ನಾವು ಮುಂದೆ ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಯೋಚಿಸಬೇಕು ಮತ್ತು ಸರಿಯಾದ ಆಯ್ಕೆಯನ್ನು ಮಾಡಬೇಕು. ಸ್ಪರ್ಧಾತ್ಮಕ ಪರೀಕ್ಷೆಗೆ ಪೂರ್ವ ಸಿದ್ಧತೆ ನಡೆಸುವ ವಿದ್ಯಾರ್ಥಿಗಳು ಮಾನಸಿಕವಾಗಿ ಪರೀಕ್ಷೆ ಎದುರಿಸಲು ಸಿದ್ಧವಾಗಿರಬೇಕು ಎಂದು ಕಿವಿಮಾತು ಹೇಳಿದರು.

ಸ್ಪರ್ಧಾತ್ಮಕ ಯುಗದಲ್ಲಿ ನಿರಂತರ ಅಧ್ಯಯನಶೀಲತೆ, ಕಠಿಣ ಪರಿಶ್ರಮ ಮುಖ್ಯ. ವಿದ್ಯಾರ್ಥಿಗಳು ಗಮನ ಕೇಂದ್ರೀಕರಿಸಿ ಛಲವನ್ನು ಬೆಳೆಸಿಕೊಂಡು ಅಂದುಕೊಂಡಿದ್ದನ್ನು ಸಾಧಿಸುವ ಕೆಲಸ ಮಾಡಬೇಕು. ಮೊದಲ ಬಾರಿ ವಿಫಲರಾಗಬಹುದು. ಆದರೆ ಸ್ಪರ್ಧೆಯಿಂದ ದೂರ ಉಳಿಯದೇ ಕ್ರಮಬದ್ಧ ಅಧ್ಯಯನ ನಿಮ್ಮದಾಗಿದ್ದರೆ ಯಶಸ್ಸು ಕನಸಾಗಿ ಉಳಿಯಲಾರದು. ನನಸಾಗಿ ನಿಮಗೆ ತೃಪ್ತಿ ನೀಡುತ್ತದೆ. ಗುರಿ ಮುಟ್ಟಲು ನಿಖರ ಓದಿನ ದಾರಿಯಲ್ಲಿ ಸಾಗುತ್ತಿದ್ದೇವೆಯೇ ಎಂಬುದನ್ನು ದೃಢಪಡಿಸಿಕೊಳ್ಳುತ್ತ ಮುಂದೆ ಸಾಗಿ ಎಂದು ಪ್ರೋತ್ಸಾಹಿಸಿದರು.

ನಮ್ಮ ತಂದೆ–ತಾಯಿ ಇಬ್ಬರೂ ವೈದ್ಯರಾಗಿದ್ದರಿಂದ ನಾನು ಕೂಡ ವೈದ್ಯೆ ಆಗಬೇಕು ಎಂಬುದು ಕನಸಾಗಿತ್ತು. ಆದರೆ, ನನಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಮೇಲೆ ಆಸಕ್ತಿ ಇದ್ದಿದ್ದರಿಂದ ಯುಪಿಎಸ್‌ಸಿ ಪರೀಕ್ಷೆ ಬರೆದು, ಕೊನೆಗೆ ಐಪಿಎಸ್ ಅಧಿಕಾರಿಯಾಗಲೂ ಸಾಧ್ಯವಾಯಿತು ಎನ್ನುತ್ತಾ ತಮ್ಮ ಓದಿನ ದಿನಗಳನ್ನು ಮೆಲುಕು ಹಾಕಿದರು.

'ಮುಕ್ತಭಂಡಾರ' ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಪರೀಕ್ಷಾ ತರಬೇತಿ ಶಿಬಿರಗಳು ಪರೀಕ್ಷೆಗೆ ಮಾತ್ರ ಸೀಮಿತವಾಗಿರದೆ ವ್ಯಕ್ತಿತ್ವ ವಿಕಸನ ಮತ್ತು ಆತ್ಮವಿಶ್ವಾಸ ತುಂಬುವ ವೇದಿಕೆಗಳಾಗಿವೆ. ಹಾಗೆಯೇ ಉನ್ನತ ಹುದ್ದೆಗಳನ್ನು ನಿರ್ವಹಿಸುವಾಗ ಸಾಮಾಜಿಕ ಕಳಕಳಿ ಮುಖ್ಯವಾಗಿರಬೇಕು ಎಂದು ತಿಳಿಸಿದರು.

ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಪರೀಕ್ಷಾಂಗ ಕುಲಸಚಿವ ಡಾ.ಸಿಎಸ್. ಆನಂದಕುಮಾರ್, ಹಣಕಾಸು ಅಧಿಕಾರಿ ಡಾ.ಎಸ್. ನಿರಂಜನ್ ರಾಜ್, ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯ ನಾರಾಯಣಗೌಡ, ಸಿದ್ದೇಶ್ ಹೊನ್ನೂರು, ಬಿ.ಗಣೇಶ್ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 26 ಶುಕ್ರವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 71 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ಬರ ಭೀತಿ

ಹಿರಿಯ ಅಧಿಕಾರಿಗಳೊಂದಿಗೆ ಕಂದಾಯ ಸಚಿವರೂ ಆದ ಉಪ ಮುಖ್ಯಮಂತ್ರಿ ಡಾ. ಪರಮೇಶ್ವರ್ ಸಭೆ

ಪರಿಸ್ಥಿತಿ ಎದುರಿಸಲು ಸಜ್ಜಾಗುವಂತೆ ಸಲಹೆ

ಬೆಂಗಳೂರು, ಜೂ.25(ಕೆಎಂಶಿ)– ಜಾಗತಿಕ ಹವಾಮಾನ ವೈಪರೀತ್ಯದ ಭಾಗವಾದ ಸೂಪರ್ ಎಲ್–ನೀನೋ ಪರಿಣಾಮದಿಂದ ರಾಜ್ಯದಲ್ಲಿ ಬರ ಪರಿಸ್ಥಿತಿ ಎದುರಾಗುತ್ತಿದೆ ಎಂದು ಕಂದಾಯ ಸಚಿವಾಲಯ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಎಚ್ಚರಿಸಿದ್ದಾರೆ.



ಡಾ.ಜಿ.ಪರಮೇಶ್ವರ್ ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿರುವುದು.

ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸೂಪರ್ ಎಲ್–ನೀನೋದಿಂದ ರಾಜ್ಯದಲ್ಲಿ ಉಂಟಾಗಬಹುದಾದ ಸಂಭವನೀಯ ಪರಿಣಾಮಗಳ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳನ್ನು ತಕ್ಷಣದಿಂದಲೇ ಕೈಗೊಳ್ಳಿ ಎಂದು ಸೂಚಿಸಿದ್ದಾರೆ.

ಮಳೆ ಕೊರತೆಯಿಂದ ಕೃಷಿ ಮತ್ತು ಕುಡಿಯುವ ನೀರಿಗೆ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ, ಜಲಾಶಯಗಳಲ್ಲಿನ ಸಂಗ್ರಹಿತ ನೀರು ಪೋಲು ಮಾಡದೆ, ಕುಡಿಯುವ ನೀರಿಗೆ ಮಾತ್ರ ಬಳಸಿ ಎಂದಿದ್ದಾರೆ. ಸಂಭವನೀಯ ಬರ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಲಭ್ಯತೆ, ಜಾನುವಾರುಗಳಿಗೆ ಮೇವು, ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ನೀರಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಜಿಲ್ಲಾವಾರು ಕಾರ್ಯಯೋಜನೆ ಸಿದ್ಧಪಡಿಸಿ ಎಂದು ಸೂಚಿಸಿದ್ದಾರೆ.

ಕಾಲಾನುಕಾಲಕ್ಕೆ ಜಿಲ್ಲಾಧಿಕಾರಿ ಮತ್ತು ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಸಲಹೆ–ಸೂಚನೆ ನೀಡಿ, ಜನರು ಸಂಕಷ್ಟಕ್ಕೆ ಸಿಲುಕದಂತೆ ನೋಡಿಕೊಳ್ಳಿ. ಜಲಾಶಯಗಳ ನೀರಿನ ಮಟ್ಟ, ಅಂತರ್ಜಲ ಪರಿಸ್ಥಿತಿ ಹಾಗೂ ನೀರಿನ ಬಳಕೆಯ ಮೇಲ್ವಿಚಾರಣೆ ನಿರಂತರವಾಗಿ ನಡೆಸುವಂತೆ ಜಿಲ್ಲಾಡಳಿತಕ್ಕೆ ಆದೇಶಿಸುವಂತೆ ಹಿರಿಯ ಅಧಿಕಾರಿಗಳಿಗೆ ಸೂಚಿಸಿದರು.

ಯಾವುದೇ ರೀತಿಯ ಪ್ರಕೃತಿ ವಿಕೋಪ ಹಾಗೂ ಬರ ಪರಿಸ್ಥಿತಿ ಎದುರಾದರೂ ಸಾರ್ವಜನಿಕರಿಗೆ ತೊಂದರೆ ಆಗದಂತೆ ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಿ ತ್ವರಿತ ಕ್ರಮ ಕೈಗೊಳ್ಳಬೇಕು.

ಕುಡಿಯುವ ನೀರಿಗಾಗಿ ಕೊಳವೆ ಬಾವಿ ಕೊರೆಸಲು ಅನುಮತಿಯನ್ನು ತ್ವರಿತಗತಿಯಲ್ಲಿ



ನೀಡಬೇಕು. ಇದರಲ್ಲಿ ಯಾವುದೇ ವಿಳಂಬ ಮಾಡಬೇಡಿ. ಕುಡಿಯುವ ನೀರು ಮತ್ತು ಮೇವಿನ ವಿಷಯದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಜೊತೆ ಸಮನ್ವಯತೆ ಅತ್ಯಗತ್ಯವಾಗಿದೆ.

ಜಿಲ್ಲಾಡಳಿತ ಉಳಿದ ವಿಚಾರಗಳನ್ನು ಬದಿಗಿರಿಸಿ, ಬರ ಪರಿಸ್ಥಿತಿ ನಿಭಾಯಿಸಲು ಸನ್ನದ್ಧರಾಗಿ, ಕಾಮಗಾರಿಗಳಿಗೆ ಹಣದ ಕೊರತೆ ಇದ್ದರೆ ತಕ್ಷಣ ಸರ್ಕಾರದ ಗಮನಕ್ಕೆ ತನ್ನಿ ಎಂದಿದ್ದಾರೆ.


ಸದ್ಯಕ್ಕೆ 122 ತಾಲೂಕುಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. 139 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ, 789 ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, 669 ಹಳ್ಳಿಗಳಿಗೆ ಇದರಿಂದ ಪೂರೈಕೆ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರು ಮತ್ತು ಮೇವಿನ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳುವ ಸಾಧ್ಯತೆ ಇದ್ದು, ತಕ್ಷಣ ಅಗತ್ಯ ಕ್ರಮ ಕೈಗೊಳ್ಳಿ ಎಂದಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಮುಂದೆ

ಅಂತೂ ದೇವರಾಜ ಅರಸರ ಹೋಲುವ ಪ್ರತಿಮೆ ಪ್ರತಿಷ್ಠಾಪನೆ

● ಮೊದಲು ಪ್ರತಿಷ್ಠಾಪಿಸಿದ ಪ್ರತಿಮೆ ಬಗ್ಗೆ ಆಕ್ಷೇಪ ವ್ಯಕ್ತವಾಗಿತ್ತು ● ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್‌ರಿಂದ ಮತ್ತೆ ಪ್ರತಿಮೆ ಕೆತ್ತನೆ ● ತೆರವುಗೊಳಿಸುವ ವೇಳೆ ತುಂಡಾದ ಹಳೆ ಪ್ರತಿಮೆ

ಮೈಸೂರು, ಜೂ.25(ಜಿಎ)– ಕೊನೆಗೂ ಸಾಮಾಜಿಕ ನ್ಯಾಯದ ಹರಿಕಾರ ಹಾಗೂ ಮಾಜಿ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರ ಹೊಸ ಬದಲಿ ಪ್ರತಿಮೆಯನ್ನು ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಇಂದು ಸ್ಥಾಪಿಸಲಾಯಿತು.



ದೇವರಾಜ ಅರಸು

ಈ ಹಿಂದೆ ಅನಾವರಣಗೊಂಡಿದ್ದ ದೇವರಾಜ ಅರಸು ಅವರ ಪ್ರತಿಮೆ ಅವರ ವ್ಯಕ್ತಿತ್ವಕ್ಕೆ ಮತ್ತು ಮುಖ ಭಾವಕ್ಕೆ ಹೋಲಿಕೆಯಾಗುತ್ತಿಲ್ಲ ಎಂದು ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಕಳೆದ ವರ್ಷ ನವೆಂಬರ್ 3ರಂದು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಮೆಯನ್ನು ಅನಾವರಣಗೊಳಿಸಿದ್ದರು. ಪ್ರತಿಮೆಯು ದೇವರಾಜ ಅರಸು ಅವರ ಮುಖಚಹರೆಗೆ ಹೋಲಿಕೆಯಾಗುತ್ತಿಲ್ಲ ಎಂದು ವ್ಯಾಪಕ ಅಸಮಾಧಾನ ವ್ಯಕ್ತವಾಗಿತ್ತು.

ನಂತರ ಜಿಲ್ಲಾಡಳಿತ ಬದಲಾವಣೆ ಮಾಡುವುದಾಗಿ ತಿಳಿಸಿತ್ತು. ಆದರೆ, ಈಗಾಗಲೇ ಪ್ರತಿಷ್ಠಾಪಿತ ಪ್ರತಿಮೆಯಲ್ಲೇ ಮಾರ್ಪಾಡಿಗೆ ಅವಕಾಶವಿದೆ ಎಂದು ಅಭಿಪ್ರಾಯಪಡಲಾಗಿತ್ತು. ಅದು ಸಾಧ್ಯವಾಗದ ಹಿನ್ನೆಲೆಯಲ್ಲಿ ನೂತನ ಪ್ರತಿಮೆ ಕೆತ್ತಲು ಅಯೋಧ್ಯೆಯ ಬಾಲರಾಮನ ಪ್ರತಿಮೆ ಕೆತ್ತಿದ್ದ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಜವಾಬ್ದಾರಿ ನೀಡಲಾಗಿತ್ತು.

ಅರುಣ್ ಯೋಗಿರಾಜ್ ಹಾಗೂ ಅವರ ತಂಡ ಪರಿಶ್ರಮ ವಹಿಸಿ, ದೇವರಾಜ ಅರಸು ಅವರ ಹಲವು ಪ್ರತಿಮೆಗಳ ಚಿತ್ರಗಳು, ಅವರ ಧಿರಿಸು, ಅವರ ದೇಹಾಕೃತಿ ಸೇರಿದಂತೆ ಎಲ್ಲಾ ಅಂಶಗಳ ಅಧ್ಯಯನ ಮಾಡಿ, ನಂತರ ಒಂದು ಮಾದರಿ ರೂಪಿಸಿ ಅವರ ಕುಟುಂಬಸ್ಥರು ಹಾಗೂ ಜಿಲ್ಲಾಡಳಿತದ ಮುಂದೆ ಪ್ರಸ್ತುತಪಡಿಸಿದರು. ಇದಕ್ಕೆ ಎಲ್ಲರೂ ಒಪ್ಪಿಗೆ ಸೂಚಿಸಿದ ನಂತರ ಸುಮಾರು 6 ತಿಂಗಳ ಅವಧಿಯಲ್ಲಿ ಕೃಷ್ಣ ಶಿಲೆ ಬಳಸಿ, 10 ಅಡಿ ಎತ್ತರದ ದೇವರಾಜ ಅರಸು ಅವರ ಹೊಸ ಪ್ರತಿಮೆ ಕೆತ್ತನೆ ಕಾರ್ಯ ಪೂರ್ಣಗೊಳಿಸಿದ್ದಾರೆ.



ಅರಸರ ಹಳೇ ಪ್ರತಿಮೆ




ಅರಸುರವರ ಹೊಸ ಪ್ರತಿಮೆ

ತುಂಡಾದ ಹಳೆಯ ಪ್ರತಿಮೆ : ಹೊಸ ಪ್ರತಿಮೆಯನ್ನು ಸ್ಥಾಪಿಸುವ ಮುನ್ನ ■10ನೇ ಪುಟಕ್ಕೆ

ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರರಿಗೆ ಮೈಸೂರು, ಚಾಮರಾಜನಗರ ಉಸ್ತುವಾರಿ

ರಾಮಲಿಂಗಾ ರೆಡ್ಡಿಯವರಿಗೆ ಬೆಂಗಳೂರು ದಕ್ಷಿಣ, ಮಂಡ್ಯ; ಕೃಷ್ಣ ಬೈರೇಗೌಡರಿಗೆ ಬೆಂಗಳೂರು ನಗರ, ಹಾಸನ; ಯು.ಟಿ.ಖಾದರ್‌ಗೆ ಕೊಡಗು, ಉಡುಪಿ, ಉತ್ತರ–ದಕ್ಷಿಣ ಕನ್ನಡ ಜವಾಬ್ದಾರಿ

ಬೆಂಗಳೂರು, ಜೂ. 25(ಕೆಎಂಶಿ)– ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಅವರಿಗೆ ಮೈಸೂರು, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಹೊಣೆಗಾರಿಕೆಯನ್ನು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಹಿಸಿದ್ದಾರೆ.



ಡಾ. ಯತೀಂದ್ರ

ರಾಜ್ಯ ಸಚಿವ ಸಂಪುಟ ವಿಸ್ತರಣೆ ವಿಳಂಬ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ, ತಮ್ಮ ಮಂತ್ರಿಮಂಡಲದ 13 ಸಚಿವರಿಗೂ ಎರಡು–ಮೂರು ಜಿಲ್ಲಾ ಉಸ್ತುವಾರಿ ವಹಿಸಿದ್ದಾರೆ. ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿಯನ್ನು ಜಿಲ್ಲಾ ಉಸ್ತುವಾರಿ ಸಚಿವರುಗಳಿಗೆ ಹೊಣೆ ವಹಿಸಲಾಗಿದೆ.

ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರಿಗೆ ತುಮಕೂರು–ಚಿತ್ರದುರ್ಗ, ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಬೆಂಗಳೂರು ದಕ್ಷಿಣ ಮತ್ತು ಮಂಡ್ಯ, ಕೃಷ್ಣಬೈರೇಗೌಡ ಅವರಿಗೆ ಬೆಂಗಳೂರು ನಗರ ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ನೀಡಲಾಗಿದೆ. ಸಚಿವ ಯು.ಟಿ. ಖಾದರ್ ಅವರಿಗೆ ಉಡುಪಿ, ಕೊಡಗು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಸೇರಿದಂತೆ ನಾಲ್ಕು ಜಿಲ್ಲೆಗಳ ಹೊಣೆಗಾರಿಕೆ ವಹಿಸಲಾಗಿದೆ. ■10ನೇ ಪುಟಕ್ಕೆ

ಮೈಸೂರು ವಿವಿಯ ಪ್ರೊ. ಎ.ಪಿ.ಜ್ಞಾನಪ್ರಕಾಶ್ ಕೆಎಸ್‌ಓಯು ನೂತನ ಕುಲಪತಿ

ಮೈಸೂರು, ಜೂ.25(ಎಂಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ (ಕೆಎಸ್‌ಓಯು) ದ ನೂತನ ಕುಲಪತಿಯಾಗಿ ಮೈಸೂರು ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಹಿರಿಯ ಪ್ರಾಧ್ಯಾಪಕ ಪ್ರೊ.ಎ.ಪಿ.ಜ್ಞಾನ ಪ್ರಕಾಶ್ ನೇಮಕಗೊಂಡಿದ್ದಾರೆ.



ಮುಕ್ತ ವಿವಿ ಹಾಲಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರ ಅಧಿಕಾರಾವಧಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ರಾಜ್ಯದ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳೂ ಆಗಿರುವ ರಾಜ್ಯಪಾಲರು, ಮುಂದಿನ ಮೂರು ವರ್ಷಗಳ ಅವಧಿಗೆ ಹಾಗೂ 65 ವರ್ಷ ■10ನೇ ಪುಟಕ್ಕೆ

ಅಬಕಾರಿ ಹೆಚ್ಚುವರಿ ಆಯುಕ್ತ ಡಾ. ಮಂಜುನಾಥ್ 'ಅತ್ಯಾಪ್ತೆ'

ಯಮುನಾ ಮನೆಯಲ್ಲಿ ಸತತ 21 ಗಂಟೆ ಇಡಿ ಶೋಧ

- ಮನೆಯಲ್ಲಿ ದೊರೆತ ವಸ್ತುಗಳ ಮಹಜರು
- ಪ್ರತಿ ವಿಚಾರವಾಗಿ ಸ್ಥಳದಲ್ಲೇ ಲಿಖಿತ ಉಲ್ಲೇಖ
- ಕೇಂದ್ರದ ಅರೆ ಸೇನಾ ಪಡೆಯಿಂದ ಇಡೀ ದಿನ ಭದ್ರತೆ
- ಇಂದು ಮುಂಜಾನೆ 2 ಗಂಟೆಗೆ ದಾಳಿ ಪ್ರಕ್ರಿಯೆ ಪೂರ್ಣ

ಮೈಸೂರು, ಜೂ.25(ಬಿಎಲ್‌ಯು)– ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಬಾವ್ಮೈದ ಹಾಗೂ ಬಳ್ಳಾರಿ ಮಾಜಿ ಸಂಸದ ದೇವೇಂದ್ರಪ್ಪ ಅವರ ಪುತ್ರರೂ ಆದ ಅಬಕಾರಿ ಹೆಚ್ಚುವರಿ ಆಯುಕ್ತ ಡಾ. ಮಂಜುನಾಥ್, ಆದಾಯಕ್ಕಿಂತ ಅಧಿಕ ಆಸ್ತಿ ಸಂಪಾದನೆ ಜೊತೆಗೆ ಬೇನಾಮಿ ವ್ಯವಹಾರ ಆರೋಪದ ಹಿನ್ನೆಲೆಯಲ್ಲಿ ವಿವಿಧೆಡೆ ಇರುವ ಅವರ ಮನೆ, ಕಚೇರಿ, ಸಂಬಂಧಿಗಳು, ಸ್ನೇಹಿತರ ಮನೆಗಳ ಮೇಲೆ ಇಡಿ ದಾಳಿ ನಡೆಸಿ ನಿರಂತರ ಶೋಧ ನಡೆಸಿದೆ. ಹಾಗೆಯೇ ಮೈಸೂರಿನಲ್ಲಿರುವ ಅವರ ಅತ್ಯಾಪ್ತ ಸ್ನೇಹಿತೆ ಯಮುನಾ ಅವರನ್ನು ಸಹ ಇಡಿ (ಜಾರಿ ನಿರ್ದೇಶನಾಲಯ) ಅಧಿಕಾರಿಗಳು ಬರೋಬ್ಬರಿ 21 ಗಂಟೆಗಳ ಸುದೀರ್ಘ ವಿಚಾರಣೆ ನಡೆಸಿದ್ದಾರೆ. ಮೈಸೂರಿನ ದಟ್ಟಗಳ್ಳಿ 5ನೇ ಕ್ರಾಸ್‌ನಲ್ಲಿರುವ ಅಬಕಾರಿ ಇಲಾಖೆಯ ಸ್ವಯಂ ನಿವೃತ್ತ ಅಧಿಕಾರಿ ಯಮುನಾ ಅವರ ■10ನೇ ಪುಟಕ್ಕೆ



ಮಂಜುನಾಥ್ ಸ್ನೇಹಿತರ ಮನೆ ಮೇಲಿನ ದಾಳಿ ಕೂಡ ಪೂರ್ಣ

ಡಾ.ಮಂಜುನಾಥ್ ಅವರ ಆಪ್ತರಾದ ತುಮಕೂರು ಅಬಕಾರಿ ಎಸ್‌ಐ ಸತೀಶ್ ಕಾಗಲಿ ಅವರ ಬೆಳಗಾವಿ ಮನೆ, ಚಿಕ್ಕೋಡಿ ಅಬಕಾರಿ ಡಿವೈಎಸ್ಪಿ ವಿಶ್ವನಾಥ್ ಗಾಣಿಗೇರ್ ಮನೆ ಮೇಲೆ ನಡೆದ ದಾಳಿ ಕೂಡ ಪೂರ್ಣಗೊಂಡಿದೆ. ಆದರೆ ಈ ದಾಳಿ ವೇಳೆ ಇಡಿ ಅಧಿಕಾರಿಗಳು ಡಾ. ಮಂಜುನಾಥ್ ಹಾಗೂ ಅವರ ಜೊತೆ ಸ್ನೇಹವಿದ್ದ ಯಾರನ್ನು ವಶಕ್ಕೆ ಪಡೆದಿಲ್ಲ. ದಾಳಿ ವೇಳೆ ಸಾಕಷ್ಟು ದಾಖಲಾತಿಗಳನ್ನು ವಶಕ್ಕೆ ಪಡೆದಿದ್ದಾರೆ.

ನಾನು, ನನ್ನ ತಾಯಿ ಇಬ್ಬರೂ ಇಲ್ಲೇ ಇದ್ದೇವೆ ನೋಡಿ...

ಕೆಲವು ಮಾಧ್ಯಮಗಳಲ್ಲಿ ನನ್ನ ಹಾಗೂ ನನ್ನ ತಾಯಿಯನ್ನು ಇಡಿಯವರು ವಶಕ್ಕೆ ಪಡೆದಿದ್ದಾರೆ... ಬಂಧಿಸಿದ್ದಾರೆ... ಎಂಬ ಸುದ್ದಿ ಬಿತ್ತರಿಸಿದ್ದು, ಇದು ನನ್ನ ಮನಸ್ಸನ್ನು ಘಾಸಿಗೊಳಿಸಿದೆ ಎಂದು ಯಮುನಾ ಬೇಸರ ವ್ಯಕ್ತಪಡಿಸಿದರು.

ಇದು ನನ್ನ ಸ್ವಂತ ಮನೆಯಾಗಿದ್ದು, ನಾನು, ನನ್ನ ತಾಯಿ ಇಲ್ಲೇ ಇದ್ದೇವೆ. ಹೀಗಿರುವಾಗ ಅದು ಯಾವ ಆಧಾರದ ಮೇಲೆ ಈ ರೀತಿಯ ಸುದ್ದಿ ಪ್ರಕಟಿಸಿದ್ದಾರೆ ಎಂದು ಪ್ರಶ್ನಿಸಿದರು. ನಿಜ ಸಂಗತಿಯನ್ನು ಬರೆಯಲಿ, ಇದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ಆಧಾರರಹಿತವಾದ ಸುಳ್ಳು ಸುದ್ದಿ ಬಿತ್ತರಿಸಿರುವುದು ಎಷ್ಟು ಸರಿ ಎಂದು ಮತ್ತೊಮ್ಮೆ ಪ್ರಶ್ನಿಸಿದ ಯಮುನಾ, ಇಡಿ ಅವರ ದಾಳಿಗಿಂತ ಇಂತಹ ಸುದ್ದಿ ನನಗೆ ಬೇಸರ ಉಂಟು ಮಾಡಿದೆ ಎಂದು ನೊಂದು ನುಡಿದರು.

ಡಾ.ಮಂಜುನಾಥ್, ಅವರ ಆಪ್ತರಿಂದ 13.3 ಕೋಟಿ ಮೌಲ್ಯದ ಚಿನ್ನಾಭರಣ, ನಗದು, ವಿದೇಶಿ ಕರೆನ್ಸಿ ವಶಕ್ಕೆ

ಇಡಿ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ

ಮೈಸೂರು,ಜೂ.25(ಪಿಎಂ)– ಹಣ ಅಕ್ರಮ ವರ್ಗಾವಣೆ ಆರೋಪದಡಿ ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಡಾ.ವೈ.ಡಿ.ಮಂಜುನಾಥ್ ಹಾಗೂ ಅವರ ಆಪ್ತರಿಗೆ ಸೇರಿದ ವಿವಿಧ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದ ಜಾರಿ ನಿರ್ದೇಶನಾಲಯದ (ಇಡಿ) ಬೆಂಗಳೂರು ವಲಯ ಕಚೇರಿ ಅಧಿಕಾರಿಗಳ ತಂಡ, ಸುಮಾರು 5.5 ಕೋಟಿ ರೂ. ನಗದು, ಸುಮಾರು 7.8 ಕೋಟಿ ರೂ. ಮೌಲ್ಯದ ಚಿನ್ನಾಭರಣ ಹಾಗೂ 3.3 ಲಕ್ಷ ರೂ. ಮೌಲ್ಯದ ವಿದೇಶಿ ಕರೆನ್ಸಿ ವಶಪಡಿಸಿಕೊಂಡಿದ್ದು, ಒಟ್ಟಾರೆ ಇವುಗಳ ಮೌಲ್ಯ ಒಟ್ಟು 13.3 ಕೋಟಿ ರೂ. ಆಗಿದೆ.



ಡಾ. ವೈ.ಡಿ. ಮಂಜುನಾಥ್

ರಾಜ್ಯ ಅಬಕಾರಿ ಇಲಾಖೆಯಲ್ಲಿ ವ್ಯವಸ್ಥಿತ ಭ್ರಷ್ಟಾಚಾರ ಮತ್ತು ಸರ್ಕಾರಿ ಅಧಿಕಾರಿಗಳಿಂದ ಅಕ್ರಮ ಸಂಪತ್ತು ಸಂಗ್ರಹ ಆರೋಪದಡಿ ಇಡಿ ವತಿಯಿಂದ ಪಿಎಂಎಲ್‌ಎ, 2002ರ ಸೆಕ್ಷನ್ 17ರ ಅಡಿಯಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿತ್ತು. ರಾಜ್ಯದ ಬೆಂಗಳೂರು, ಮೈಸೂರು ಮತ್ತು ಬೆಳಗಾವಿ ಸೇರಿದಂತೆ ಒಟ್ಟು 14



ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಯಿತು. ಕರ್ನಾಟಕ ಲೋಕಾಯುಕ್ತ ಪೊಲೀಸ್ ದಾಖಲಿಸಿದ ಎಫ್‌ಐಆರ್ ಆಧಾರದಲ್ಲಿ ಈ ಕಾರ್ಯಾಚರಣೆ ನಡೆಸಲಾಯಿತು. ರಾಜ್ಯದ ಅಬಕಾರಿ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವಿವಿಧ ಅಬಕಾರಿ ಪರವಾನಗಿ ಮಂಜೂರು ಮಾಡುವ ಹಾಗೂ ಪ್ರಕ್ರಿಯೆಗೊಳಿಸುವ ಸಂಬಂಧ ಲಂಚ ಸ್ವೀಕರಿಸಿದ ಆರೋಪಗಳು ಎಫ್‌ಐಆರ್‌ನಲ್ಲಿ ಉಲ್ಲೇಖವಾಗಿದೆ.

ಎಫ್‌ಐಆರ್‌ನಿಂದ ಸಂಗ್ರಹಿಸಲಾದ ಮಾಹಿತಿಯ ಜೊತೆಗೆ ಆರೋಪಿತ ಸರ್ಕಾರಿ ನೌಕರರು ಅಕ್ರಮವಾಗಿ ಸಂಪಾದಿಸಿದ ಹಣವನ್ನು ತಮ್ಮ ಕುಟುಂಬ ಸದಸ್ಯರು ಮತ್ತು ಸಹಚರರ ಮೂಲಕ ಸ್ಥಿರ ಮತ್ತು ಚರಾಸ್ತಿ ಖರೀದಿ, ಬೇನಾಮಿ ವ್ಯವಹಾರಗಳು ■10ನೇ ಪುಟಕ್ಕೆ

ನಾನಾ ಪ್ರಮಾಣ ಪತ್ರ ಪಡೆಯಲು 'ಫಸ್ಟ್ ಇನ್ ಫಸ್ಟ್ ಔಟ್'!

ಮತ್ತೊಂದು ಹೊಸ ತಲೆನೋವು

● ಅರ್ಜಿ ಹಾಕಿ 21 ದಿನ ಕಾಯಬೇಕಾದ ಸ್ಥಿತಿ ● ಆಸ್ಪತ್ರೆ, ಶಾಲಾ–ಕಾಲೇಜು, ಸಂದರ್ಶನಕ್ಕೆ ಜಾತಿ–ಆದಾಯ ಪ್ರಮಾಣ ಪತ್ರಕ್ಕೆ ಪರದಾಟ ● ತಾಲೂಕು ಕಚೇರಿಯಲ್ಲಿ ನೆನೆಗುದಿಗೆ ಬಿದ್ದಿವೆ 2100ಕ್ಕೂ ಹೆಚ್ಚು ಅರ್ಜಿ ● ಮೊದಲು ಬಂದವರಿಗೆ ಮೊದಲ ಆದ್ಯತೆ ನಿಯಮ ತೆಗೆದು ಹಾಕಿ, ತ್ವರಿತ ಅರ್ಜಿ ವಿಲೇವಾರಿಗೆ ಆಗ್ರಹ

ಮೈಸೂರು, ಜೂ.25(ಎಂಟಿವೈ)– ರಾಜ್ಯ ಸರ್ಕಾರ ಜಾತಿ ಮತ್ತು ಆದಾಯ ಸೇರಿದಂತೆ ವಿವಿಧ ಪ್ರಮಾಣ ಪತ್ರ ಪಡೆಯಲು ಜಾರಿಗೊಳಿಸಿರುವ 'ಫಸ್ಟ್ ಇನ್ ಫಸ್ಟ್ ಔಟ್'(ಎಫ್‌ಐಎಫ್‌ಓ) ಹೊಸ ನಿಯಮ, ಅರ್ಜಿದಾರರಿಗೆ ಸಂಕಷ್ಟ ತಂದೊಡ್ಡಿದೆ. ಆರೋಗ್ಯ, ಶಿಕ್ಷಣ, ಉದ್ಯೋಗಕ್ಕೆ ಸಕಾಲದಲ್ಲಿ ಪ್ರಮಾಣ ಪತ್ರ ಲಭ್ಯವಾಗದೆ ಜನಸೌಲಭ್ಯ ವಂಚಿತರಾಗುವಂತಾಗಿದೆ.

ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗಿದ್ದು, ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ದಾಖಲಾಗಲು ನಿಗದಿತ ಅರ್ಜಿ ನಮೂನೆಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಬೇಕಾಗಿದೆ. ಅದಕ್ಕಾಗಿ ತಾಲೂಕು ಕಚೇರಿಗೆ ಅರ್ಜಿ ಸಲ್ಲಿಸಿರುವ



ವಿದ್ಯಾರ್ಥಿಗಳು ನಿಗದಿತ ಸಮಯದೊಳಗೆ ಈ ಪ್ರಮಾಣಪತ್ರ ಪಡೆಯಲಾಗದೇ ಪರದಾಡುತ್ತಿದ್ದಾರೆ.

ಏನಿದು ಫಸ್ಟ್ ಇನ್ ಫಸ್ಟ್ ಔಟ್ ನಿಯಮ: ರಾಜ್ಯ ಸರ್ಕಾರ ಕಂದಾಯ ಇಲಾಖೆ ಮೂಲಕ ನೀಡುವ ವಿವಿಧ ಪ್ರಮಾಣ ಪತ್ರ, ದೃಢೀಕರಣ ಪತ್ರಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಆದ್ಯತೆ ಮೇಲೆ ನೀಡುವುದಾಗಿದೆ. ಕ್ರಮ ಸಂಖ್ಯೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ನೀಡುವ ಈ ವ್ಯವಸ್ಥೆಯೇ ಈಗ ಸಮಸ್ಯೆಗೆ ಕಾರಣವಾಗಿದೆ.

ಕರ್ತವ್ಯದ 21 ದಿನ ಗಡುವು: ವಿವಿಧ ಪ್ರಮಾಣ ಪತ್ರ ದೃಢೀಕರಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿದ 21 ದಿನದೊಳಗೆ ಕಲ್ಪಿಸಲು ಫಸ್ಟ್ ಇನ್ ಫಸ್ಟ್ ಔಟ್ ನಿಯಮದಲ್ಲಿ ಸೂಚಿಸಲಾಗಿದೆ. ಹಾಗಾಗಿ ಅರ್ಜಿ ಸಲ್ಲಿಸಿದವರು ಅಲ್ಲಿವರೆಗೆ ಕಾಯಬೇಕಾಗುತ್ತದೆ. ಇದರಲ್ಲಿ ರಜೆ ದಿನ ಸೇರಿಸಿದರೆ ಒಂದು ತಿಂಗಳಾಗುವುದು ಉಂಟು.

ಯಾವ ಯಾವ ಪ್ರಮಾಣ ಪತ್ರಕ್ಕಾಗಿ ಅರ್ಜಿ: ಕೇವಲ ಜಾತಿ ಮತ್ತು ಆದಾಯ ಪ್ರಮಾಣಕ್ಕೆ ಮಾತ್ರ ಅರ್ಜಿ ಸಲ್ಲಿಸದೆ ಇಡಬ್ಲ್ಯೂಎಸ್(ಎಕಾನಿಕ್ ವೀಕ್ ಸೊಸೈಟಿ), ಒಬಿಸಿ, ವಂಶವೃಕ್ಷ, ■10ನೇ ಪುಟಕ್ಕೆ

ಆರೋಗ್ಯ ಸಮಸ್ಯೆ ಹೇಳಿ ಕೇಳಿ ಬರುವುದಿಲ್ಲ

ರಾಜ್ಯ ಸರ್ಕಾರ ಫಸ್ಟ್ ಇನ್ ಫಸ್ಟ್ ಔಟ್ ನಿಯಮ ಜಾರಿಗೊಳಿಸಿರುವುದು ಅವೈಜ್ಞಾನಿಕ. ಈ ಹಿಂದೆ ಕಂದಾಯ ಸಚಿವರಾಗಿದ್ದ ಕೃಷ್ಣ ಭೈರೇಗೌಡರಿಗೆ ಈ ನಿಯಮ ತೆಗೆದುಹಾಕುವಂತೆ ಕೋರಿದ್ದೆ. ಆದರೂ, ಅದು ಮುಂದುವರೆದಿದೆ. ಹೃದಯಾಘಾತ ಸೇರಿದಂತೆ ದಿಢೀರ್ ಅನಾರೋಗ್ಯಕ್ಕೀಡಾದವರು ಚಿಕಿತ್ಸೆ ಪಡೆಯಲು, ಇತರೆ ಸೌಲಭ್ಯಕ್ಕೆ ಜಾತಿ, ಆದಾಯ ಪ್ರಮಾಣ ಪತ್ರ ನೀಡಬೇಕಾಗಿದೆ. ಅದಕ್ಕಾಗಿ 21 ದಿನ ಕಾಯಬೇಕಾದರೆ ರೋಗಿಯ ಸ್ಥಿತಿ ಏನಾಗಬೇಡ? ಶಾಲಾ–ಕಾಲೇಜಿಗೆ, ಉದ್ಯೋಗ ಸಂದರ್ಶನಕ್ಕೆ ಪ್ರಮಾಣ ಪತ್ರ ನೀಡದೆ ಅನೇಕರು ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಫಸ್ಟ್ ಇನ್ ಫಸ್ಟ್ ಔಟ್ ನಿಯಮ ರದ್ದು ಮಾಡಿ, ತ್ವರಿತಗತಿಯಲ್ಲಿ ಪ್ರಮಾಣ ಪತ್ರ ನೀಡಲು ಕ್ರಮ ಕೈಗೊಳ್ಳಬೇಕು.

-ಅಹಿಂದ ಜವರಪ್ಪ,
ಸಾಮಾಜಿಕ ಹೋರಾಟಗಾರ

ಕಾಮಗಾರಿ ವೇಳೆ ಪೈಪ್‌ಲೈನ್‌ಗೆ ಹಾನಿ; ರಸ್ತೆ ಸಂಪೂರ್ಣ ಜಲಮಯ

ವಾಹನ ಸವಾರರ ಪರದಾಟ; ಪೊಲೀಸರಿಗೂ ಪೀಕಲಾಟ



ಜಲಮಯವಾಗಿರುವ ರೈಲ್ವೆ ಅಂಡರ್ ಪಾಸ್

ಮೈಸೂರು, ಜೂ.25-(ಪಿಎಂ)-ರೈಲ್ವೆ ಅಂಡರ್ ಪಾಸ್ ಮತ್ತು ರಸ್ತೆ ವಿಸ್ತರಣೆ ಕಾಮಗಾರಿ ವೇಳೆ ನೀರು ಸರಬರಾಜು ಪೈಪ್‌ಲೈನ್‌ಗೆ ಹಾನಿಯುಂಟಾಗಿ ಅಪಾರ ಪ್ರಮಾಣದ ನೀರು ಪೋಲಾಗಿ ಸುತ್ತ ಮುತ್ತಲಿನ ಪ್ರದೇಶ ಜಲಮಯವಾಗಿದ್ದ ಘಟನೆ ಮೈಸೂರಿನ ಕೆಆರ್‌ಎಸ್-ರಿಂಗ್ ರಸ್ತೆ ಜಂಕ್ಷನ್ ರಾಯಲ್ ಇನ್ ಹೋಟೆಲ್ ಬಳಿ ಸಂಭವಿಸಿದೆ.

ಇದರಿಂದ ಸಾರ್ವಜನಿಕರು ಮತ್ತು ವಾಹನ ಸವಾರರು ಓಡಾಡಲು ಪ್ರಯಾಸ ಪಡಬೇಕಾದ ಪರಿಸ್ಥಿತಿ ನಿರ್ಮಾಣ ವಾಗಿತ್ತು. ರಾಯಲ್ ಇನ್ ಜಂಕ್ಷನ್ ಬಳಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ರೈಲ್ವೆ ಅಂಡರ್ ಪಾಸ್, ರಸ್ತೆ ವಿಸ್ತರಣೆ ಮತ್ತು ರಸ್ತೆ ಸಮತಟ್ಟು ಮಾಡುವ ಕಾಮಗಾರಿ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ವಾಟರ್ ಲೈನ್ ಸ್ಥಳಾಂತರ ಮಾಡುವಾಗ ನೀರಿನ ಪೈಪ್‌ಲೈನ್ ಒಡೆದು ಹೋಗಿ ಈ ಅವ್ಯವಸ್ಥೆ ಉಂಟಾಯಿತು ಎನ್ನಲಾಗಿದೆ.

ತಕ್ಷಣ ಕಾಮಗಾರಿ ನಡೆಸುತ್ತಿದ್ದ ಕಾರ್ಮಿಕರು ರಸ್ತೆ ಸಮತಟ್ಟು ಮಾಡುವ ಕಾಮಗಾರಿಯನ್ನು ನಿಲ್ಲಿಸಿ, ಸುಮಾರು ಐದಾರು ಅಡಿ ಆಳದಿಂದ ಉಕ್ಕಿ ಹರಿಯುತ್ತಿದ್ದ ನೀರನ್ನು ಜೆಸಿಬಿ ಯಂತ್ರದ ಬಕೆಟ್ ಮೂಲಕ ನೀರನ್ನು ತೆಗೆದು ಹೊರ ಹಾಕಬೇಕಾಯಿತು. ಆದರೆ, ಈ ಕಸರತ್ತಿನಿಂದ ಯಾವುದೇ ಪ್ರಯೋಜನವಾಗಲಿಲ್ಲ.

ಕೊನೆಗೆ ಹಾನಿಯಾಗಿದ್ದ ನೀರಿನ ಪೈಪ್‌ಲೈನ್ ಮಾರ್ಗದಲ್ಲಿ ನೀರು ಸರಬರಾಜನ್ನು ಸಂಪೂರ್ಣ ಬಂದ್ ಮಾಡಿ ನೀರನ್ನು ಹೊರ ತೆಗೆದು ಪೈಪ್‌ಲೈನ್ ದುರಸ್ತಿಗೊಳಿಸಬೇಕಾಯಿತು. ನೀರು ಉಕ್ಕಿ ಹರಿದ ಪರಿಣಾಮ ಮತ್ತು ನೀರನ್ನು ಎತ್ತಿ ಹೊರ ಚೆಲ್ಲಿದ್ದರಿಂದ ಇಡೀ ಪ್ರದೇಶ ಮತ್ತು ರಸ್ತೆಗಳು ಕೆಸರುಮಯವಾಗಿತ್ತು.

ಬೆಂಗಳೂರು-ಮೈಸೂರು ರಸ್ತೆಯೂ ಈ ಮಾರ್ಗಕ್ಕೆ ಸಂಪರ್ಕಿಸುವುದರಿಂದ ಸಂಚಾರ ಅಸ್ತವ್ಯಸ್ತಗೊಂಡು ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣ ವಾಗಿತ್ತು. ಎರಡು ಬದಿಯಲ್ಲೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಟ್ರಾಫಿಕ್ ಪೊಲೀಸರು ಪರಿಸ್ಥಿತಿ ನಿಭಾಯಿಸಲು ಹರಸಾಹಸ ಪಡಬೇಕಾಯಿತು. ಸಂಜೆ ವೇಳೆಗೆ ಈ ಸಮಸ್ಯೆಯನ್ನು ಬಗೆಹರಿಸಲಾಯಿತು. ನಂತರ ರಸ್ತೆ ವಿಸ್ತರಣೆ ಮತ್ತು ರೈಲ್ವೆ ಅಂಡರ್ ಪಾಸ್ ಕಾಮಗಾರಿಯನ್ನು ಮುಂದುವರೆಸಲಾಯಿತು.

ಇಂದಿರಾಗಾಂಧಿ ಮುಕ್ತ ವಿವಿಗೆ ಪ್ರವೇಶಾತಿ ಆರಂಭ

ಮೈಸೂರು,ಜೂ.25(ಜಿಎ)-ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿರುವ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿವಿಯಲ್ಲಿ ನೂತನ ಸಾಲಿನ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಆರಂಭವಾಗಿದೆ ಎಂದು ಪ್ರಾದೇಶಿಕ ನಿರ್ದೇಶಕರಾದ ಡಾ. ಹೆಚ್.ಸಿ. ಹೇಮಾವಾಲಿನಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದವಿ, ಸ್ನಾತಕೋತ್ತರ ಪದವಿ, ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಆಸಕ್ತ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆಯ ಅವಶ್ಯಕತೆ ಇಲ್ಲದೇ ಎಂಬಿಎ ಕಾರ್ಯಕ್ರಮಕ್ಕೂ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿವಿಯಲ್ಲಿ ನೇರ ಪ್ರವೇಶ ಒದಗಿಸುತ್ತಿದೆ.

ಹೆಚ್ಚಿನ ಮಾಹಿತಿಗೆ ಕಾಲೇಜಿನಲ್ಲಿರುವ ಈ ಕೇಂದ್ರಕ್ಕೆ ಮಧ್ಯಾಹ್ನ 3.30ರಿಂದ ಸಂಜೆ 5.30ರವರೆಗೆ ಭೇಟಿ ನೀಡಬಹುದು. ಅಥವಾ 0821-2423374ಕ್ಕೆ ಕರೆ ಮಾಡಬಹುದಾಗಿದೆ ಎಂದರು.

ಈ ವೇಳೆ ಸುದ್ದಿಗೋಷ್ಠಿಯಲ್ಲಿ ಸಂಯೋಜಕ ಡಾ.ಬಿ.ಎಸ್.ಹರ್ಷ, ಡಾ.ಸಿದ್ದರಾಜು ಉಪಸ್ಥಿತರಿದ್ದರು.

ಮಾಸಾಂತ್ಯಕ್ಕೆ ನಿವೃತ್ತರಾಗಲಿರುವ ಇತಿಹಾಸ ಪ್ರಾಧ್ಯಾಪಕ ಪ್ರೊ.ಸದಾಶಿವರಿಗೆ ಅಭಿನಂದನೆ



ಮೈಸೂರು ವಿವಿ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಗುರುವಾರ 'ಸದಾಶೋಧ' ಅಭಿನಂದನಾ ಗ್ರಂಥವನ್ನು ಗಣ್ಯರು ಬಿಡುಗಡೆಗೊಳಿಸಿದರು.

'ಸದಾಶೋಧ' ಅಭಿನಂದನಾ ಗ್ರಂಥ ಬಿಡುಗಡೆ

ಮೈಸೂರು, ಜೂ.25(ಎಂಕೆ)- ಮೈಸೂರು ವಿವಿ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಸೇವೆಯಿಂದ ನಿವೃತ್ತರಾಗಲಿರುವ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಸದಾಶಿವ ಅವರಿಗೆ ಅಭಿನಂದನೆ ಹಾಗೂ 'ಸದಾ ಶೋಧ' ಅಭಿನಂದನಾ ಗ್ರಂಥ ಬಿಡುಗಡೆ ಕಾರ್ಯಕ್ರಮ ಗುರುವಾರ ನಡೆಯಿತು.

ಅಭಿನಂದನಾ ಗ್ರಂಥ ಬಿಡುಗಡೆ ಗೊಳಿಸಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಆನಂದ್ ಮಾತನಾಡಿ, ಪ್ರಾಧ್ಯಾಪಕರು ಕೇವಲ ತರಗತಿಯಲ್ಲಿ ಪಾಠ ಪ್ರವಚನಕ್ಕಷ್ಟೇ ಸೀಮಿತವಾಗದೆ ಸಮಾಜಕ್ಕೆ ದಿಕ್ಕು ತೋರಿಸುವ ಚಿಂತಕರಾಗಿರಬೇಕು. ಈ ನಿಟ್ಟಿನಲ್ಲಿ ಪ್ರೊ.ಕೆ. ಸದಾಶಿವ, ತಮ್ಮ ಶೈಕ್ಷಣಿಕ ಜೀವನದುದ್ದಕ್ಕೂ ಸಂಶೋಧನೆ, ಬರವಣಿಗೆಯ ಮೂಲಕ ವಿಶಿಷ್ಟ ಛಾಪನ್ನು ಮೂಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅತ್ಯಂತ ಸೌಜನ್ಯಯುತ, ಮಿತಭಾಷಿ ಹಾಗೂ ಸಂಭಾವಿತ ವ್ಯಕ್ತಿತ್ವವುಳ್ಳ ಪ್ರೊ.ಸದಾಶಿವ, ನಿರಂತರವಾಗಿ ಹಲವಾರು ಪುಸ್ತಕಗಳನ್ನು ಬರೆದಿರುವುದು ಅವರ ಅಧ್ಯಯನಶೀಲತೆ ಮತ್ತು ವಿವೇಕಕ್ಕೆ ಸಾಕ್ಷಿಯಾಗಿದೆ. ಉತ್ತಮ ಪ್ರಾಧ್ಯಾಪಕರಿಗೆ ಇರಬೇಕಾದ ಎಲ್ಲಾ ಗುಣಗಳು ಅವರಲ್ಲಿವೆ. ದಲಿತ ಚಳವಳಿ ಕುರಿತು ಲೇಖನಗಳು ಹಾಗೂ ಸಂಶೋಧನಾ ಕೃತಿಗಳನ್ನು ರಚಿಸಿರುವ ಅವರು, ಟಿಪ್ಪು ಸುಲ್ತಾನ್ ಕುರಿತು ಕೂಡ ಅಪಾರ ಅಧ್ಯಯನ ನಡೆಸಿದ್ದಾರೆ ಎಂದರು.

ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯೆ ಪ್ರೊ.ಕಾವಲಮ್ಮ ಮಾತನಾಡಿ, ಸದಾಶಿವ ಅವರನ್ನು ಆಳವಾಗಿ ಅರಿತಾಗ ಮಾತ್ರ ಅವರ ವ್ಯಕ್ತಿತ್ವದ ವ್ಯಾಪ್ತಿ ತಿಳಿಯುತ್ತದೆ. ಅವರಲ್ಲಿ ಎಲ್ಲರನ್ನು ಆತ್ಮೀಯವಾಗಿ ಅರಿತು ಕೊಳ್ಳುವ ಗುಣವಿದ್ದು, ಯಾವುದೇ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸುವ ಅವರು, ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದಾರೆ. ಪ್ರತಿಫಲಾಪೇಕ್ಷೆಯಿಲ್ಲದೆ ತಮ್ಮ ಜ್ಞಾನ ಹಂಚಿಕೊಳ್ಳುವ ಗುಣ ಅವರದ್ದಾಗಿದೆ ಎಂದು ಶ್ಲಾಘಿಸಿದರು.

ಬಳಿಕ ಪ್ರೊ.ಕೆ.ಸದಾಶಿವ ಹಾಗೂ ಅವರ ಪತ್ನಿ ಡಾ.ಅನಿತಾ ಸದಾಶಿವ ಅವರನ್ನು ಸನ್ಮಾನಿಸಿ ಅಭಿನಂದಿಸಲಾಯಿತು. ಕುವೆಂಪು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಆರ್.ತಿಮ್ಮರಾಮಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಡಾ.ಬಾಬು ಜಗಜೀವನರಾಂ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಸಿ.ಟಿ. ಶಿವ ಶರಣ, ಮೈಸೂರು ವಿವಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಉಷಾದೇವಿ, ಮೈಸೂರು ವಿವಿ ಇತಿಹಾಸ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ವಿ.ಶ್ರೀನಿವಾಸ, ಬೆಂಗಳೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಡಕ್ಷರಿ, ನಿವೃತ್ತ ಪ್ರಾಧ್ಯಾಪಕ ಪ್ರೊ.ಅಶ್ವಥ ನಾರಾಯಣ, ಅಸ್ಸಾಂ ಕೇಂದ್ರೀಯ ವಿಶ್ವವಿದಾಲಯದ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ಎನ್.ಹರ್ಷ ಇನ್ನಿತರರು ಹಾಜರಿದ್ದರು.

ವಾರ್ತಾ ಸಂಪರ್ಕ ಇಲಾಖೆ ನೂತನ ಆಯುಕ್ತ ಎಂ.ಎನ್.ಅನುಚೇತನ್ ಅಧಿಕಾರ ಸ್ವೀಕಾರ



ಬೆಂಗಳೂರು, ಜೂ.25(ಕೆಎಂಶಿ)- ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಆಯುಕ್ತರಾಗಿ ಐಪಿಎಸ್ ಅಧಿಕಾರಿ, ಡಿಐಜಿ ಎಂ.ಎನ್.ಅನುಚೇತ್ ಇಂದು ಅಧಿಕಾರ ವಹಿಸಿಕೊಂಡಿದ್ದಾರೆ. ನಿರ್ಗಮಿತ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್, ನೂತನ ಆಯುಕ್ತರಿಗೆ ಅಧಿಕಾರ ಹಸ್ತಾಂತರಿಸಿದರು. ವಾರ್ತಾ ಇಲಾಖೆ ಆಯುಕ್ತ ಹುದ್ದೆ ಜೊತೆಗೆ ಎಂ.ಎನ್. ಅನುಚೇತ್ ಅವರಿಗೆ ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ ಆಯುಕ್ತರ ಹೆಚ್ಚುವರಿ ಪ್ರಭಾರ ವಹಿಸಿ ಸರ್ಕಾರ ಆದೇಶಿಸಿದೆ. ಅಧಿಕಾರ ಸ್ವೀಕಾರ ವೇಳೆ ಇಲಾಖೆ ಜಂಟಿ ನಿರ್ದೇಶಕರಾದ ಮಂಜುನಾಥ ಡೊಳ್ಳಿನ್, ಸಿದ್ದೇಶ್ವರಪ್ಪ ಜಿ.ಬಿ., ಸಿ.ಆರ್.ನವೀನ್, ಉಪನಿರ್ದೇಶಕರಾದ ಬಿ.ಕೆ.ರಾಮಲಿಂಗಪ್ಪ, ಶಫಿ ಸಾದುದ್ದಿನ್ ಉಪಸ್ಥಿತರಿದ್ದರು.

ಮೈಸೂರಲ್ಲಿ ವಶಪಡಿಸಿಕೊಂಡಿದ್ದ 72 ಲಕ್ಷ ಮೌಲ್ಯದ ಗಾಂಜಾ, ಡ್ರಗ್ಸ್ ನಾಶ

ಮೈಸೂರು, ಜೂ.25(ಬಿಎಲ್‌ಯು) – ಮೈಸೂರು ನಗರದಲ್ಲಿ ಪೊಲೀಸರು ವಶಪಡಿಸಿಕೊಂಡಿರುವ 72 ಲಕ್ಷ ಮೌಲ್ಯದ ಗಾಂಜಾ ಸೇರಿದಂತೆ ಇತರೆ ಮಾದಕ ವಸ್ತುಗಳನ್ನು ಗುರುವಾರ ನಾಶಪಡಿಸಲಾಗಿದೆ.

ಎನ್‌ಡಿಪಿಎಸ್ ಕಾಯ್ದೆಯ 30 ಪ್ರಕರಣಗಳಲ್ಲಿ 80 ಕೆ.ಜಿ. ಗಾಂಜಾ, 12 ಪ್ರಕರಣಗಳಲ್ಲಿ Methamphetamine ಮಾದಕ ವಸ್ತುಗಳನ್ನು ನಾಶ ಮಾಡಲಾಗಿದ್ದು, ಇದರ ಮೌಲ್ಯ ಸುಮಾರು 72 ಲಕ್ಷವಾಗಿದೆ.

ಮೈಸೂರಿನ ಗುಜ್ಜೆಗೌಡನಪುರ ಗ್ರಾಮದ ಗಿಪ್ಸ್ ಬಯೋಟೆಕ್ ಆವರಣದಲ್ಲಿ ಪರಿಸರ ಅಧಿಕಾರಿಗಳು ಹಾಗೂ ಪಂಚಾಯಿಯವರ ಸಮ್ಮುಖದಲ್ಲಿ ಪರಿಸರಕ್ಕೆ ಮಾಲಿನ್ಯವಾಗದಂತೆ ನಿಯಮಾನುಸಾರ ಮಾದಕ ವಸ್ತುಗಳನ್ನು ನಾಶ ಮಾಡಲಾಗಿದೆ. ಡಿಸಿಪಿ ಕೆ.ಎಸ್. ಸುಂದರ್‌ರಾಜ್, ಎಸಿಪಿ ಮಹಮ್ಮದ್ ಶರೀಫ್ ರಾವುತರ್, ಇನ್ಸ್‌ಪೆಕ್ಟರ್ ಸಿ.ರವಿಶಂಕರ್ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಜಾಗೃತಿ ಕಾರ್ಯಕ್ರಮ: ಮೈಸೂರು ನಗರದಲ್ಲಿ ಜೂನ್ 22ರಿಂದ 26 ರವರೆಗೆ ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನ ಆಚರಣೆ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ನಾಳೆ (ಜೂನ್ 26) ಬೆಳಿಗ್ಗೆ 9.30 ಗಂಟೆಗೆ ಮೈಸೂರು ಅರಮನೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಯೋಗಾನರಸಿಂಹಸ್ವಾಮಿ ದೇವಸ್ಥಾನದ ರಾಜಗೋಪುರ ಕಲ್ಲಿನ ಕಾರ್ಯ ಆರಂಭ



ಯೋಗಾ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ರಾಜಗೋಪುರ ನಿರ್ಮಾಣ ಪ್ರತಿಷ್ಠಾಪನೆ.

ಮೈಸೂರು, ಜೂ.25- ಮೈಸೂರಿನ ವಿಜಯನಗರದ ಯೋಗ ನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಭಾಷ್ಯಂ ಸ್ವಾಮೀಜಿಯವರ ಕನಸಾಗಿರುವ ರಾಜಗೋಪುರ ನಿರ್ಮಾಣ ಕಾರ್ಯ ಭಕ್ತರ ಸಹಕಾರದಿಂದ ಪ್ರಗತಿಯಲ್ಲಿದೆ.

ಫೆಬ್ರವರಿ 19ರಂದು ಗುದ್ದಲಿಪೂಜೆಯೊಂದಿಗೆ ಆರಂಭಗೊಂಡ ಈ ಮಹತ್ವದ ಯೋಜನೆಯ ಅಡಿಪಾಯ ಕಾಮಗಾರಿ ಈಗಾಗಲೇ ಪೂರ್ಣಗೊಂಡಿದ್ದು, ಕಲ್ಲಿನ ಕೆಲಸ ಆರಂಭವಾಗಿದೆ. ಇಂದು ರಾಜಗೋಪುರದ ಉತ್ತರಕಲ್ಲನ್ನು ಶ್ರೀ ಭಾಷ್ಯಂ ಸ್ವಾಮೀಜಿ ಪೂಜೆ ಸಲ್ಲಿಸು ವುದರೊಂದಿಗೆ ಕಾಮಗಾರಿಗೆ ಚಾಲನೆ ನೀಡಿದರು. ಕಲ್ಲಿನ ಕೆಲಸವು ಆರು ತಿಂಗಳೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಬಳಿಕ ವಿಗ್ರಹಗಳ ನಿರ್ಮಾಣ ಹಾಗೂ ಇಟ್ಟಿಗೆ-ಸಿಮೆಂಟ್ ಬಳಸಿ ಗೋಪುರ ನಿರ್ಮಾಣದ ಮುಂದಿನ ಹಂತದ ಕಾಮಗಾರಿ ಆರಂಭವಾಗಲಿದ್ದು, ಸಂಪೂರ್ಣ ಕಾಮಗಾರಿ ಪೂರ್ಣಗೊಳ್ಳಲು ಸುಮಾರು 2ರಿಂದ 3 ವರ್ಷ ಕಾಲಾವಕಾಶ ಬೇಕಾಗಬಹುದು.

ಸುಮಾರು 80ರಿಂದ 90 ಅಡಿ ಎತ್ತರದ ರಾಜಗೋಪುರ ನಿರ್ಮಾಣ ಮಾಡುವ ಸಂಕಲ್ಪವನ್ನು ಬಾಷ್ಯಂ ಸ್ವಾಮೀಜಿ ಹೊಂದಿದ್ದಾರೆ. ಭಕ್ತಾದಿಗಳ ಸಹಕಾರ ಹಾಗೂ ದಾನಿಗಳ ನೆರವಿನಿಂದ ಆರಂಭವಾಗಿರುವ ಈ ಯೋಜನೆ ದೈವಿ ಸಂಕಲ್ಪದಿಂದ ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳುವ ಆಶಯ ಭಾವವಿದೆ.

ಕಾರ್ಯಕ್ರಮದಲ್ಲಿ ಶ್ರೀ ಭಾಷ್ಯಂ ಸ್ವಾಮೀಜಿ, ವಿವಿಧ ಗಣ್ಯರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಲೋಕನಾಥ್, ಶ್ರೀನಿವಾಸನ್ ಗುರೂಜೀ, ಪ್ರಮುಖ ದಾನಿಗಳು ಹಾಗೂ ಅನೇಕ ಭಕ್ತರು ಭಾಗವಹಿಸಿದ್ದರು.

ಶಾಲಾ ವಿದ್ಯಾರ್ಥಿಗಳಿಂದ 'ಕಿಷ್ಕಿಂದ ಕಲಹ' ನಾಟಕ ಪ್ರದರ್ಶನ

●ಭಾರತದ ಸಂಸ್ಕೃತಿ, ಪರಂಪರೆ, ಇತಿಹಾಸ ಮಕ್ಕಳಿಗೆ ತಿಳಿಸಿ ●ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಗೋಪಿನಾಥ್ ಸಲಹೆ



ಮೈಸೂರಿನ ಕಲಾಮಂದಿರದಲ್ಲಿ ಗುರುವಾರ ಸಾತ್ವಿಕ ಫೌಂಡೇಷನ್ ಆಯೋಜಿಸಿದ್ದ 'ಸಾತ್ವಿಕ ರಂಗ ಯಾತ್ರೆ' ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು 'ಕಿಷ್ಕಿಂದ ಕಲಹ' ನಾಟಕ ಪ್ರದರ್ಶಿಸಿದರು.

ಮೈಸೂರು, ಜೂ.25(ಬಿಎಲ್‌ಯು)- ವಿಶ್ವಕ್ಕೆ ಮಾದರಿಯಾದ ಭಾರತದ ಸಂಸ್ಕೃತಿ, ಪರಂಪರೆ ಹಾಗೂ ಇತಿಹಾಸವನ್ನು ಇಂದಿನ ಮಕ್ಕಳಿಗೆ ಮನವರಿಕೆ ಮಾಡಿಕೊಡುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದು ಮೈಸೂರಿನ ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್ ಸಲಹೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಸಾತ್ವಿಕ ಫೌಂಡೇಷನ್ ಆಯೋಜಿಸಿದ್ದ ಶಾಲಾ ಕಾಲೇಜುಗಳ ಕಡೆಗೆ ಶೈಕ್ಷಣಿಕ ರಂಗಭೂಮಿಯ ಹೆಜ್ಜೆಗಳು 'ಸಾತ್ವಿಕ ರಂಗ ಯಾತ್ರೆ-2026' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಂಗಭೂಮಿ ಮೂಲಕ ಭಾರತದ ಇತಿಹಾಸದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸಬೇಕು. ಈ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಮಕ್ಕಳಿಂದ ನಾಟಕ ಪ್ರದರ್ಶಿಸುವ ಇಂತಹ ಕಾರ್ಯಕ್ರಮಗಳು ಹೆಚ್ಚಾಗಬೇಕು. ಪ್ರತಿಯೊಂದು ಶಾಲೆಗಳಲ್ಲಿ ಇಂತಹ ನಾಟಕಗಳ ಮೂಲಕ ರಾಮಾಯಣದ ಮಹತ್ವವನ್ನು ಮಕ್ಕಳಿಗೆ ತಿಳಿಸಬೇಕು. ನಾಟಕಗಳಿಂದ ಮಕ್ಕಳಿಗೆ ಭಾರತದ ಇತಿಹಾಸ, ಸಂಸ್ಕೃತಿ, ಪರಂಪರೆ ಮನವರಿಕೆ ಆಗಲಿದೆ ಎಂದು ಅಭಿಪ್ರಾಯಪಟ್ಟರು.

ಇಂತಹ ನಾಟಕಗಳಿಂದ ಮಕ್ಕಳ ಜ್ಞಾನ ಕೂಡ ವೃದ್ಧಿಯಾಗಲಿದೆ. ಎಂತಹ ವೇದಿಕೆಗಳಾಗಲಿ ಅಲ್ಲಿ ಮಕ್ಕಳು ನಿರ್ಭೀತಿಯಿಂದ ಕಾರ್ಯಕ್ರಮ ರೂಪಿಸಲಿದ್ದಾರೆ ಎಂದರು.

ಈ ವೇಳೆ ವಾಲ್ಮೀಕಿ ರಾಮಾಯಣ ಹಾಗೂ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯ ಆಧಾರಿತ ಕಿಷ್ಕಿಂದ ಕಾಂಡದ ಆಯ್ದ ಪ್ರಸಂಗಗಳ 'ಕಿಷ್ಕಿಂದ ಕಲಹ' ನಾಟಕವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ವಾನರ ಸೇನೆ ಲಂಕೆಗೆ ಹಾರುವುದು ಸೇರಿದಂತೆ ಯುದ್ಧದ ಹಲವು ಪ್ರಸಂಗಗಳನ್ನು ನಾಟಕದಲ್ಲಿ ಪ್ರದರ್ಶಿಸಿ ಮಕ್ಕಳು ಪ್ರೇಕ್ಷಕರಿಂದ ಚಪ್ಪಾಳೆ ಗಿಟ್ಟಿಸಿದರು. ಸಾತ್ವಿಕ ಫೌಂಡೇಷನ್ ಅಧ್ಯಕ್ಷೆ ಸರಸ್ವತಿ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಸದ್ವಿದ್ಯಾ ಶಾಲೆ ಮುಖ್ಯೋಪಾಧ್ಯಾಯ ರಾಮಚಂದ್ರ ಭಟ್, ನಾಟಕದ ನಿರ್ದೇಶಕ ಅಂಕಿತ್ ರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಮ ಮಂದಿರ ದೇಣಿಗೆ ದುರ್ಬಳಕೆ ಆರೋಪ

ಸಿಬಿಐ ತನಿಖೆಗೆ ನಿರ್ದೇಶನ ಕೋರಿ ಸುಪ್ರೀಂಗೆ ಅರ್ಜಿ

ಲಕ್ನೋ: ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನಲ್ಲಿ ದೇಣಿಗೆ ದುರ್ಬಳಕೆ ಹಾಗೂ ಹಣಕಾಸಿನ ಅಕ್ರಮಗಳು ನಡೆದಿವೆ ಎಂಬ ಆರೋಪದ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಸುಪ್ರೀಂಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ. ಈ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಒಪ್ಪಿಕೊಂಡಿದೆ. ವಕೀಲರಾದ ಅಜಯ್ ಕುಮಾರ್ ರೈ ಮತ್ತು ದಿನೇಶ್ ಕುಮಾರ್ ಯಾದವ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್‌ನ ನ್ಯಾಯ ಮೂರ್ತಿ ಬಿ.ವಿ. ನಾಗರತ್ನ ನೇತೃತ್ವದ ದ್ವಿಸದಸ್ಯ ಪೀಠದ ಮುಂದೆ ಪ್ರಸ್ತಾಪಿಸಲಾಯಿತು. ಆರಂಭಿಕ ವಿಚಾರಣೆ ಬಳಿಕ ನ್ಯಾಯಾಲಯ ಈ ಅರ್ಜಿಯನ್ನು ಜೂ.29 ರಂದು ವಿಚಾರಣೆಗೆ ತರುವಂತೆ ಅರ್ಜಿದಾರರಿಗೆ ತಿಳಿಸಿದೆ.

ರಾಮ ಮಂದಿರದ ದೇಣಿಗೆ ಹಣದ ದುರುಪಯೋಗದ ಬಗ್ಗೆ ಎಫ್‌ಐಆರ್ ದಾಖಲಾಗಬೇಕು ಮತ್ತು ಸಿಬಿಐನ ವಿಶೇಷ ತಂಡ ಈ ಬಗ್ಗೆ ತನಿಖೆ ನಡೆಸಬೇಕು ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ವಕೀಲರ ವಾದವನ್ನು ಆಲಿಸಿದ ನ್ಯಾಯಾಲಯ, ಅರ್ಜಿಯಲ್ಲಿ ಯಾವುದೇ ತಪ್ಪುಗಳು ಅಥವಾ ಲೋಪದೋಷಗಳು ಇಲ್ಲದಿದ್ದರೆ, ಕೋರ್ಟ್‌ನ ಕಚೇರಿ ಅದನ್ನು ಮುಂದಿನ ವಿಚಾರಣೆಯ ಪಟ್ಟಿಗೆ ಸೇರಿಸುತ್ತದೆ ಎಂದು ಹೇಳಿದೆ. ಅದಕ್ಕೆ ಅರ್ಜಿದಾರರು, ನಮ್ಮ ಅರ್ಜಿ ಈಗಾಗಲೇ ನೋಂದಣಿಯಾಗಿದೆ ಮತ್ತು ಅದರಲ್ಲಿ ಯಾವುದೇ ತಪ್ಪುಗಳಿಲ್ಲ. ಹೀಗಾಗಿ ವಿಚಾರಣೆಯ ದಿನಾಂಕವನ್ನು ಜೂ.29ಕ್ಕೆ ನಿಗದಿಪಡಿಸುವಂತೆ ಕೋರ್ಟ್‌ಗೆ ಕೇಳಿಕೊಂಡಿದ್ದಾರೆ. ಅದಕ್ಕೆ ಸೋಮವಾರ ಕೋರ್ಟ್ ಗಮನಕ್ಕೆ ತರುವಂತೆ ನ್ಯಾಯಾಧೀಶರು ಸೂಚಿಸಿದ್ದಾರೆ

ತುಂಗಭದ್ರಾ ಜಲಾಶಯದ ನೂತನ 33 ಗೇಟ್ ಉದ್ಘಾಟನೆ

ಕರ್ನಾಟಕ, ತೆಲಂಗಾಣ, ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಉಪಸ್ಥಿತಿ



ಬೆಂಗಳೂರು, ಜೂ.25(ಕೆಎಂಶಿ)- 'ನಮ್ಮ ನೀರು, ನಮ್ಮ ಹಕ್ಕು' ಆಶಯದಡಿ ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ರೈತರ ರಕ್ಷಣೆಗೆ ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಐತಿಹಾಸಿಕ ತೀರ್ಮಾನ ಕೈಗೊಂಡಿದ್ದೇವೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ರೈತನಿಗೆ ಸಂಬಳವಿಲ್ಲ, ಬಡ್ತಿ ಇಲ್ಲ, ಪಿಂಚಣಿ ಇಲ್ಲ, ರಜೆಯೂ ಇಲ್ಲ, ನಿವೃತ್ತಿಯೂ ಇಲ್ಲ, ಆದರೂ, ದೇಶಕ್ಕೆ ಅನ್ನ ನೀಡುವ ಕೃಷಿಕರ ಬದುಕು ಉಳಿಸಬೇಕು ಎಂಬ ದೃಢ ತೀರ್ಮಾನ ತೆಗೆದುಕೊಂಡಿದ್ದೇವೆ ಎಂದರು.

ತುಂಗಭದ್ರಾ ಅಣೆಕಟ್ಟೆಯ 33 ಸ್ಲಿಲ್-ವೇ ಗೇಟ್‌ಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಣೆಕಟ್ಟಿನ 33 ಟಿಎಂಸಿ ನೀರು ಉಳಿಸುವ ಕುರಿತು ರೈತ ಮುಖಂಡರು ಸಲ್ಲಿಸಿರುವ ಮನವಿ ಸೇರಿದಂತೆ ರೈತ ಕುಟುಂಬಗಳ ರಕ್ಷಣೆ ಬಗ್ಗೆಯೂ ಮೂವರೂ ಮುಖ್ಯಮಂತ್ರಿಗಳು ಚರ್ಚೆ ಮಾಡಿದ್ದೇವೆ.

ನವಿಲಿ ಸಮನಾಂತರ ಜಲಾಶಯ, ಹೂಳೆತ್ತುವ ವಿಚಾರ ಸೇರಿದಂತೆ ಎಲ್ಲಾ ಅವಕಾಶಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿ ಒಮ್ಮತಾಭಿಪ್ರಾಯಕ್ಕೆ ಬಂದಿದ್ದು, ಇದನ್ನು ಕೇಂದ್ರ ಸಚಿವರೇ ಪ್ರಕಟಿಸಲಿದ್ದಾರೆ.

ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹಾಗೂ ನಾನು ಕೈಗೊಂಡಿರುವ ಮಹತ್ವದ ತೀರ್ಮಾನ ದೇಶದ ನೀರಾವರಿ ಹಾಗೂ ಒಕ್ಕೂಟ ವ್ಯವಸ್ಥೆಯ ಇತಿಹಾಸ ಪುಟ ಸೇರಲಿದೆ.

ಇತಿಹಾಸ ಓದುವುದು ಹಾಗೂ ಸ್ಮರಿಸುವುದಕ್ಕಿಂತ ಇತಿಹಾಸ ಸೃಷ್ಟಿಸುವುದು ನಮ್ಮ ಗುರಿ. ಜತೆಗೂಡುವುದು ಆರಂಭ, ಜತೆಗೂಡಿ ಚರ್ಚಿಸುವುದು ಪ್ರಗತಿ, ಜತೆಗೂಡಿ ಕೆಲಸ ಮಾಡುವುದು ಯಶಸ್ಸು ಎಂದರು.

ತುಂಗಭದ್ರಾ ನದಿ ಪಾತ್ರದ ರೈತರ ಹಿತರಕ್ಷಣೆಗೆ ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳು ಒಮ್ಮತದ ಐತಿಹಾಸಿಕ ತೀರ್ಮಾನ ಕೈಗೊಂಡಿವೆ. ದೇವರು ನಮಗೆ ಎರಡು ಆಯ್ಕೆ ಕೊಟ್ಟಿದ್ದಾನೆ, ಒಂದು ಕೊಟ್ಟು ಹೋಗುವುದು, ಮತ್ತೊಂದು ಬಿಟ್ಟು ಹೋಗುವುದು. ದೇವರು ವರ ಹಾಗೂ ಶಾಪ ನೀಡುವುದಿಲ್ಲ, ನಮಗೆ ಸಿಕ್ಕ ಅವಕಾಶದಲ್ಲಿ ನಿಮ್ಮ ಸೇವೆ ಮಾಡುತ್ತಿದ್ದೇವೆ ಎಂದರು.

ತುಂಗಾಭದ್ರ ಅಣೆಕಟ್ಟೆಯ 19ನೇ ಗೇಟ್ ತುಂಡರಿಸಿದಾಗ ತಕ್ಷಣವೇ ತಜ್ಞರೊಂದಿಗೆ ಚರ್ಚಿಸಿ ಒಂದೇ ವಾರದಲ್ಲಿ ಗೇಟ್ ಬದಲಾಯಿಸುವ ಮೂಲಕ ಈ ಭಾಗದ ರೈತರ ರಕ್ಷಣೆ ಮಾಡಲಾಯಿತು.

ಗೇಟ್ ತುಂಡರಿಸಿದಾಗ ವಿರೋಧ ಪಕ್ಷಗಳು ಟೀಕೆ ಮಾಡಿದವು, ನಮ್ಮ ಸರ್ಕಾರ ಜಲಾಶಯದ ಎಲ್ಲಾ 33 ಗೇಟ್ ಬದಲಾಯಿಸಲು ತೀರ್ಮಾನಿಸಿದ್ದು, ಮೂರೂ ರಾಜ್ಯಗಳ ರೈತರ ಹಿತರಕ್ಷಣೆಗೆ ಭಗವಂತ ನಮಗೆ ಅವಕಾಶ ಮಾಡಿಕೊಟ್ಟಿದ್ದಾನೆ ಎಂದರು.

ಮೈಸೂರಿನ ರಸ್ತೆಗಳಿಗೆ ವೈಟ್‌ಟಾಪಿಂಗ್ ಹೆಸರಲ್ಲಿ ಮೇಕಪ್!

●ಲಹರಿ ಆಡಿಯೋ ವ್ಯವಸ್ಥಾಪಕ ನಿರ್ದೇಶಕ ಲಹರಿ ವೇಲು ಬೇಸರ ●ಮೈಸೂರು ಸಾಂಸ್ಕೃತಿಕ ನಗರಿ; ಅದಕ್ಕೆ ಒತ್ತಾಸೆ ನೀಡಬೇಕು ●ಭಾವಗೀತೆ, ರಂಗಗೀತೆ, ಜನಪದ ಗೀತೆಗಳಿಗೆ ಸಾವಿಲ್ಲ



ಮೈಸೂರು ಕಲಾ ಮಂದಿರದ ಕಿರುರಂಗ ಮಂದಿರದಲ್ಲಿ ಏಕತಾರಿ ಸಾಂಸ್ಕೃತಿಕ ಸಂಘಟನೆ ಹಾಗೂ ಕನವತಿಯಿಂದ ಏರ್ಪಡಿಸಿದ್ದ ರಂಗಗೀತೆಗಳ ಕಲಿಕಾ ಶಿಬಿರವನ್ನು ಹಿರಿಯ ನಿರ್ದೇಶಕ ಟಿ.ಎಸ್.ನಾಗಾಭರಣ ಉದ್ಘಾಟಿಸಿದರು.

ಮೈಸೂರು,ಜೂ.25(ಎಸ್‌ಪಿಎನ್)- ಮೈಸೂರಿನ ಕೆಲ ರಸ್ತೆಗಳಿಗೆ ಕೋಟ್ಯಾಂತರ ರೂ. ವೆಚ್ಚದಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಮಾಡುತ್ತಿದ್ದಾರೆ. ಇದರ ಅವಶ್ಯಕತೆ ಇತ್ತೆ ಎಂದು ಲಹರಿ ಆಡಿಯೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಲಹರಿ ವೇಲು ಪ್ರಶ್ನಿಸಿದ್ದಾರೆ.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಏಕತಾರಿ ಸಾಂಸ್ಕೃತಿಕ ಸಂಘಟನೆ, ಕನವತಿಯಿಂದ ಏರ್ಪಡಿಸಿದ್ದ ರಂಗಗೀತೆಗಳ ಕಲಿಕಾ ಶಿಬಿರದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.

ಮೈಸೂರಿನ ರಸ್ತೆಗಳಿಗೆ ವೈಟ್ ಟಾಪಿಂಗ್ ಹೆಸರಿನಲ್ಲಿ ಮೇಕಪ್ ಮಾಡುತ್ತಿದ್ದಾರೆ. ಇದರಿಂದ ಯಾವುದೇ ಪ್ರಯೋಜನವಿಲ್ಲ. ಸಾಂಸ್ಕೃತಿಕ ನಗರಿ ಮೈಸೂರಿಗೆ ಪೂರಕವಾಗಿ ಸಾಂಸ್ಕೃತಿಕ ಕ್ಷೇತ್ರ ಅಭಿವೃದ್ಧಿಪಡಿಸಿದ್ದರೆ ಚೆನ್ನಾಗಿತ್ತು. ಆದರೆ, ನಗರದಲ್ಲಿ ಹಮ್ಮಿಕೊಂಡಿರುವ ವೈಟ್ ಟಾಪಿಂಗ್ ಕಾಮಗಾರಿಯ ಟ್ರಾಫಿಕ್ ಕಿರಿಕಿರಿಯಿಂದ ಇಂದಿನ ಕಾರ್ಯಕ್ರಮಕ್ಕೆ ತಡವಾಗಿ ಬಂದಿದ್ದಕ್ಕೆ ಸಭಿಕರಲ್ಲಿ ಕ್ಷಮೆಯಾಚಿಸಿದರು.

ಜನಪದ ಸೊರಗುತ್ತಿದೆ: ಭಾವಗೀತೆ, ರಂಗಗೀತೆ ಜನಪದ ಸೊರಗುತ್ತಿದೆ. ಆದರೆ ಅವುಗಳಿಗೆ ಸಾವಿಲ್ಲ. ಹೀಗಾಗಿ ಕಲಾವಿದರು ಅವುಗಳಿಗೆ ಮರುಜೀವ ನೀಡಬೇಕು. ಈಗಾಗಲೇ 1,500 ರಂಗಗೀತೆ ಬಿಡುಗಡೆ ಮಾಡಿದ್ದೇವೆ. ಮುಂದೆಯೂ ಈ ರೀತಿಯ ಕೆಲಸ ಮಾಡುತ್ತೇವೆ. ನಮ್ಮ ನೆಲದ ಸೊಗಡು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ ಎಂದರಲ್ಲದೆ,ಇಲ್ಲಿನ ಧನಾತ್ಮಕ ಅಂಶ ಬೆಂಗಳೂರಿನಲ್ಲಿಲ್ಲ. ಬೆಂಗಳೂರು ಮಾಲಿನ್ಯ ನಗರಿಯಾಗಿ ಮಾರ್ಪಟ್ಟಿದೆ. ಟ್ರಾಫಿಕ್ ಜಾಮ್ ನಿಂದಾಗಿ ಅಲ್ಲಿನ ಜನ ಬೇಸತ್ತಿದ್ದಾರೆ. ಆ ನಗರದಂತೆ ಮೈಸೂರು ಆಗುವುದು ಬೇಡ ಎಂದು ಹೇಳಿದರು.

ಶಿಬಿರ ಉದ್ಘಾಟಿಸಿ ಮಾತನಾಡಿದ ನಿರ್ದೇಶಕ ಟಿ.ಎಸ್.ನಾಗಾಭರಣ, 1969-2000 ವರೆಗೆ ಬಿ.ವಿ. ಕಾರಂತರೊಂದಿಗೆ ನಾಗಾಭರಣ ಒಡನಾಟವಿತ್ತು. ನನಗೆ ಬಿ.ವಿ.ಕಾರಂತ ಎಂದರೆ ಇಂದಿಗೂ ಕಳಕಳಿಯಿದೆ. ಕಾರಂತರು ಸ್ಥಾಪಿಸಿದ್ದ 'ಬೆನಕ ನಾಟಕ ತಂಡ' ಹಾಗೂ ಮೈಸೂರಿನ ರಂಗಾಯಣ ರೆಪರ್ಟರಿಗಳಲ್ಲಿ ಕೆಲಸ ಮಾಡಿದ ಅನುಭವಿದೆ. ಕಾರಂತರ ನಿರ್ದೇಶನ ಶೈಲಿ ಮತ್ತು ಸಂಗೀತದ ಜ್ಞಾನದ ಕುರಿತು ಅದರ ಪ್ರಭಾವ ಹೊಂದಿದ್ದಾರೆ ಎಂದರು.

ಭಾರತೀಯ ರಂಗಭೂಮಿ ಪಾಶ್ಚಿಮಾತ್ಯರಿಗಿಂತ ಭಿನ್ನವಿದೆ ಎಂಬುದನ್ನು ಕಾರಂತರು ತೋರಿಸಿಕೊಟ್ಟಿದ್ದಾರೆ. ಬಿ.ವಿ. ಕಾರಂತರು 18 ಭಾಷೆಯಲ್ಲಿ ನಾಟಕ ನಿರ್ದೇಶನ ಮಾಡಿರುವ ಅನುಭವವಿತ್ತು. ಪ್ರಾದೇಶಿಕ ಕಥಾವಸ್ತುಗಳನ್ನು ಭಾರತೀಯ ಸಂಗೀತವನ್ನಾಗಿ ಪರಿವರ್ತಿಸಿದ ಕೀರ್ತಿ ಕಾರಂತರಿಗೆ ಸಲ್ಲುತ್ತದೆ ಎಂದರು.

ಮುಂದಿನ ಪೀಳಿಗೆಗೂ ರಂಗಗೀತೆ ಪರಂಪರೆ ಉಳಿಯಬೇಕಾದರೆ, ಕಾರಂತರು ನಿರ್ದೇಶಿಸಿರುವ ರಂಗಗೀತೆಗಳತ್ತ ಗಮನ ಹರಿಸಬೇಕಿದೆ. ರಂಗಾಯಣದ ಪ್ರತಿ ಮೂಲೆಯಲ್ಲೂ ಕಾರಂತರಿದ್ದಾರೆ. ಅವರು ನಮ್ಮನ್ನು ಆಶೀರ್ವದಿಸಿದ್ದಾರೆ. ಹಾಗಾಗಿ ಭಾರತೀಯ ರಂಗಭೂಮಿ ಇದುವರೆಗೂ, ಮುಂದೆಯೂ ಜೀವಂತ ಎಂದರು.

ವೇದಿಕೆಯಲ್ಲಿ ಸಂಗೀತ ವಿವಿ ಕುಲಪತಿ ಪ್ರೊ.ಕೆ.ರಾಮಕೃಷ್ಣಯ್ಯ, ಕಾಂಗ್ರೆಸ್ ಮುಖಂಡ ಅಹಿಂದ ಜವರಪ್ಪ ರಂಗಾಯಣ ಮಾಜಿ ನಿರ್ದೇಶಕ ಡಾ.ಎಚ್.ಜನಾರ್ಧನ್ (ಜನ್ನಿ), ಹಿರಿಯ ರಂಗಕರ್ಮಿ ಶಿವಾಜಿ ರಾವ್ ಜಾದವ್, ಕರ್ನಾಟಕ ಜಾನಪದ ಅಕಾಡೆಮಿ ಸದಸ್ಯ ಕೆ.ಕೆ.ದೇವಾನಂದವರ ಪ್ರಸಾದ್ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ಬಳಿಕ ಶಿಬಿರಾರ್ಥಿಗಳು ಬಿ.ವಿ.ಕಾರಂತ ಹಾಗೂ ಜನಾರ್ಧನ್ (ಜನ್ನಿ) ಸಂಯೋಜಿಸಿರುವ ರಂಗಗೀತೆಗಳನ್ನು ಹಾಡಿದರು.

ಕೆಆರ್‌ಎಸ್ ಜಲಾಶಯದಿಂದ ತಮಿಳ್ನಾಡಿಗೆ 2 ಸಾವಿರ ಕ್ಯುಸೆಕ್ ನೀರು ಬಿಡುಗಡೆ!

ವಿಪಕ್ಷ ನಾಯಕ ಆರ್.ಅಶೋಕ್ ಆಕ್ರೋಶ

ಶ್ರೀರಂಗಪಟ್ಟಣ, ಜೂ.25– ಕೆಆರ್‌ಎಸ್ ಜಲಾಶಯದಿಂದ ಕಳೆದ 3 ದಿನಗಳಿಂದ 2 ಸಾವಿರಕ್ಕೂ ಹೆಚ್ಚು ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗಿದ್ದು, ಗುರುವಾರ ಸಂಜೆ ನೀರಿನ ಹೊರ ಹರಿವು ನಿಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.



ಬೆಂಗಳೂರು ನಗರದ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹರಿಸಲಾಗಿದೆ ಎಂದು ಹೇಳಲಾಗುತ್ತಿದೆ.

ಗರಿಷ್ಠ 124.80 ಅಡಿಯ ಜಲಾಶಯದಲ್ಲಿ ಗುರುವಾರ 81.08 ಅಡಿ ನೀರಿನ ಸಂಗ್ರಹವಿದ್ದು, ಜಲಾಶಯಕ್ಕೆ 577 ಕ್ಯುಸೆಕ್ ಒಳ ಹರಿವಿದೆ. 1668 ಕ್ಯುಸೆಕ್ ನೀರು ಹೊರ ಬಿಡಲಾಗುತ್ತಿದೆ ಎಂದು ನೀರಾವರಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದರೂ, 2 ಸಾವಿರಕ್ಕೂ ಅಧಿಕ ಕ್ಯುಸೆಕ್ ನೀರು ಹರಿಸಲಾಗಿದೆ ಎಂದು ನಂಬಲರ್ಹ ಮೂಲಗಳು ಮಾಹಿತಿ ನೀಡಿವೆ. ಅಲ್ಲದೇ ಮೇಲಧಿಕಾರಿಗಳ ಸೂಚನೆ ಮೇರೆಗೆ ಗುರುವಾರ ಸಂಜೆ ನಿಲ್ಲಿಸಲಾಗಿದೆ ಎನ್ನಲಾಗಿದೆ.

ತಮಿಳುನಾಡಿಗೆ ಕದ್ದು ಮುಚ್ಚಿ ನೀರು ಆರೋಪ: ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರೂ ಕೆಆರ್‌ಎಸ್ ಜಲಾಶಯದಿಂದ ಕದ್ದುಮುಚ್ಚಿ ತಮಿಳುನಾಡಿಗೆ ಸುಮಾರು 2 ಸಾವಿರ ಕ್ಯುಸೆಕ್ ಹರಿಸಲಾಗುತ್ತಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮಿಳುನಾಡಿನಲ್ಲಿ ಇರುವುದು ಕಾಂಗ್ರೆಸ್ ಮೈತ್ರಿ ಸರ್ಕಾರ. ಹೀಗಾಗಿ ಅಲ್ಲಿನ ಮೈತ್ರಿ ಸರ್ಕಾರವನ್ನು ಮೆಚ್ಚಿಸಲು ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಕದ್ದು ಮುಚ್ಚಿ 2 ಸಾವಿರ ಕ್ಯುಸೆಕ್ ನೀರು ಹರಿಸಲಾಗುತ್ತಿದೆ ಎಂದು ಆರೋಪಿಸಿದರು.

ಪ್ರಸ್ತುತ ಜಲಾಶಯದಲ್ಲಿ ನೀರು ಎಷ್ಟಿದೆ ಯಾಕೆ ನಮಗೆ ಬಿಡಲು ಆಗುತ್ತಿಲ್ಲ ಎಂದು ಪ್ರಶ್ನಿಸಿದ ರೈತರಿಗೂ ಸರ್ಕಾರ ಮಾಹಿತಿ ಕೊಟ್ಟಿಲ್ಲ. ಸರ್ವ ಪಕ್ಷ ಸಭೆಯನ್ನೂ ಸರ್ಕಾರ ಕರೆದು ಚರ್ಚಿಸಿಲ್ಲ ಎಂದು ಆರ್.ಅಶೋಕ್ ಕಿಡಿಕಾರಿದ್ದಾರೆ.

ಸ್ವಾಗತ



ಮೈಸೂರು ವಕೀಲರ ಸಂಘದ ಅಭಿವೃದ್ಧಿ ಕಾಮಗಾರಿಗೆ ಆಗಮಿಸಿದ ಮೈಸೂರು ಕೊಡಗು ಸಂಸದರಾದ ಯದುವೀರ್ ಕೃಷ್ಣ ದತ್ತ ಒಡೆಯರ್ ಅವರನ್ನು ವಕೀಲರು, ಬಿಜೆಪಿ ಎಸ್ ಟಿ ಮೋರ್ಚಾ ಅಧ್ಯಕ್ಷರಾದ ಪಡುವಾರಹಳ್ಳಿ ಎಂ ರಾಮಕೃಷ್ಣ, ಧನು ಮಲ್ಲೇಶ್, ಗೋಕುಲ್ ಗೋವರ್ಧನ್ ಇತರರು ಸ್ವಾಗತಿಸಿದರು

ನಟಿ ಕೃಷಿ ತಾಪಂಡ ಮನೆಯಲ್ಲಿ ಉದ್ಯಮಿ ಆತ್ಮಹತ್ಯೆ

ಬೆಂಗಳೂರು: ನಟಿ ಹಾಗೂ ಬಿಗ್‌ಬಾಸ್ ಮಾಜಿ ಸ್ಪರ್ಧಿ ಕೃಷಿ ತಾಪಂಡ ವಾಸವಿರುವ ಎಲಿಗೆಂಟ್ ಟೆರೇಸ್ ಅಪಾರ್ಟ್‌ಮೆಂಟ್‌ನ ಮನೆಯಲ್ಲಿ ಉದ್ಯಮಿ ವೈಶಾಖ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗಿರಿನಗರದ ನಿವಾಸಿ ವೈಶಾಖ್‌ಗೆ 15 ವರ್ಷಗಳ ಹಿಂದೆ ಮದುವೆಯಾಗಿದ್ದು, ಮಗ ಹಾಗೂ ಪತ್ನಿಯೊಂದಿಗೆ ವಾಸವಿದ್ದರು. ಕಾರ್ ಗ್ಯಾರೇಜ್ ಹಾಗೂ ಆಟೊಮೊಬೈಲ್ ಶಾಪ್‌ನ ಮಾಲೀಕರಾಗಿದ್ದ ಇವರು, ಕೆಲ ತಿಂಗಳ ಹಿಂದೆ ಉದ್ಯಮಿ ಅರವಿಂದ ರೆಡ್ಡಿ ಎಂಬುವರಿಗೆ ಬೆದರಿಕೆ ಹಾಕಿದ ಪ್ರಕರಣದಡಿ ಬಂಧನಕ್ಕೊಳಗಾಗಿದ್ದರು. ಇದಾಗಿ ಕೆಲ ದಿನಗಳ ಬಳಿಕ ಜಾಮೀನು ಪಡೆದು ಹೊರಬಂದಿದ್ದರು.

ಬಳಿಕ ಇದೇ ವಿಚಾರಕ್ಕೆ ವೈಶಾಖ್ ದಂಪತಿ ನಡುವೆ ಕೌಟುಂಬಿಕ ಕಲಹ ಏರ್ಪಟ್ಟಿತ್ತು. ಇದರಿಂದ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ವೈಶಾಖ್ ಆಗಾಗ ಸ್ನೇಹಿತೆ ಕೃಷಿ ತಾಪಂಡ ಮನೆಗೆ ಬಂದು ಹೋಗುತ್ತಿದ್ದರು. ಗಲಾಟೆ ವಿಕೋಪಕ್ಕೆ ಹೋಗಿದ್ದರಿಂದ ಒಂದು ತಿಂಗಳಿಂದ ಪತ್ನಿಯ ಜೊತೆ ಮಾತನಾಡುತ್ತಿರಲಿಲ್ಲ. ಆದರೆ, ನಿನ್ನೆ ಪತ್ನಿಗೆ ವಾಟ್ಸಾಪ್ ಸಂದೇಶ ಕಳುಹಿಸಿ ಮಗ ಹಾಗೂ ಮಾವನ ಬಗ್ಗೆ ವಿಚಾರಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.



ಕೃಷಿ ತಾಪಂಡ ಮತ್ತು ಮೃತ ವೈಶಾಖ್

ಆದರೆ ನಿನ್ನೆ ರಾತ್ರಿ ಕೃಷಿ ತಾಪಂಡ ಮನೆಯಲ್ಲಿ ಇಲ್ಲದ ವೇಳೆ ಅವರ ಮನೆಯಲ್ಲೇ ಫ್ಯಾನ್‌ಗೆ ನೇಣು ಹಾಕಿಕೊಂಡಿರುವ ಸ್ಥಿತಿಯಲ್ಲಿ ವೈಶಾಖ್ ಶವ ಪತ್ತೆಯಾಗಿದೆ. ಈ ಸಂಬಂಧ ವೈಶಾಖ್ ಕುಟುಂಬದವರು ನೀಡಿದ ದೂರಿನನ್ವಯ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಕಣ್ಣೀರಿಡುತ್ತಾ ಗೆಳೆಯನ ಅಂತಿಮ ಸಂಸ್ಕಾರಕ್ಕೆ ತೆರಳಿದ್ದ ಕೃಷಿ ತಾಪಂಡ ಅವರನ್ನು ವೈಶಾಖ್ ಕುಟುಂಬದವರು ತಡೆದು, ಆಕ್ರೋಶ ವ್ಯಕ್ತಪಡಿಸಿದ್ದರಿಂದ ಅವರು ಅಲ್ಲಿಂದ ವಾಪಸ್ಸಾಗಿದ್ದಾರೆ.

ವೆನೆಜುವೆಲಾದಲ್ಲಿ ಪ್ರಬಲ ಅವಳಿ ಭೂಕಂಪ; 164 ಸಾವು

970ಕ್ಕೂ ಹೆಚ್ಚು ಮಂದಿಗೆ ಗಾಯ

ಕರಾಕಾಸ್: ವೆನೆಜುವೆಲಾ ಕರಾವಳಿಯ ಸಮೀಪ ಸಂಭವಿಸಿದ ಪ್ರಬಲ ಅವಳಿ ಭೂಕಂಪಗಳು ದೇಶವನ್ನೇ ಬೆಚ್ಚಿಬೀಳಿಸಿವೆ. ಕೇವಲ 1 ನಿಮಿಷದ ಅಂತರದಲ್ಲಿ 7.2 ಮತ್ತು 7.5 ತೀವ್ರತೆಯ ಭೂಕಂಪಗಳು ಸಂಭವಿಸಿದ ಪರಿಣಾಮ ಅನೇಕ ಕಟ್ಟಡಗಳು ಕುಸಿದಿವೆ. ಈ ಘೋರ ದುರಂತದಲ್ಲಿ 164 ಮಂದಿ ಸಾವನ್ನಪ್ಪಿದ್ದು, 900 ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಹಂಗಾಮಿ ಅಧ್ಯಕ್ಷ ರೊಡ್ರಿಗಸ್ ನೀಡಿರುವ ಪ್ರಕಾರ, ಈವರೆಗೆ ಅವಳಿ ಭೂಕಂಪದಲ್ಲಿ ಕನಿಷ್ಠ 164 ಜನ ಸಾವನ್ನಪ್ಪಿದ್ದು, ಇನ್ನೂ ಹೆಚ್ಚಾಗುವ ನಿರೀಕ್ಷೆಯಿದೆ. 970 ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಬೃಹತ್ ಪ್ರಮಾಣದ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳು ನಡೆಯುತ್ತಿವೆ.

ಅಮೆರಿಕದ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ ಮಾಹಿತಿ ಪ್ರಕಾರ, ಮೊದಲ ಭೂಕಂಪದ ಕೇಂದ್ರಬಿಂದುವು ಕೆರಿಬಿಯನ್ ಕರಾವಳಿಯಲ್ಲಿ ಪತ್ತೆಯಾಗಿದೆ. ಮೊರೊನ್ ಪಟ್ಟಣದ ಪಶ್ಚಿಮಕ್ಕೆ, ಕರಾಕಾಸ್‌ನಿಂದ ಪಶ್ಚಿಮಕ್ಕೆ ಸುಮಾರು 168 ಕಿಲೋಮೀಟರ್ ದೂರದಲ್ಲಿ, 13 ಕಿಲೋಮೀಟರ್ ಆಳದಲ್ಲಿದೆ ದಾಖಲಾಗಿದೆ.

ಅದರ ಬೆನ್ನಲ್ಲೇ ಇನ್ನೊಂದು 7.5 ತೀವ್ರತೆಯ ಭೂಕಂಪ ಸಂಭವಿಸಿದೆ. ಇದರ ಕೇಂದ್ರಬಿಂದು ಮೊರೊನ್‌ನಿಂದ ನೈಋತ್ಯಕ್ಕೆ ಸುಮಾರು 16 ಕಿಲೋಮೀಟರ್ ದೂರದಲ್ಲಿ, 10 ಕಿಮೀ ಆಳದಲ್ಲಿ ಪತ್ತೆಯಾಗಿದೆ.

ರಾಜಧಾನಿ ಕರಾಕಾಸ್ ಸೇರಿದಂತೆ ಹಲವು ನಗರಗಳಲ್ಲಿ ಕಟ್ಟಡಗಳು ತೀವ್ರವಾಗಿ ಅಲುಗಾಡಿದ ಪರಿಣಾಮ ಜನರು ಭಯಭೀತರಾಗಿ ಮನೆಗಳಿಂದ ಹೊರಗೆ ಧಾವಿಸಿದರು. ಕೆಲ ಪ್ರದೇಶಗಳಲ್ಲಿ ಕಟ್ಟಡಗಳ ಗೋಡೆಗಳು ಕುಸಿದು ಬಿದ್ದಿದ್ದು, ರಸ್ತೆಗಳಲ್ಲಿ ಅವಶೇಷಗಳ ರಾಶಿ ಕಂಡುಬಂದಿದೆ. ಭೂಕಂಪದ ತೀವ್ರತೆಗೆ ಮುಗಿಲೆತ್ತರದ ಕಟ್ಟಡಗಳು ವಾಲಿಕೊಂಡಿವೆ. ಹಲವೆಡೆ ವಿದ್ಯುತ್ ಕಂಬಗಳು ಉರುಳಿದ್ದು, ಸಂಚಾರ ಹಾಗೂ ಸಂಪರ್ಕ ವ್ಯವಸ್ಥೆ ಅಸ್ತವ್ಯಸ್ತಗೊಂಡಿದೆ.

ವಿದ್ಯುತ್ ಸಂಪರ್ಕ ಸ್ಥಗಿತ : ಭೂಕಂಪದ ನಂತರ ಕರಾಕಾಸ್‌ನ ಕೆಲವು ಪ್ರದೇಶಗಳಲ್ಲಿ ಮೊಬೈಲ್ ನೆಟ್‌ವರ್ಕ್ ಮತ್ತು ವಿದ್ಯುತ್ ಸೇವೆ ಸಂಪೂರ್ಣ ಸ್ಥಗಿತಗೊಂಡಿದೆ. ಕುಟುಂಬ ಸದಸ್ಯರೊಂದಿಗೆ ಸಂಪರ್ಕ ಸಾಧಿಸಲು ಸಾಧ್ಯವಾಗದೇ ಅನೇಕರು ಆತಂಕಕ್ಕೆ ಒಳಗಾಗಿದ್ದಾರೆ. ಭೂಕಂಪದಿಂದ ಭಯಭೀತರಾದ ಜನರು ಗಂಟೆಗಟ್ಟಲೆ ರಸ್ತೆಗಳಲ್ಲಿ ಆಶ್ರಯ ಪಡೆದಿರುವ ದೃಶ್ಯಗಳು ಕಂಡುಬಂದಿವೆ. ಭೀಕರ ಭೂಕಂಪದ ಹಿನ್ನೆಲೆ ವೆನೆಜುವೆಲಾದ ಮುಖ್ಯ ವಿಮಾನ ನಿಲ್ದಾಣವನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ.

ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಜಯ

ಮೈಸೂರು, ಜೂ.25(ವಿವಿಹೆಚ್)– ಕ್ರಾಂತಿ ಕುಮಾರ್ ಮಾರಕ ದಾಳಿ, ನಾಯಕ ಮ್ಯಾಕ್ನಿಲ್ ನೊರೊನ್ಹಾ ಆಕ್ರಮಣಕಾರಿ ಬ್ಯಾಟಿಂಗ್ ನೆರವಿನಿಂದ ಬಲಿಷ್ಠ ಹುಬ್ಬಳ್ಳಿ ಟೈಗರ್ಸ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿದ ಗುಲ್ಬರ್ಗಾ ಮಿಸ್ಟಿಕ್ಸ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿತು.



ಗುಲ್ಬರ್ಗಾ ಬೌಲಿಂಗ್‌ಗೆ ಬೆದರಿ, ಸ್ಥಿರ ಪ್ರದರ್ಶನ ನೀಡುವಲ್ಲಿ ವಿಫಲವಾದ ಹುಬ್ಬಳ್ಳಿ ಟೈಗರ್ಸ್ ಅಲ್ಪ ಮೊತ್ತಕ್ಕೆ ಕುಸಿಯಿತು. ಶಿಖರ್ ಶೆಟ್ಟಿ ಅಜೇಯ 27(17), ಅಭಿನವ್ ಮನೋಹರ್ 21(28), ಎಲ್.ಮನ್ವಂತ್ ಕುಮಾರ್ 17(14), ಮಯಾಂಕ್ ಅಗರ್ವಾಲ್ 16(13) ಹೊರತುಪಡಿಸಿ, ಉಳಿದ 7 ಮಂದಿ ಆಟಗಾರರು ಒಂದಂಕಿ ಮೊತ್ತಕ್ಕೆ ಕುಸಿದರು. ಇದರ ಪರಿಣಾಮವಾಗಿ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ ಕೇವಲ 119 ರನ್ ಗಳಿಸಲಷ್ಟೇ ಶಕ್ತವಾಯಿತು.

ಗುಲ್ಬರ್ಗಾ ಪರ ಕ್ರಾಂತಿಕುಮಾರ್ 17 ರನ್‌ಗೆ ಪ್ರಮುಖ 3 ವಿಕೆಟ್ ಕಬಳಿಸಿದರು. ಗೌತಮ್ ಮಿಶ್ರ, ರೋನಿತ್ ಮೋರೆ, ಪರಾಸ್ ಆರ್ಯ, ನಾಯಕ್ ಮ್ಯಾಕ್ನಿಲ್ ಹಾಗೂ ಸುಹಾಸ್ ಪುರುಷೋತ್ತಮ್ ತಲಾ ಒಂದೊಂದು ವಿಕೆಟ್ ಪಡೆದು ಗಮನಸೆಳೆದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಗುಲ್ಬರ್ಗಾಕ್ಕೆ ಆರಂಭಿಕ ಆಘಾತ ಎದುರಾಯಿತು. ಲೋಚನ್ ಗೌಡ 9(7), ಬಿ.ಆರ್.ಶರತ್ 18(10), ಪ್ರಖರ್ ಚತುರ್ವೇದಿ 11(10) ಮೂವರ ವಿಕೆಟ್ 49 ರನ್‌ಗಳಿಸುವಷ್ಟರಲ್ಲೇ ಉರುಳಿತು.

ಈ ವೇಳೆ ಒಂದಾದ ನಾಯಕ ಮ್ಯಾಕ್ನಿಲ್ ನೊರೊನ್ಹಾ ಹಾಗೂ ತಿಪ್ಪಾ ರೆಡ್ಡಿ ಅಜೇಯರಾಗಿ ಉಳಿದು, 49 ಎಸೆತಗಳಲ್ಲಿ 71 ರನ್ ಕಲೆಹಾಕಿ ತಂಡಕ್ಕೆ ಗೆಲುವು ತಂದುಕೊಟ್ಟರು. ತಿಪ್ಪಾ ರೆಡ್ಡಿ 24 ಎಸೆತಗಳಲ್ಲಿ 34 ರನ್ ಬಾರಿಸಿದರೆ, ನಾಯಕ ಮ್ಯಾಕ್ನಿಲ್ 29 ಎಸೆತಗಳಲ್ಲಿ 3 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 42 ರನ್ ಗಳಿಸಿದರು. ಇದೊಂದಿಗೆ 13.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 120 ರನ್ ಗಳಿಸಿ, ಗುಲ್ಬರ್ಗಾ ಗೆದ್ದು ಬೀಗಿದರು.

ಇತ್ತ ಹುಬ್ಬಳ್ಳಿ ಪರ ಶಿಖರ್ ಶೆಟ್ಟಿ 2 ವಿಕೆಟ್, ಎಲ್.ಆರ್.ಕುಮಾರ್ ಒಂದು ವಿಕೆಟ್ ಪಡೆದರು.

ಗುಲ್ಬರ್ಗಾ ಮಿಸ್ಟಿಕ್ಸ್‌ನ ಬೌಲರ್ ಕ್ರಾಂತಿ ಕುಮಾರ್ 3 ಓವರ್‌ಗಳಲ್ಲಿ 17 ರನ್ ನೀಡಿ 3 ವಿಕೆಟ್ ಕಬಳಿಸುವ ಮೂಲಕ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಆಶೀರ್ವಾದ



ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರದಲ್ಲಿ ಶ್ರೀವೀರಾಂಜನೇಯ ಮಹಾಸಂಸ್ಥಾನಮ್ ಬಂಗಾರಮಕಿ ಪೀಠಾಧಿಪತಿ ಶ್ರೀ ಮಾರುತಿ ಗುರೂಜಿರವರ ಸಾನ್ನಿಧ್ಯದಲ್ಲಿ ನಡೆಯುತ್ತಿರುವ ಶ್ರೀರಾಮತಾರಕ ಹೋಮ, ಸಿಂಧೂರ ಅರ್ಚನೆ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಾದ ಪಡೆದ ವಿಧಾನ ಪರಿಷತ್ ಸದಸ್ಯರಾದ ಆರ್ ರಘು ಕೌಟಿಲ್ಯ ಈ ಸಂದರ್ಭದಲ್ಲಿ ಸಂಚಾಲಕರಾದ ಮನು.ವಿ, ಪ್ರದೀಪ್ ಗೌಡ, ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಕಡಕೊಳ ಜಗದೀಶ್, ಟಿ ಎಸ್ ಅರುಣ್ ಹಾಗೂ ಇನ್ನಿತರರು ಹಾಜರಿದ್ದರು

ಮೈಸೂರು ಮಿತ್ರ ಶುಕ್ರವಾರ 26 ಜೂನ್ 2026

ತೋಟದ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕರ ಮೇಲೆ ಕಾಡಾನೆ ದಾಳಿ


ದಿಕ್ಕಾಪಾಲಾಗಿ ಓಡಿ ಜೀವ ಉಳಿಸಿಕೊಂಡ ಕಾರ್ಮಿಕರು

ಆಯತಪ್ಪಿ ಬಿದ್ದು ಮಹಿಳೆಗೆ ಗಾಯ



ಸಿದ್ದಾಪುರ, ಜೂ.25– ಕಾಫಿ ತೋಟದ ಕೆಲಸಕ್ಕೆ ತೆರಳುತ್ತಿದ್ದ ಕಾರ್ಮಿಕರ ಮೇಲೆ ಒಂಟಿ ಸಲಗವೊಂದು ಏಕಾಏಕಿ ದಾಳಿ ನಡೆಸಿದ್ದು, ಮಹಿಳೆಯೊಬ್ಬರು ಆಯತಪ್ಪಿ ಬಿದ್ದು, ಗಾಯಗೊಂಡಿದ್ದು, ಉಳಿದವರು ಪಾರಾದ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ವ್ಯಾಪ್ತಿಯ ಪಳ್ಳಕೆರೆಯಲ್ಲಿ ನಡೆದಿದೆ.

ಕಾರ್ಮಿಕರು ಎಂದಿನಂತೆ ತೋಟಕ್ಕೆ ಕೆಲಸಕ್ಕೆ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ಎದುರಾದ ಆನೆಯೊಂದು ಕಾರ್ಮಿಕರನ್ನು ಅಟ್ಟಾಡಿಸಿದೆ. ಆನೆ ದಾಳಿಯಿಂದ ತಪ್ಪಿಸಿಕೊಳ್ಳಲು ಕಾರ್ಮಿಕರು ಪ್ರಾಣಭಯದಿಂದ ಯದ್ವಾ–ತದ್ವಾ ಓಡಿದ್ದಾರೆ.



ಕಾಫಿ ಗಿಡಗಳ ನಡುವೆ ಓಡುವ ಸಂದರ್ಭ ಸೌಮ್ಯ ಎಂಬುವರು ಆಯತಪ್ಪಿ ಕೆಳಗೆ ಬಿದ್ದಿದ್ದಾರೆ.

ಇದರಿಂದ ಸೌಮ್ಯ ಅವರ ತಲೆ ಹಾಗೂ ಕಾಲಿನ ಭಾಗಕ್ಕೆ ಗಾಯಗಳಾಗಿದ್ದು, ಸಿದ್ದಾಪುರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಗಾಯಾಳು ಸೌಮ್ಯ ಪ್ರಾಣಾಪಾಯದಿಂದ ಪಾರಾಗಿದ್ದು, ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಉಳಿದ ಕಾರ್ಮಿಕರು ಸಿಕ್ಕ–ಸಿಕ್ಕ ಕಡೆ ಓಡಿ ಜೀವ ಉಳಿಸಿಕೊಂಡಿದ್ದಾರೆ.

ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಸ್ಥಳೀಯರು, ಈ ವ್ಯಾಪ್ತಿಯಲ್ಲಿ ದಿನದಿಂದ ದಿನಕ್ಕೆ ಕಾಡಾನೆ ಹಾವಳಿ ಹೆಚ್ಚಾಗುತ್ತಿದೆ. ಕಾವೇರಿ ನದಿ ದಾಟಿ 20ಕ್ಕೂ ಅಧಿಕ ಆನೆಗಳು ಪಳ್ಳಕೆರೆ ವ್ಯಾಪ್ತಿಗೆ ಬಂದಿವೆ. ಆನೆಗಳು ಬಂದಾಗ ಕಾರ್ಯಾಚರಣೆ ಮಾಡುತ್ತೇವೆ ಎಂದು ಹೇಳುವ ಅರಣ್ಯ ಇಲಾಖೆ ಸಿಬ್ಬಂದಿಗಳು ಆನೆಗಳನ್ನು ಅರಣ್ಯಕ್ಕೆ ಅಟ್ಟದೆ ಬೇರೊಂದು ಕಡೆ ತಾತ್ಕಾಲಿಕವಾಗಿ ಅಟ್ಟುವ ಮೂಲಕ ಕಾರ್ಯಾಚರಣೆ ನಡೆಸಲಾಗಿದೆ ಎಂದು ಹೇಳಿಕೆ ನೀಡುತ್ತಾರೆ ಎಂದು ಕೂಗಾಡಿದರು.

ಇದರಿಂದಾಗಿ ಬೇರೆ ತೋಟದಲ್ಲಿ ಬೀಡು ಬಿಡುವ ಆನೆಗಳ ಹಿಂಡು ಮತ್ತೆ ಹಿಂತಿರುಗಿ ಮೂಲ ಸ್ಥಾನಗಳಿಗೆ ಮರಳುತ್ತಿವೆ. ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಇದೆ ಪರಿಸ್ಥಿತಿಯಿದೆ. ಈ ಸಮಸ್ಯೆಯನ್ನು ಅರಣ್ಯ ಇಲಾಖೆಯ ಅಧಿಕಾರಿಗಳು, ಸಂಬಂಧಪಟ್ಟ ಸಚಿವರು, ಸ್ಥಳೀಯ ಶಾಸಕರು ಗಂಭೀರವಾಗಿ ಪರಿಗಣಿಸಿ, ಪ್ರಾಣ ಹಾನಿ ಸಂಭವಿಸುವ ಮೊದಲು ಕಾಡಾನೆ ಹಾವಳಿ ನಿಯಂತ್ರಣಕ್ಕೆ ಶಾಶ್ವತ ಪರಿಹಾರ ಹುಡುಕಬೇಕು ಎಂದು ಆಗ್ರಹಿಸಿದ್ದಾರೆ.

ರಸಗೊಬ್ಬರ ಕೃತಕ ಅಭಾವ ಸೃಷ್ಟಿ

ಡೀಲರ್‌ಗಳ ವಿರುದ್ಧ ಕ್ರಮಕ್ಕೆ ಕೆಆರ್‌ಎಸ್ ಪಕ್ಷ ಆಗ್ರಹ

ಚಾಮರಾಜನಗರ, ಜೂ.25– ರಸಗೊಬ್ಬರಗಳ ಕೃತಕಅಭಾವ, ನಿಗದಿತ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವ ಡೀಲರ್‌ಗಳ ವಿರುದ್ಧ ಕೃಷಿ ಇಲಾಖಾಧಿಕಾರಿಗಳು ಕಾನೂನು ಪ್ರಕಾರ ಕ್ರಮಕೈಗೊಳ್ಳಬೇಕು ಎಂದು ಕರ್ನಾಟಕ ರಾಷ್ಟ್ರೀಯ ಪಕ್ಷ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸಶಾಸ್ತ್ರಿ ಒತ್ತಾಯಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಕೆಆರ್‌ಎಸ್ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸಶಾಸ್ತ್ರಿ ಮಾತನಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯೂರಿಯಾ ರಸಗೊಬ್ಬರದ ಗರಿಷ್ಠ ಮಾರಾಟ ಬೆಲೆ ಪ್ರತಿ ಚೀಲಕ್ಕೆ 145 ರಿಂದ 266 ರೂ. ಇದೆ. ಅದು 320 ರಿಂದ 600 ರವರೆಗೂ ಮಾರಾಟವಾಗುತ್ತಿದೆ ಡಿಎಪಿ ಗೊಬ್ಬರದ ಗರಿಷ್ಠ ಮಾರಾಟ 1.350 ರಿಂದ 1450 ಇದ್ದು, ಅದು 2100 ಗೆ ಮಾರಾಟವಾಗುತ್ತಿದೆ. ಕಳೆದ ಹಲವಾರು ವರ್ಷಗಳಿಂದ ರಸಗೊಬ್ಬರ ಪೂರೈಕೆಯಲ್ಲಿ ರೈತರಿಗೆ ನಿರಂತರವಾಗಿ ಮೋಸ ನಡೆಯುತ್ತಿದೆ. ಲಿಂಕ್ ವಾಡಕ್ಸ್ ಹೆಸರಿನಲ್ಲಿ ರೈತರನ್ನು ಸುಲಿಗೆ ಮಾಡಲಾಗುತ್ತಿದೆ.

ಇವೆಲ್ಲವೂ ಹಲವು ದಶಕಗಳಿಂದ ನಿರಂತರವಾಗಿ ನಡೆದುಕೊಂಡು ಬಂದಿದ್ದು, ಇವೆಲ್ಲವನ್ನು ಪ್ರಶ್ನಿಸಿದರೆ ಕೇಂದ್ರ ಸರ್ಕಾರದಿಂದ ಸ್ಪಂದನೆ ಸಿಗುತ್ತಿಲ್ಲ. ಇಂತಹ ವಿಚಾರಗಳನ್ನು ಜನರ ಮುಂದಿಡಬೇಕಾದ ಅಧಿಕಾರಿಗಳು ಮತ್ತು ಬೆಲೆ ಕುಸಿತದಿಂದ ಬೇಸತ್ತಿರುವ ರೈತರಿಗೆ ಗಾಯಗಳ ಮೇಲೆ ಬರೆಗಳನ್ನು ಎಳೆಯುತ್ತಿದ್ದಾರೆ ಎಂದು ಆರೋಪಿಸಿದರು.

ಕೆಆರ್‌ಎಸ್ ಪಕ್ಷದ ಜಿಲ್ಲಾಧ್ಯಕ್ಷ ಎಸ್. ಶಿವದೇವಪ್ಪ ಮಾತನಾಡಿ, ತಕ್ಷಣವೇ ರೈತರಿಗೆ ಅಗತ್ಯವಿರುವಷ್ಟು ರಸಗೊಬ್ಬರವನ್ನು ಪೂರೈಕೆ ಮಾಡಬೇಕು, ಎಲ್ಲಾ ರಸಗೊಬ್ಬರ ಮಾರಾಟಗಾರರು (ಎಫ್‌ಸಿಓ ಕಾಯಿದೆ 1985) ಪರತ್ತುಗಳ ಪ್ರಕಾರ ರಸಗೊಬ್ಬರ ಅಂಗಡಿಗಳಲ್ಲಿ ಬೆಲೆ, ಸ್ಟಾಕ್ ವಿವರ, ಇತ್ಯಾದಿಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು.

ರಸಗೊಬ್ಬರ ಅಕ್ರಮಗಳ ಬಗ್ಗೆ ದೂರು ನೀಡಲು ಸಂಬಂಧಪಟ್ಟ ತಾಲ್ಲೂಕು ಸಹಾಯಕ ಕೃಷಿ ಅಧಿಕಾರಿಯ ಮೊಬೈಲ್ ನಂಬರ್ ಅನ್ನು ಪ್ರದರ್ಶನ ಫಲಕದಲ್ಲಿ ನಮೂದಿಸಬೇಕು.

ರಸಗೊಬ್ಬರ ಮಾರಾಟ ಕಂಪನಿಗಳು ಕಡ್ಡಾಯವಾಗಿ ರಸಗೊಬ್ಬರಗಳನ್ನು ನಿಯಮಗಳ ಪ್ರಕಾರ ಅಂಗಡಿಗಳ ಬಾಗಿಲಿಗೆ (ಡೋರ್ ಡೆಲಿವರಿ) ಮಾಡುವುದನ್ನು ಖಾತ್ರಿಪಡಿಸಿಕೊಳ್ಳಬೇಕು.

ರಸಗೊಬ್ಬರ ಕಂಪನಿಗಳು ಸಬ್ಸಿಡಿ ರಸಗೊಬ್ಬರದ ಜೊತೆಗೆ ಡೀಲರ್‌ಗಳಿಗೆ ಲಿಂಕ್ ಪ್ರಾಡಕ್ಟ್‌ಗಳನ್ನು ನೀಡುವುದನ್ನು ನಿಲ್ಲಿಸಬೇಕು, ಲಿಂಕ್ ಪ್ರಾಡಕ್ಟ್‌ಗಳನ್ನು ರೈತರಿಗೆ ಬಲವಂತವಾಗಿ ಮಾರುವುದನ್ನು ನಿಲ್ಲಿಸಬೇಕು.

ನಿಯಮಗಳನ್ನು ಮೀರುತ್ತಿರುವ ಬಗ್ಗೆ ಯಾವುದೇ ದೂರು ಬಂದಾಗ ಆ ಡೀಲರ್ಸ್‌ಗಳ ಪರವಾನಗಿ ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ರಸಗೊಬ್ಬರ ದರ ಹೆಚ್ಚಳ, ಗೊಬ್ಬರಗಳ ಕೃತಕ ಅಭಾವ ಸೃಷ್ಟಿಸುವ ಸಂದರ್ಭ ಎದುರಾದಲ್ಲಿ ರೈತರು ಪಕ್ಷದ (ಸಹಾಯವಾಣಿ ಸಂ: 7349577130)ಗೆ ಕರೆಮಾಡಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದರು.

ಗೋಷ್ಠಿಯಲ್ಲಿ ಜಿಲ್ಲಾ ಕಾರ್ಯದರ್ಶಿ ಕಂದಹಳ್ಳಿ ಮಹೇಶ್, ಚಾ.ನಗರ ತಾಲೂಕು ಅಧ್ಯಕ್ಷ ಶಂಕರ್. ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಶಿವಪ್ಪನಾಯಕ, ಶಿವಶಂಕರ್, ಮಧುನಾಯಕ, ಕುಮಾರ್ ಹಾಜರಿದ್ದರು.

ಮಾದಕ ವಸ್ತುವಿನ ಬಗ್ಗೆ ಜಾಗೃತಿ

ನಾಪೋಕ್ಲು: ಇಲ್ಲಿಗೆ ಸಮೀಪದ ಮೂರ್ನಾಡು ಪದವಿಪೂರ್ವ ಕಾಲೇಜಿನ ಎನ್‌ಎಸ್‌ಎಸ್ ಘಟಕ ಮತ್ತು ಗ್ರಾಮಾಂತರ ಪೊಲೀಸ್ ಠಾಣೆ ವತಿಯಿಂದ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತುವಿನ ಬಳಕೆಯ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಗ್ರಾಮಾಂತರ ಠಾಣೆಯ ಠಾಣಾಧಿಕಾರಿ ಗೋಪಾಲ್ ಮಕ್ಕಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಸಹಾಯಕ ಠಾಣಾಧಿಕಾರಿ ದಿನೇಶ್ ಮಾದಕ ವಸ್ತುವಿನ ದುಷ್ಪರಿಣಾಮ ಮತ್ತು ಅಪ್ರಾಪ್ತರು ವಾಹನ ಚಲಾಯಿಸುವುದರಿಂದ ಆಗುವ ಅನಾಹುತಗಳ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿದ್ಯಾಸಂಸ್ಥೆ ಕಾರ್ಯದರ್ಶಿ ವೇಣು ಅಪ್ಪಣ್ಣ, ಪಿಎಸ್‌ಐ ಪುಟ್ಟಮ್ಮ ಮತ್ತು ಪ್ರಾಂಶುಪಾಲರಾದ ದೇವಕಿ ಮಾತನಾಡಿದರು.

ಈ ಸಂದರ್ಭ ಬೋಧಕ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.


ಜಪಾನ್‌ನ ಏಷಿಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ಗೆ ದಿಯಾ ಬೋಪಯ್ಯ



ಮಡಿಕೇರಿ, ಜೂ.25– ಭಾರತದ ಜೂನಿಯರ್ ತಂಡದ ಪ್ರಥಮ ಶ್ರೇಣಿ ಆಟಗಾರ್ತಿಯಾದ ಬೊಪ್ಪಂಡ ದಿಯಾ ಭೀಮಯ್ಯ ಜಪಾನಿನಲ್ಲಿ ಜೂ.26ರಿಂದ ಜು.5ರವರೆಗೆ ನಡೆಯುವ ಪ್ರತಿಷ್ಠಿತ ಏಷಿಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

2025ರಲ್ಲಿ ಭಾರತವನ್ನು ಸಬ್ ಜೂನಿಯರ್ ವಿಭಾಗದಲ್ಲೂ ಪ್ರತಿನಿಧಿಸಿದ್ದ ದಿಯಾ ಭೀಮಯ್ಯ, ಉತ್ತಮ ಪ್ರದರ್ಶನ ತೋರಿದ್ದರು. 2026ರ ಏಪ್ರಿಲ್‌ನಲ್ಲಿ ನಡೆದ ಅಂತರಾಷ್ಟ್ರೀಯ ಜೂನಿಯರ್ ಡಚ್ ಹಾಗೂ ಜರ್ಮನ್ ಟೂರ್ನಿಯಲ್ಲಿ ದೇಶವನ್ನು ಪ್ರತಿನಿಧಿಸಿದ್ದರು. ಮೈಸೂರಿನ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ಅರುಣ್ ಪೆಮ್ಮಯ್ಯ ಅವರ ಬಳಿ ಮೊದಲಿಗೆ ದಿಯಾ ಭೀಮಯ್ಯ ತರಬೇತಿ ಪಡೆದಿದ್ದರು. ಇದೀಗ ಭಾರತದ ಪ್ರತಿಷ್ಠಿತ ಬ್ಯಾಡ್ಮಿಂಟನ್ ಸಂಸ್ಥೆಯಾದ ನ್ಯಾಷನಲ್ ಸೆಂಟರ್ ಆಫ್ ಎಕ್ಸೆಲೆನ್ಸ್ ಅಸ್ಸಾಂನ ಗೌಹಾಟಿಯಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಸುಬ್ರಾಯ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ನೆಲಜಿ ಗ್ರಾಮದ ನಿವಾಸಿ ಮನವಟ್ಟಿರ ಸುಬ್ರಾಯ (ಸುಬ್ರಮಣಿ) ಬುಧವಾರ ನಿಧನರಾದರು. ಅವರಿಗೆ 84 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆ ಗುರುವಾರ ನೆಲಜಿ ಗ್ರಾಮದಲ್ಲಿ ಜರುಗಿತು. ಮೃತರು ಪತ್ನಿ ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಗಣೇಶ



ನಾಪೋಕ್ಲು: ಭಾಗಮಂಡಲ, ತಾವೂರು ಗ್ರಾಮದ ಕೋಳಿಬೈಲು ದಿ.ಸುಬ್ಬಯ್ಯ ಅವರ ಪುತ್ರ ಗಣೇಶ (63) ಗುರುವಾರ ನಿಧನರಾದರು. ಮೃತರು ಪತ್ನಿ ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ತಾವೂರು ಗ್ರಾಮದಲ್ಲಿ ಜರುಗಿತು.

ಕೊಡಗು ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣೆ ಉಸ್ತುವಾರಿ ಸಚಿವರಾಗಿ ಯು.ಟಿ.ಖಾದರ್ ನೇಮಕ



ಮಡಿಕೇರಿ,ಜೂ.25– ಮುಂಗಾರು ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯ ಪ್ರಕೃತಿ ವಿಕೋಪ ನಿರ್ವಹಣೆಯ ಉಸ್ತುವಾರಿ ಸಚಿವರಾಗಿ ಯು.ಟಿ.ಖಾದರ್ ಅವರನ್ನು ನೇಮಕ ಮಾಡಲಾಗಿದೆ.

ಜಿಲ್ಲೆಗಳಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ, ಮುನ್ನೆಚ್ಚರಿಕೆ ಹಾಗೂ ಪರಿಹಾರ ಕಾರ್ಯಗಳನ್ನು ಸಮನ್ವಯಗೊಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಜಿಲ್ಲಾ ಉಸ್ತುವಾರಿ ಸಚಿವರನ್ನು ನೇಮಕ ಮಾಡಿ ಆದೇಶಿಸಿದೆ.

ಭಾರೀ ಮಳೆ ಭೂ ಕುಸಿತ ಸೇರಿದಂತೆ ಮಳೆಗಾಲದಲ್ಲಿ ಎದುರಾಗುವ ತುರ್ತು ಪರಿಸ್ಥಿತಿಗಳನ್ನು ಸಮರ್ಥವಾಗಿ ನಿರ್ವಹಿಸುವುದು, ಜಿಲ್ಲಾಡಳಿತದೊಂದಿಗೆ ಸಮನ್ವಯ ಸಾಧಿಸುವುದು ಹಾಗೂ ಪರಿಹಾರ ಕಾರ್ಯಗಳ ಮೇಲ್ವಿಚಾರಣೆ ನಡೆಸುವುದು ಉಸ್ತುವಾರಿ ಸಚಿವರ ಪ್ರಮುಖ ಜವಾಬ್ದಾರಿಯಾಗಿರಲಿದೆ.

ಡಾ.ಯತೀಂದ್ರ ಸಿದ್ದರಾಮಯ್ಯರಿಗೆ ಚಾಮರಾಜನಗರ ಜಿಲ್ಲೆ ಉಸ್ತುವಾರಿ



ಚಾಮರಾಜನಗರ, ಜೂ.25– ರಾಜ್ಯದಲ್ಲಿ ಮಳೆಗಾಲದ ಹಿನ್ನೆಲೆಯಲ್ಲಿ ಸಂಭವಿಸಬಹುದಾದ ಪ್ರಕೃತಿ ವಿಕೋಪಗಳನ್ನು ಸಮರ್ಥವಾಗಿ ನಿರ್ವಹಿಸುವ ಉದ್ದೇಶದಿಂದ ಸರ್ಕಾರ ಜಿಲ್ಲಾವಾರು ಪ್ರಕೃತಿ ವಿಕೋಪ ಮೇಲುಸ್ತುವಾರಿ ಅಧಿಕಾರಿಗಳನ್ನು ನೇಮಕ ಮಾಡಿದ್ದು, ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳ ಉಸ್ತುವಾರಿಯಾಗಿ ಡಾ. ಯತೀಂದ್ರ ಸಿದ್ದರಾಮಯ್ಯ ಅವರನ್ನು ನೇಮಕ ಮಾಡಲಾಗಿದೆ.

ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ತ್ವರಿತ ಸ್ಪಂದನೆ, ಸಮನ್ವಯ ಹಾಗೂ ಪರಿಹಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಡೆಸುವ ನಿಟ್ಟಿನಲ್ಲಿ ಜಿಲ್ಲಾವಾರು ಜವಾಬ್ದಾರಿಗಳನ್ನು ಹಂಚಿಕೆ ಮಾಡಿ ಸಿಎಂ ಡಿ.ಕೆ.ಶಿವಕುಮಾರ್ ಆದೇಶ ಹೊರಡಿಸಿದ್ದು, ಈ ಆದೇಶ ತಕ್ಷಣ ದಿಂದ ಜಾರಿಗೆ ಬಂದಿದೆ.

ಮಳೆಗಾಲದಲ್ಲಿ ಎದುರಾಗಬಹುದಾದ ಪ್ರವಾಹ, ಭೂಕುಸಿತ ಸೇರಿದಂತೆ ವಿವಿಧ ಪ್ರಕೃತಿ ವಿಕೋಪಗಳಿಗೆ ತ್ವರಿತ ಸ್ಪಂದನೆ ನೀಡುವ ಉದ್ದೇಶದಿಂದ ಈ ನೇಮಕಾತಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ



ಗುಂಡ್ಲುಪೇಟೆ ಪಟ್ಟಣದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಠದ ಟ್ರಸ್ಟ್ ವತಿಯಿಂದ ಮೈಸೂರಿನ ಜೆಪಿ ನಗರದಲ್ಲಿರುವ ಕಾಮಾಕ್ಷಿ ಹಾಸ್ಪಿಟಲ್ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ರಾಜೇಶ್ವರಿ ಚಂದ್ರಶೇಖರ್, ವೈದ್ಯರಾದ ಡಾ.ವಿಕ್ರಂ, ಡಾ.ಸಿಂಧು, ಡಾ.ಚೈತ್ರ ಡಾ.ಪ್ರೀತಮ್ ಕುಮಾರ್, ಮಂಡಲ್, ಕರೆನ್ ಅಬ್ರಹಾಂ ಇದ್ದರು

ಬಸಮ್ಮ ನಿಧನ



ಚಾಮರಾಜನಗರ: ನಗರದ ರಾಮಸಮುದ್ರದ ನಿವಾಸಿಯಾದ ಬಸಮ್ಮ (92) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಚಾಮರಾಜನಗರ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಿಗೆ ಪಿಆರ್‌ಓ ಆರ್.ಎಂ.ಸ್ವಾಮಿ, ಗುರುಸ್ವಾಮಿ ಎಂಬ ಇಬ್ಬರು ಪುತ್ರರು, ದೇವಮಣ್ಣಿ, ಅಂಬಿಕಾ ಎಂಬ ಇಬ್ಬರು ಪುತ್ರಿಯರು ಸೇರಿದಂತೆ ಕುಟುಂಬಸ್ಥರು ಹಾಗೂ ಅಪಾರ ಬಂದು ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥೀವ ಶರೀರವನ್ನು ರಾಮ ಸಮುದ್ರದ ಕುಲುಮೆ ರಸ್ತೆಯಲ್ಲಿರುವ ಮನೆಯಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಮಧ್ಯಾಹ್ನ ಸುಮಾರು 3 ಗಂಟೆಯ ಸಮಯಕ್ಕೆ ರಾಮ ಸಮುದ್ರದಲ್ಲಿರುವ ಮೃತರ ಜಮೀನಿನಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ದೇಶದಲ್ಲಿ 37 ಕೋಟಿ ಮಾದಕ ವ್ಯಸನಿಗಳಿದ್ದಾರೆ

ಕೆ.ಟಿ.ಹನುಮಂತು ಅಭಿಪ್ರಾಯ

ಮಂಡ್ಯ, ಜೂ.25– ಪ್ರಸ್ತುತ ಭಾರತ ದೇಶದಲ್ಲಿ 37 ಕೋಟಿ ಮಾದಕ ವ್ಯಸನಿಗಳಿದ್ದಾರೆ ಎಂದು ಅಂತರಾಷ್ಟ್ರೀಯ ಅಲಯನ್ಸ್ ಸಂಸ್ಥೆ ಸೌತ್ ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಕೆ.ಟಿ.ಹನುಮಂತು ಅಭಿಪ್ರಾಯಪಟ್ಟರು.



ಮಂಡ್ಯದಲ್ಲಿ ಅಂತರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನ ನಡೆಯಿತು.

ನಗರದ ಮಾಜಿ ಪುರಸಭೆ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕೃಷಿಕ ಅಲಯನ್ಸ್ ಸಂಸ್ಥೆ, ಮಾಂಡವ್ಯ ಅಲಯನ್ಸ್ ಸಂಸ್ಥೆ, ದ್ವಾರಕ ಅಲಯನ್ಸ್ ಸಂಸ್ಥೆ, ಜಿಲ್ಲಾ ಆರೋಗ್ಯ ಇಲಾಖೆ, ಮಾಜಿ ಪುರಸಭೆ ಸರ್ಕಾರಿ ಪದವಿಪೂರ್ವ ಕಾಲೇಜು ಸಹಯೋಗದಲ್ಲಿ ನಡೆದ 'ವಿಶ್ವ ಮಾದಕ ವಸ್ತು ಸಮಸ್ಯೆ: ಮುಂದುವರಿದ ಸಮಸ್ಯೆಗಳು ನವೀನ ಪ್ರತಿಕ್ರಿಯೆಗಳು' ಎಂಬ ಘೋಷವಾಕ್ಯದೊಂದಿಗೆ ಅಂತರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ದಿನ–2026, ಜಾಗೃತಿ ಜಾಥಾ, ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವಾರ್ಷಿಕ 9 ಕೋಟಿ ಮಂದಿ ಮಾದಕ ವ್ಯಸನಿಗಳು ಸಾವನ್ನಪ್ಪುತ್ತಿದ್ದಾರೆ. ನಮ್ಮ ಕರ್ನಾಟಕದ ಬಜೆಟ್ 3 ಲಕ್ಷ ಕೋಟಿ ರೂ. ನಷ್ಟು ದೇಶದಲ್ಲಿ ಮಾದಕ ವಸ್ತುಗಳ ಮಾರಾಟ ವ್ಯವಹಾರ ನಡೆಯುತ್ತಿದೆ ಎಂದು ಎಚ್ಚರಿಸಿದರು.

ರಾಜ್ಯದಲ್ಲಿ 15 ಸಾವಿರ ಕೋಟಿ ರೂ.ನಷ್ಟು ಮಾದಕ ವಸ್ತುಗಳ ವ್ಯವಹಾರ ನಡೆಯುತ್ತಿದೆ. ಡ್ರಗ್ಸ್, ಗಾಂಜಾ, ಅಫೀಮು, ಮತ್ತು ಬರುವಂತಹ ವಸ್ತುಗಳು, ದ್ರವ್ಯಗಳ ವ್ಯಾಪಾರ ಹೆಗ್ಗಿಲ್ಲದೇ ನಡೆಯುತ್ತಿದ್ದು, ಇದು ಅಪಾಯಕಾರಿ ಬೆಳವಣಿಗೆ. ಮಂಡ್ಯ ಜಿಲ್ಲೆಯಲ್ಲೂ ಗಾಂಜಾ, ಮಾದಕ ವಸ್ತುಗಳ ಮಾರಾಟವನ್ನು ಪೊಲೀಸರು ಭೇದಿಸಿದ್ದಾರೆ ಎಂದರು.

ಮಾದಕ ವಸ್ತುಗಳನ್ನು ಕಾಲೇಜು ವಿದ್ಯಾರ್ಥಿಗಳೇ ಹೆಚ್ಚಾಗಿ ಬಳಸುವುದರಿಂದ ಅವರಲ್ಲಿ ಜಾಗೃತಿ ಮೂಡಿಸುವುದು ಅತ್ಯವಶ್ಯ. ಒಂದು ಬಾರಿ ಮಾದಕ ವಸ್ತುಗಳ ಸೇವನೆಗೆ ದಾಸರಾದರೆ ಮುಗಿಯಿತು ಸದಾ ಅದನ್ನೇ ಬೇಡುತ್ತದೆ. ಯುವಕರನ್ನೇ ಹೆಚ್ಚು ಟಾರ್ಗೆಟ್ ಮಾಡಿ ಉಚಿತವಾಗಿ ನೀಡಿ ನಂತರ ಹಣ ಪಡೆದು ಕೊಂಡುಕೊಳ್ಳುವಂತೆ ಮಾಡುತ್ತಾರೆ ಎಚ್ಚರಿಕೆಯಿಂದ ಇರಿ ಎಂದು ಸಲಹೆ ನೀಡಿದರು.

ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಅಧಿಕಾರಿ ಡಾ.ಆಶಾಲತಾ ಮಾತನಾಡಿ, ನಿಮ್ಮ ಆರೋಗ್ಯ ನಿಮ್ಮ ಕೈಯ್ಯಲ್ಲಿದೆ ಎನ್ನುವುದನ್ನು ಮರೆಯಬೇಡಿ. ಕುಷ್ಠ ರೋಗ ಮತ್ತು ಏಡ್ಸ್ ರೋಗದ ಲಕ್ಷಣಗಳು ಕಂಡು ಬಂತ ತಕ್ಷಣ ಚಿಕಿತ್ಸೆ ನೀಡಿದರೆ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದರು.

ಬೀಡಿ, ಸಿಗರೇಟ್, ಮಾದಕ ವಸ್ತುಗಳ ಸೇವನೆಯಿಂದ ಚಿಕ್ಕ ವಯಸ್ಸಿಗೆ ಹೃದಯಾಘಾತ, ಕ್ಷಯ ರೋಗ ಹೆಚ್ಚಾಗುತ್ತಿದೆ. 1 ವಾರ ಜ್ವರವಿದ್ದರೆ, 2 ವಾರ ಕೆಮ್ಮಿದ್ದರೆ ಕ್ಷಯ ರೋಗಗಳ ಲಕ್ಷಣವಾಗಿರಬಹುದು ಎಂದು ಸಲಹೆ ನೀಡಿದರು.

ಈ ವೇಳೆ ನಗರಸಭೆ ಆವರಣದಲ್ಲಿ ಸಂಘಟಕರು ಮತ್ತು ವಿದ್ಯಾರ್ಥಿಗಳು ಮಾದಕ ವಸ್ತುಗಳ ಬಳಕೆ ವಿರುದ್ಧ ಘೋಷಣೆ ಕೂಗಿ ಮೈಸೂರು–ಬೆಂಗಳೂರು ಹೆದ್ದಾರಿಯ ಫುಟ್‌ಪಾತ್ ಅಂಚಿನಲ್ಲಿ ಜಾಥಾ ನಡೆಸಿ, ಜನರಲ್ಲಿ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಪಿಯು ಡಿಡಿಪಿಐ ಪ್ರಸನ್ನಕುಮಾರ್, ಪ್ರಾಂಶುಪಾಲ ಗುರುಲಿಂಗೇಗೌಡ, ತಂಬಾಕು ಕೋಶಾಧಿಕಾರಿ ತಿಮ್ಮರಾಜು, ಮಾಂಡವ್ಯ ಅಲಯನ್ಸ್ ಸಂಸ್ಥೆ ಅಧ್ಯಕ್ಷ ಡಾ.ಶಿವಕುಮಾರ್, ದ್ವಾರಕ ಅಲಯನ್ಸ್ ಸಂಸ್ಥೆ ಅಧ್ಯಕ್ಷೆ ಪವಿತ್ರಾ ನಾಗರಾಜ್, ಜಿಲ್ಲಾ ಖಜಾಂಚಿ ಧನಂಜಯ್, ಪ್ರೊ.ಡೇವಿಡ್ ಸೇರಿದಂತೆ ಹಲವರಿದ್ದರು.

ಜೀತ ಪದ್ಧತಿಯಿಂದ ವಿಮುಕ್ತಗೊಂಡ

ಕುಟುಂಬಗಳಿಗೆ ಸರ್ಕಾರ ಶಾಶ್ವತ ನೆಲೆ ಕಲ್ಪಿಸಲಿ

ಕೆಂಪಯ್ಯನಹುಂಡಿ ಪ್ರಕರಣದ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಆಲಗೂಡು ಶಿವಕುಮಾರ್ ಆಗ್ರಹ

ತಿ.ನರಸೀಪುರ, ಜೂ.25– ತಾಲೂಕಿನ ಬೇವಿನಹಳ್ಳಿಯಲ್ಲಿ ಜೀತ ಪದ್ಧತಿಯಿಂದ ವಿಮುಕ್ತಗೊಂಡ ಕುಟುಂಬಗಳಿಗೆ ಅದೇ ಗ್ರಾಮದಲ್ಲಿ ಗ್ರಾಮಠಾಣ ಜಾಗ ಗುರುತಿಸಿ ಶಾಶ್ವತ ನೆಲೆ ಹಾಗೂ ಬದುಕು ಕಟ್ಟಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಒತ್ತಾಯಿಸಿದರು.



ಸಭೆಯಲ್ಲಿ ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ನಡೆದ ದಲಿತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಹಾಗೂ ಜೀತ ನಿರ್ಮೂಲನಾ ಕಾಯ್ದೆ ಜಾರಿಗೆ ಬಂದು 50 ವರ್ಷ ಕಳೆದರೂ ಜೀತ ಪದ್ಧತಿ ಜೀವಂತವಾಗಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು.

ತಾಲೂಕಿನಲ್ಲಿ ಜೀತ ಪದ್ಧತಿಯನ್ನು ಬೆಳಕಿಗೆ ತಂದ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಐಜೆಎಂ ಸಂಸ್ಥೆ ಕಾರ್ಯ ಶ್ಲಾಘನೀಯ. ಕಳೆದ 8 ವರ್ಷಗಳಿಂದ ಜೀತ ಪದ್ಧತಿಗೆ ಒಳಗಾಗಿ ಶೋಷಣೆಗೆ ಗುರಿಯಾಗಿದ್ದ ಮುತ್ತಣ್ಣ ಮತ್ತು ಜ್ಯೋತಿ ದಂಪತಿ ಅನುಭವಿಸುತ್ತಿದ್ದ ಕಿರುಕುಳವನ್ನು ಮಡಿಲು ಸಂಸ್ಥೆ ಅಧಿಕಾರಿಗಳ ಗಮನಕ್ಕೆ ತಂದ ನಂತರ ಈ ಪ್ರಕರಣ ಬೆಳಕಿಗೆ ಬಂದಿದೆ ಎಂದು ತಿಳಿಸಿದರು.

ಜೀತ ಪದ್ಧತಿಗೆ ಒಳಗಾಗಿದ್ದ 28 ಮಂದಿಯನ್ನು ರಕ್ಷಿಸಿ ನಿರಾಶ್ರಿತ ಕೇಂದ್ರದಲ್ಲಿ ಆಶ್ರಯ ಕಲ್ಪಿಸಲಾಗಿದೆ. ಆದರೆ ಅವರಿಗೆ ಶಾಶ್ವತ ಪುನರ್ವಸತಿ ಕಲ್ಪಿಸುವುದು ಸರ್ಕಾರದ ಜವಾಬ್ದಾರಿ. ಬೇವಿನಹಳ್ಳಿಯಲ್ಲಿ ಹಲವು ದಶಕಗಳಿಂದ ವಾಸಿಸುತ್ತಿರುವ ಈ ಕುಟುಂಬಗಳಿಗೆ ಗ್ರಾಮಠಾಣ ಜಾಗ ಮಂಜೂರು ಮಾಡಿ ಮನೆ ನಿರ್ಮಾಣಕ್ಕೆ ನೆರವು ನೀಡಬೇಕು ಎಂದು ಒತ್ತಾಯಿಸಿದರು.

ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಆಗ್ರಹ: ಕೆಂಪಯ್ಯನಹುಂಡಿಯಲ್ಲಿ ಒಂದೇ ಕುಟುಂಬದ ಮೂವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಶಿವಕುಮಾರ್ ಆಗ್ರಹಿಸಿದರು.

ಯುವತಿ ಕುಟುಂಬದವರು ಉಲ್ಲಾಸ್‌ಗೌಡನಿಗೆ ನೀಡಿದ್ದ ಸಲುಗೆಯನ್ನು ದುರುಪಯೋಗಪಡಿಸಿಕೊಂಡು, ಯುವತಿಯೊಂದಿಗೆ ತೆಗೆದಿದ್ದ ಫೋಟೋ ಇಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡಿರುವ ಆರೋಪ ಕೇಳಿ ಬಂದಿದೆ. ಈ ಮಾನಸಿಕ ಕಿರುಕುಳವೇ ಕುಟುಂಬದ ಮೂವರ ಆತ್ಮಹತ್ಯೆಗೆ ಕಾರಣವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ ಎಂದರು.

ಪ್ರಕರಣದಲ್ಲಿ ಉಲ್ಲಾಸ್‌ಗೌಡ ಹಾಗೂ ಆತನ ತಾಯಿ ವಿರುದ್ಧ ಪ್ರಕರಣ ದಾಖಲಾಗಿದ್ದು, ಉಲ್ಲಾಸ್‌ಗೌಡನನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಪ್ರಕರಣದ ಇನ್ನೋರ್ವ ಆರೋಪಿ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳದಂತೆ ಕ್ರಮ ಕೈಗೊಂಡು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ದಸಂಸ ಅಂಬೇಡ್ಕರ್ ವಾದದ ವಿಭಾಗೀಯ ಸಂಚಾಲಕ ಬನ್ನಳ್ಳಿ ಸೋಮಣ್ಣ ಮಾತನಾಡಿದರು.

ಸಭೆಯಲ್ಲಿ ಮಡಿಲು ಸಂಸ್ಥೆಯ ಶ್ರೀನಿವಾಸ್, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ವಾಟಾಳ್ ನಾಗರಾಜು, ತಾಲೂಕು ಸಂಚಾಲಕ ಬಸವ ರಾಜು, ತಾಲೂಕು ಸಂಘಟನಾ ಸಂಚಾಲಕ ಕಿರಗಸೂರು ರಜನಿ, ನಾಗರಾಜಮೂರ್ತಿ ಹಾಜರಿದ್ದರು.

ಸಾಸಲು ದೇವಾಲಯದ ಹುಂಡಿಯಲ್ಲಿ 4.80 ಲಕ್ಷ ಸಂಗ್ರಹ

ಕಿಕ್ಕೇರಿ, ಜೂ.25– ಹೋಬಳಿಯ ಸಾಸಲು ಕ್ಷೇತ್ರದ ಮುಜರಾಯಿ ದೇಗುಲವಾದ ಸೋಮೇಶ್ವರ, ಶಂಭುಲಿಂಗೇಶ್ವರ ದೇಗುಲದ ಹುಂಡಿಯಲ್ಲಿ 4.80 ಲಕ್ಷ ರೂ. ಸಂಗ್ರಹವಾಗಿದೆ.

ಮುಜರಾಯಿ ಇಲಾಖೆ ಅಧಿಕಾರಿ, ತಹಸೀಲ್ದಾರ್ ಎಸ್.ಯು.ಅಶೋಕ್ ಮಾರ್ಗದರ್ಶನ, ಉಪ ತಹಸೀಲ್ದಾರ್ ವೀಣಾ ಅವರ ನೇತೃತ್ವದಲ್ಲಿ ಪೊಲೀಸರ ಬಿಗಿ ಭದ್ರತೆಯಲ್ಲಿ ದೇಗುಲದ ಆವರಣದಲ್ಲಿ ನಡೆದ 16 ಹುಂಡಿಗಳ ಎಣಿಕೆಯಲ್ಲಿ ಎರಡೂ ದೇಗುಲಗಳಿಂದ 4,80,025 ರೂ., ಸಂಗ್ರಹವಾಗಿದ್ದು, ಬೆಳ್ಳಿ ಲೇಪನದ ನಾಗರ ಸೆಡೆ, ತೊಟ್ಟಿಲಿನಂತಹ ವಸ್ತುಗಳು ಹರಕೆ ರೂಪದಲ್ಲಿ ಭಕ್ತರು ದೇವರಿಗೆ ಅರ್ಪಿಸಿದ್ದಾರೆ.



ಸೋಮೇಶ್ವರ, ಶಂಭುಲಿಂಗೇಶ್ವರ ದೇವಾಲಯದ ಹುಂಡಿ ಎಣಿಕೆ ನಡೆಯಿತು.

ಇದೇ ವೇಳೆ ದೇಗುಲ ಜೀರ್ಣೋದ್ಧಾರವಾಗಿಲ್ಲ. ದೇವರ ದರ್ಶನ ಮಾಡಲು, ಸ್ನಾನ ಮಾಡಿ ಬಟ್ಟೆ ಬದಲಾಯಿಸಿಕೊಳ್ಳಲು ತೊಂದರೆಯಾಗುತ್ತಿದೆ. ತ್ವರಿತವಾಗಿ ಮೂಲ ಸೌಲಭ್ಯ ಕಲ್ಪಿಸಿ ಎಂದು ಗ್ರಾಮಸ್ಥರು ಹಾಗೂ ಭಕ್ತರು ಅಧಿಕಾರಿಗಳ ಬಳಿ ಮನವಿ ಸಲ್ಲಿಸಿದರು.

ಹುಂಡಿಯಲ್ಲಿ ದೊರೆತ ಹಣವನ್ನು ಕೆ.ಆರ್.ಪೇಟೆ ಪಟ್ಟಣದಲ್ಲಿರುವ ಬ್ಯಾಂಕ್ ಆಫ್ ಬರೋಡಾದ ದೇಗುಲದ ಮುಜರಾಯಿ ಖಾತೆಗೆ ಜಮಾ ಮಾಡಲಾಯಿತು.

ಈ ವೇಳೆ ರಾಜಸ್ವ ನಿರೀಕ್ಷಕ ಡಿ.ಆರ್.ನರೇಂದ್ರ, ಗ್ರಾಮ ಆಡಳಿತಾಧಿಕಾರಿ ಪ್ರಸನ್ನ, ತಿಪ್ಪೇಶ್, ಸುನೀಲ್ ಗಾಣಿಗೇರ್, ಗ್ರಾಮ ಸಹಾಯಕರು, ಬ್ಯಾಂಕ್ ಆಫ್ ಬರೋಡಾ ಸಿಬ್ಬಂದಿ, ಗ್ರಾಮದ ಮುಖಂಡರು ಭಾಗವಹಿಸಿದ್ದರು.

ಹಲಗೂರು ಬಳಿ ಚಿರತೆ ದಾಳಿಗೆ ಕರು ಬಲಿ

ಹಲಗೂರು, ಜೂ.25– ಚಿರತೆ ದಾಳಿಗೆ ಕರು ಬಲಿಯಾಗಿರುವ ಘಟನೆ ಬಾಣಹಳ್ಳಿ ಗ್ರಾಮದಲ್ಲಿ ಬುಧವಾರ ತಡರಾತ್ರಿ ನಡೆದಿದೆ.

ಗ್ರಾಮದ ನಿವಾಸಿ ಬಿ.ಎಸ್.ರಮೇಶ್ ಅವರಿಗೆ ಸೇರಿದ 2 ತಿಂಗಳ ಕರು ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದು ಅರೆಬರೆ ತಿಂದು ಪರಾರಿಯಾಗಿದೆ. ಜೀವನೋಪಾಯಕ್ಕಾಗಿ ಕೃಷಿ ಹಾಗೂ ಹಸು ಸಾಕಾಣೆ ಮಾಡುತ್ತಿರುವ ರಮೇಶ್ ಅವರು ಎಂದಿನಂತೆ ತಮ್ಮ ತೋಟದ ಮನೆಯ ಕೊಟ್ಟಿಗೆಯಲ್ಲಿ ಹಸು–ಕರುಗಳನ್ನು ಕಟ್ಟಿ ಹಾಕಿದ್ದರು. ಆದರೆ ಬುಧವಾರ ರಾತ್ರಿ ಚಿರತೆ ದಾಳಿ ನಡೆಸಿ ಕರುವನ್ನು ಬಲಿ ಪಡೆದಿದೆ.

ವಿಷಯ ತಿಳಿದು ಮಳವಳ್ಳಿ ಮತ್ತು ಹಲಗೂರು ಅರಣ್ಯ ಇಲಾಖೆ ಗಸ್ತು ಪಾಲಕ ಕೃಷ್ಣ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಚಿರತೆ ದಾಳಿಯಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಹೀಗಾಗಿ ಕೂಡಲೇ ಕ್ರಮ ಕೈಗೊಂಡು ಚಿರತೆ ಸೆರೆಗೆ ಮುಂದಾಗಬೇಕು. ಜೊತೆಗೆ ಸೂಕ್ತ ಪರಿಹಾರ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದರು.

5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಲು ಜಾಗೃತಿ ಮೂಡಿಸಿ



ನಂಜನಗೂಡು, ಜೂ.25– ಪೋಲಿಯೋ ಮುಕ್ತ ಸಮಾಜ ನಿರ್ಮಾಣದಲ್ಲಿ ಪ್ರತಿಯೊಬ್ಬರ ಪಾತ್ರ ಮಹತ್ವದ್ದಾಗಿದ್ದು, 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸುವಂತೆ ಜಾಗೃತಿ ಮೂಡಿಸಿ ಎಂದು ತಾಲೂಕು ಆರೋಗ್ಯಾಧಿಕಾರಿ ಈಶ್ವರ್ ಕಾನಟ್ಟೆ ತಿಳಿಸಿದರು.

ನಗರದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯಲ್ಲಿ ಪಲ್ಸ್ ಪೋಲಿಯೋ ಅಭಿಯಾನವನ್ನು ಯಶಸ್ವಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ಆಯೋಜಿಸಲಾಗಿದ್ದ ಸ್ವಯಂ ಸೇವಕರಿಗೆ ಪೂರ್ವಭಾವಿ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪೋಲಿಯೋ ಲಸಿಕೆ ಬಗ್ಗೆ ಗ್ರಾಮೀಣ ಭಾಗದ ಪೋಷಕರಲ್ಲಿ ತಪ್ಪು ಕಲ್ಪನೆಗಳಿವೆ. ಅದನ್ನು ದೂರವಾಗಿಸಲು ಸ್ವಯಂ ಸೇವಕರು ಮನೆ ಮನೆಗೆ ತೆರಳಿ ಪೋಲಿಯೋ ಲಸಿಕೆ ಬಗ್ಗೆ ಅರಿವು ಮೂಡಿಸಬೇಕು. 5 ವರ್ಷದೊಳಗಿನ ಮಕ್ಕಳು ಪೋಲಿಯೋ ಲಸಿಕೆಯಿಂದ ವಂಚಿತರಾಗದಂತೆ ನೋಡಿಕೊಳ್ಳುವ ಮೂಲಕ ಪೋಲಿಯೋ ಮುಕ್ತ ಸಮಾಜ ನಿರ್ಮಾಣಕ್ಕೆ ನೀವೆಲ್ಲರೂ ಕೈ ಜೋಡಿಸಬೇಕು. ಸಿಬ್ಬಂದಿಗಳ ಕೊರತೆಯಿಂದಾಗಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಸಲುವಾಗಿ ಕಾಲೇಜಿನ ವಿದ್ಯಾರ್ಥಿಗಳನ್ನು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸುವಂತೆ ಮನವಿ ಮಾಡಿದ್ದು ಅವರಿಗೆ ಸೂಕ್ತ ತರಬೇತಿ ನೀಡಲಾಗಿದೆ. ಪಲ್ಸ್ ಪೋಲಿಯೋ ಕಾರ್ಯಕ್ರಮ ಜೂ.28ರಿಂದ ಜು.1 ರವರೆಗೆ ನಡೆಯಲಿದ್ದು, ಪೋಷಕರು ತಪ್ಪದೇ ನಿಮ್ಮ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿ ಎಂದು ಕರೆ ನೀಡಿದರು.

ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಯಧು ಗಿರೀಶ್ ಮಾತನಾಡಿ, ತರಬೇತಿಯಲ್ಲಿ ಪೋಲಿಯೋ ಲಸಿಕೆ ನೀಡುವ ವಿಧಾನ, ಲಸಿಕೆ ಸಂಗ್ರಹಣೆ, ಮಕ್ಕಳ ಗುರುತಿಸುವಿಕೆ, ಮನೆ ಭೇಟಿ ವೇಳೆ ಅನುಸರಿಸಬೇಕಾದ ಕ್ರಮಗಳು, ದಾಖಲಾತಿ ನಿರ್ವಹಣೆ ಹಾಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಆರ್.ನಯನ ಮಾತನಾಡಿ, ಸ್ವಯಂ ಸೇವಕರು ಸಮರ್ಪಣಾ ಮನೋಭಾವದಿಂದ ಕಾರ್ಯ ನಿರ್ವಹಿಸಿದರೆ ಪೋಲಿಯೋ ಲಸಿಕೆ ಕಾರ್ಯಕ್ರಮ ಸಂಪೂರ್ಣ ಯಶಸ್ವಿಯಾಗಲಿದೆ ಎಂದು ತಿಳಿಸಿದರು.

ಪ್ರಾಂಶುಪಾಲ ಸಿ.ಆರ್.ದಿನೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ.ಸರ್ವೇಶ್, ಆಶಾ ಮೇಲ್ವಿಚಾರಕರಾದ ಶಶಿಕಲಾ, ನಾಗವೇಣಿ, ನಟರಾಜು ಇದ್ದರು.

ವಿದ್ಯುತ್ ಸ್ಪರ್ಶ: ವ್ಯಕ್ತಿ ಸಾವು



ತಿ.ನರಸೀಪುರ, ಜೂ.25– ವಿದ್ಯುತ್ ಸ್ಪರ್ಶಗೊಂಡ ಪರಿಣಾಮ ವ್ಯಕ್ತಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಎಸ್.ಮೇಗಡಹಳ್ಳಿಯಲ್ಲಿ ಗುರುವಾರ ಬೆಳಗ್ಗೆ ನಡೆದಿದೆ.

ಗ್ರಾಮದ ನಿವಾಸಿ ಮಹದೇವಸ್ವಾಮಿ (42) ಸಾವನ್ನಪ್ಪಿದವರು. ಈತ ಕೂಲಿ ಕೆಲಸ ಮಾಡುವ ಮೂಲಕ ಕುಟುಂಬ ನಿರ್ವಹಣೆ ಮಾಡುತ್ತಿದ್ದರು. ಗುರುವಾರ ಬೆಳಗ್ಗೆ ಮಹದೇವಸ್ವಾಮಿ ಅವರು ತಮ್ಮ ಮನೆಯ ದನದ ಕೊಟ್ಟಿಗೆಯಲ್ಲಿ ವಿದ್ಯುತ್ ದೀಪ ಅಳವಡಿಸುವ ವೇಳೆ ಆಕಸ್ಮಿಕವಾಗಿ ವಿದ್ಯುತ್ ಸ್ಪರ್ಶಗೊಂಡು ಕೆಳಗೆ ಬಿದ್ದಿದ್ದಾರೆ ಎನ್ನಲಾಗಿದೆ. ತಕ್ಷಣ ಮಹದೇವಸ್ವಾಮಿ ಪತ್ನಿ ಭಾರತಿ ತಮ್ಮ ಸಹೋದರ ದೇವೇಂದ್ರಸ್ವಾಮಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದು, ದೇವೇಂದ್ರಸ್ವಾಮಿ ಹಾಗೂ ಸಂಬಂಧಿಕರು ಸ್ಥಳಕ್ಕಾಗಮಿಸಿ ಮಹದೇವಸ್ವಾಮಿ ಅವರನ್ನು ಕಾರಿನಲ್ಲಿ ತಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದು, ಆಸ್ಪತ್ರೆಯಲ್ಲಿ ಪರೀಕ್ಷೆ ನಡೆಸಿದ ವೈದ್ಯರು ಸಾವನ್ನಪ್ಪಿರುವುದನ್ನು ಖಚಿತ ಪಡಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ತಿ.ನರಸೀಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಶವ ಹಸ್ತಾಂತರಿಸಿದ್ದಾರೆ.

'ಕೆಎ-18' ಎರಡು ಪಾತ್ರಗಳ ಸುತ್ತ ಹಾರರ್ ಥ್ರಿಲ್ಲರ್ ಕಥೆ



ಕನ್ನಡದಲ್ಲೀಗ ವಿಭಿನ್ನ ಟೈಟಲ್ ಇರೋ ಚಿತ್ರಗಳೇ ನಿರ್ಮಾಣವಾಗುತ್ತಿವೆ. ಅಂಥವುಗಳಲ್ಲಿ 'ಕೆಎ-18' ಕೂಡ ಒಂದು. ಮೋಹನ್ ಚಿಕ್ಕಿ ಅವರ ನಿರ್ದೇಶನದ ಈ ಚಿತ್ರದಲ್ಲಿ ಎಟಿಎಂ ಮಂಜು ಹಾಗೂ ನಟಿ ತನಿಷಾ ಕುಪ್ಪಂಡ ಪ್ರಮುಖ ಪಾತ್ರಗಳಲ್ಲಿದ್ದಾರೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ಸಮಾರಂಭ ನಡೆಯಿತು. ಹಿರಿಯ ಸಾಹಿತಿ ಡಾ.ವಿ.ನಾಗೇಂದ್ರ ಪ್ರಸಾದ್ ಪ್ರಥಮ ದೃಶ್ಯಕ್ಕೆ ಕ್ಲಾಪ್ ಮಾಡಿ ಶುಭ ಹಾರೈಸಿದರು. ನಟ ಮನೋಜ್ ಕ್ಯಾಮರಾ ಚಾಲನೆ ಮಾಡಿದರು. ಅಪ್ಪಾಜಿ ಪ್ರೊಡಕ್ಷನ್ಸ್ ಅಡಿ ಹಿರೇಮಗಳೂರಿನ ಎ.ಟಿ.ಎಂ.ಮಂಜು ಈ ಚಿತ್ರವನ್ನು ನಿರ್ಮಿಸುತ್ತಿದ್ದು, ಜತೆಗೆ ನಾಯಕನಾಗೂ ನಟಿಸುತ್ತಿದ್ದಾರೆ. ಮೋಹನ್ ಚಿಕ್ಕಿ ಅವರು ಈ ಹಿಂದೆ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದು ಇದು ಅವರ ಮೂರನೇ ಚಿತ್ರ. ಉತ್ತರಖಂಡ ಮೂಲದ ಸೋನಿಯಾ ರಾವುತ್ ಚಿತ್ರದ ಸಹ ನಿರ್ಮಾಪಕಿ.

ಈ ವೇಳೆ ಮಾತನಾಡಿದ ನಿರ್ದೇಶಕ ಮೋಹನ್, ನಿರ್ಮಾಪಕರು ಹೇಳಿದ ಸತ್ಯಘಟನೆಯನ್ನು ಆಧಾರವಾಗಿಟ್ಟುಕೊಂಡು ಈ ಚಿತ್ರಕಥೆ ಮಾಡಿಕೊಂಡಿದ್ದೇವೆ. ಹಾರರ್, ಸಸ್ಪೆನ್ಸ್ ಜತೆಗೆ ಥ್ರಿಲ್ಲರ್ ಕಥಾಹಂದರ ಇರುವ ಈ ಚಿತ್ರದಲ್ಲಿ ಸಂಜೆ 6 ರಿಂದ ಬೆಳಗ್ಗೆ 6 ಗಂಟೆಯವರೆಗೆ ನಡೆಯುವ ಘಟನೆಗಳೇ ಪ್ರಮುಖ ಕಥಾವಸ್ತು, ಮುಖ್ಯವಾಗಿ ಎರಡು ಪಾತ್ರಗಳ ಸುತ್ತ ನಡೆಯುವ ಕಥೆ ಇದಾಗಿದ್ದು, ಚಿಕ್ಕಮಗಳೂರು ಸಮೀಪ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಲಾಗುವುದು ಎಂದರು.

ನಿರ್ಮಾಪಕ ಕಮ್ ನಾಯಕ ಎ.ಟಿ.ಎಂ.ಮಂಜು ಮಾತನಾಡಿ, ಶಾಲಾ ಕಾಲೇಜು ದಿನಗಳಿಂದಲೂ ನನಗೆ ಸಿನಿಮಾ ಮಾಡಬೇಕೆಂಬ ಹುಚ್ಚಿತ್ತು. ಅದಕ್ಕೀಗ ಕಾಲ ಕೂಡಿಬಂದಿದೆ. 25 ವರ್ಷಗಳ ಹಿಂದೆ ನನ್ನ ತಂದೆಯೊಂದಿಗೆ ಕೆಮ್ಮಣ್ಣುಗುಂಡಿಗೆ ಹೋದಾಗ ಅಲ್ಲಿ ನೋಡಿದಂಥ ಒಂದು ಘಟನೆಯನ್ನು ನಿರ್ದೇಶಕರಿಗೆ ವಿವರಿಸಿದೆ. ನಾಯಕ, ನಾಯಕಿ ಇಬ್ಬರೂ ಅರಣ್ಯದಲ್ಲಿ ಸಂಶೋಧನೆಗೆಂದು ಹೋಗುತ್ತಿದ್ದಾಗ ಅವರಿಗೆ ವಿಚಿತ್ರ ಅನುಭವಗಳಾಗುತ್ತವೆ. ಆತಂಕವೂ ಸೃಷ್ಟಿಯಾಗುತ್ತದೆ, ಕೊನೆಗೆ ಅವರು ಅಲ್ಲಿಂದ ಹೇಗೆ ಪಾರಾದರು ಎಂಬುದನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ ಎಂದು ಹೇಳಿದರು.

ನಟಿ ತನಿಷಾ ಕುಪ್ಪಂಡ ಮಾತನಾಡುತ್ತ ಚಿತ್ರದಲ್ಲಿ ನಾನು ಅಂಕಿತಾ ಎಂಬ ಪಾತ್ರ ಮಾಡುತ್ತಿದ್ದೇನೆ. ಕಾಡುದಾರಿಯಲ್ಲಿ ಒಬ್ಬ ಅಪರಿಚಿತ ವ್ಯಕ್ತಿಯೊಂದಿಗೆ ನಾನು ನಡೆದುಕೊಂಡು ಹೋಗುವಾಗ ಯಾರು, ಯಾರಿಗೆ ತೊಂದರೆ ಕೊಡುತ್ತಾರೆ ಎನ್ನುವುದೇ ಚಿತ್ರದ ಕುತೂಹಲ ಎಂದರು.



ಇವರೇ ನಮ್ಮ ಮಹಾನ್ ಕಿಲಾಡಿಗಳು





ಟ್ಯಾಲೆಂಟ್ ಎನ್ನುವುದು ಯಾರೊಬ್ಬರ ಸ್ವತ್ತೂ ಅಲ್ಲ. ಈ ಹಿಂದೆ 'ಕಾಮಿಡಿ ಕಿಲಾಡಿಗಳು' ರಿಯಾಲಿಟಿ ಶೋ ಮೂಲಕ ಹಲವು ಪ್ರತಿಭೆಗಳು ಬೆಳಕಿಗೆ ಬಂದರು. ಅವರಲ್ಲಿ ಮಿಂಚು, ಪ್ರವೀಣ್ ಗಸ್ತಿ ಗೋಕಾಕ್ ಮತ್ತು ಚಿದಂಬರ ಪೂಜಾರಿ ನಮ್ಮ ಕಣ್ಣ ಮುಂದಿದ್ದಾರೆ. ಇವರುಗಳೆಲ್ಲ ಸೇರಿ ಇದೀಗ 'ಮಹಾನ್ ಕಿಲಾಡಿಗಳು' ಎಂಬ ಕಾಮಿಡಿ ರಿಯಾಲಿಟಿ ಶೋ ಆರಂಭಿಸಿದ್ದಾರೆ. 'ಟ್ಯಾಲೆಂಟ್ ನಿಮ್ಮದು, ವೇದಿಕೆ ನಮ್ಮದು' ಎಂಬ ಅಡಿಬರಹ ಇರುವ ಈ ಶೋನ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ವಿಧಾನಪರಿಷತ್ ಸದಸ್ಯ ಟಿ.ಶರವಣ, ಉದ್ಯಮಿ ಡಾ.ಎನ್.ನರಸಿಂಹ ಮೂರ್ತಿ, ಶ್ರೀಕಾಂತ್, ಡಾ.ಮೋಕ್ಷಗೊಂಡಂ ಗುರೂಜಿ ಮತ್ತು ಭಾರ್ಗವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು.

ಈ ವೇಳೆ ಮಹಾನ್ ಕಿಲಾಡಿಯ ರೂವಾರಿ ಮಿಂಚು ಮಾತನಾಡುತ್ತ, ಅವಕಾಶಗಳಿಲ್ಲದೆ ಇರುವಾಗ, ನಮ್ಮ ಅವಕಾಶವನ್ನು ನಾವೇ ರೂಪಿಸಿಕೊಳ್ಳಬೇಕು. ನಾನು ಕಲಿತದ್ದನ್ನು ಬೇರೆಯವರಿಗೆ ಹೇಳಿಕೊಡಬೇಕು ಎಂಬ ಕಲ್ಪನೆಯನ್ನು ಗೆಳೆಯ ಪ್ರವೀಣ್‌ಗಸ್ತಿಗೆ ಹೇಳಿದಾಗ, ಅವರು ನನಗೆ ಬೆನ್ನೆಲುಬಾಗಿ ನಿಂತರು. ಚಿಕ್ಕ ಬಜೆಟ್ ನೊಂದಿಗೆ ಶುರುವಾದ ಈ ಯೋಜನೆ ದೊಡ್ಡದಾಗಿ ಬೆಳೆಯುತ್ತಾ ಹೋಯಿತು. ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಾಗ ಕರ್ನಾಟಕದಾದ್ಯಂತ ಸಾವಿರಕ್ಕೂ ಹೆಚ್ಚು ಆಕಾಂಕ್ಷಿಗಳು ಬಂದರು. ಇವರಿಗೆ ಆಡಿಷನ್ ಮಾಡಿ, ಅಂತಿಮವಾಗಿ 22 ಪ್ರತಿಭೆಗಳನ್ನು ಸೆಲೆಕ್ಟ್ ಮಾಡಿ ತರಬೇತಿ ಕೊಟ್ಟು ಕ್ಯಾಮರಾ ಮುಂದೆ ನಿಲ್ಲಿಸಿದ್ದೇವೆ. ಕಿರಣ್‌ಕುಮಾರ್ ನಿರ್ದೇಶನ ಜವಾಬ್ದಾರಿ ಹೊತ್ತಿದ್ದಾರೆ. ನನ್ನೊಂದಿಗೆ ಮಹೇಶ್ ಕೃಷ್ಣ, ಪ್ರವೀಣ್ ಗಸ್ತಿ ತೀರ್ಪುಗಾರರಾಗಿರುತ್ತಾರೆ. ಮಿಂಚು ಎಂಟರ್‌ಟೈನ್‌ಮೆಂಟ್ಸ್ ಚಾನೆಲ್‌ನಲ್ಲಿ ಮಹಾನ್ ಕಿಲಾಡಿ ಪ್ರಸಾರವಾಗುತ್ತಿದೆ ಎಂದರು. ಅಕ್ಷಯ್ ಮೊಕಾಶಿ ಅವರ ಛಾಯಾಗ್ರಹಣ, ಸುನಿಲ್-ಸುರೇಶ್ ಅವರ ಸಂಕಲನವಿದೆ.



ಬ್ರಹ್ಮಕಮಲದ ಸುತ್ತ 'ನಾಗಬಂಧಂ'



ಶಕ್ತಿಶಾಲಿ ಬ್ರಹ್ಮ ಕಮಲವನ್ನು ಪಡೆದು ಕೊಳ್ಳಲು ಯಾರೆಲ್ಲಾ ಪ್ರಯತ್ನಿಸುತ್ತಾರೆ, ಕಡೆಗೆ ಅದು ಯಾರಿಗೆ ಒಲಿಯುತ್ತದೆ ಎಂಬುದನ್ನು ಅಭಿಷೇಕ್ ನಾಮ ನಿರ್ದೇಶನದ 'ನಾಗಬಂಧಂ' ಚಿತ್ರದಲ್ಲಿ ಹೇಳಲಾಗಿದೆ. ಜುಲೈ 3ರಂದು ಬಿಡುಗಡೆಯಾಗಲಿರುವ ಈ ಚಿತ್ರದ ಟ್ರೈಲರ್ ಬಿಡುಗಡೆ ಹಾಗೂ ಪತ್ರಿಕಾಗೋಷ್ಠಿಯನ್ನು ಚಿತ್ರತಂಡ ಆಯೋಜಿಸಿತ್ತು. ವಜ್ರಕಾಯ ಖ್ಯಾತಿಯ ನಭಾ ನಟೇಶ್, ವಿರಾಟ್ ಕರ್ಣ ನಾಯಕ, ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಅಲ್ಲದೆ ಗರುಡ ರಾಮ್, ಭಜರಂಗಿ ಪ್ರಸನ್ನ, ವಿನಯ್ ಬಿದ್ದಪ್ಪ ಕೂಡ ಈ ಚಿತ್ರದಲ್ಲಿ ನಟಿಸಿದ್ದಾರೆ.

ಹತ್ತು ವರ್ಷಗಳ ನಂತರ ಕನ್ನಡದಲ್ಲಿ ನಟಿಸಿರುವುದಕ್ಕೆ ಖುಷಿಯಾಗ್ತಿದೆ. 'ವಜ್ರಕಾಯ' ಚಿತ್ರದಲ್ಲಿ ಪಟಾಕ ಪಾರ್ವತಿಯಾಗಿದ್ದೆ. ಈಗ 'ನಾಗಬಂಧಂ' ಚಿತ್ರದಲ್ಲೂ ಪಾರ್ವತಿ ಪಾತ್ರವನ್ನೇ ಮಾಡಿದ್ದೇನೆ. ಆದರೆ ಎರಡೂ ಪಾತ್ರಗಳ ಕ್ಯಾರೆಕ್ಟರ್ ಬೇರೆ. ಟ್ರೈಲರ್ ನೋಡಿದಾಗ ಇದೊಂದು ಆಧ್ಯಾತ್ಮಿಕತೆಯ ಹಿನ್ನೆಲೆಯ ಚಿತ್ರ ಅನ್ನಿಸಬಹುದು. ಆದರೆ, ಬರೀ ಆಧ್ಯಾತ್ಮಿಕತೆ ಅಲ್ಲದೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಈ ಚಿತ್ರದಲ್ಲಿದೆ. ಈ ಚಿತ್ರದ 'ನಮಾಮಿ' ಹಾಡು ಹಾಗೂ ಟ್ರೈಲರ್ ಎಲ್ಲರ ಮನ ಗೆದ್ದಿದೆ. ಎಲ್ಲರೂ ಇಷ್ಟಪಡುವ ಚಿತ್ರವಾಗಲಿದೆ ಎಂಬ ನಂಬಿಕೆ ಇದೆ ಎಂದು ನಾಯಕಿ ನಭಾ ನಟೇಶ್ ತಿಳಿಸಿದರು.


ಈ ಚಿತ್ರದಲ್ಲಿ ಭೈರಾಗಿ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಮೇಕಪ್ ಹಾಕಿಕೊಳ್ಳಲು ಆ ಏಳೆಂಟು ಗಂಟೆ ಕಾಲ ಹಿಡಿಸುತ್ತಿತ್ತು. ಮುಂಬೈನ ಖ್ಯಾತ ಮೇಕಪ್ ಕಲಾವಿದರು ಮೇಕಪ್ ಮಾಡಿದ್ದಾರೆ ಎಂದು ನಟ ಗರುಡ ರಾಮ್ ಹೇಳಿದರು.

ಕೆ.ವಿ.ಎನ್ ಸಂಸ್ಥೆ ವಿತರಣೆ ಮಾಡುತ್ತಿರುವ ಈ ಚಿತ್ರಕ್ಕೆ ಸೌಂದರ್ ರಾಜನ್ ಛಾಯಾಗ್ರಹಣ ಹಾಗೂ ಜುನೈದ್ ಕುಮಾರ್ ಅವರ ಸಂಗೀತ ನಿರ್ದೇಶನವಿದೆ.

ಸಿನಿಪದಬಂಧ-632



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1. 'ಹದಿನಾರರ ಹರೆ ಬಂದಾಗ ಕುಡಿ ನೋಟವು ಕರೆ ತಂದಾಗ....', ಗೀತೆಯ ಚಿತ್ರ 6
4. ಬ್ರಹ್ಮ _ _ ಮಹೇಶ್ವರ 2
5. 'ಸರ್ಪದ ಸೇಡು' ಹನ್ನೆರಡು ವರುಷ 5
6. ಸರ್ವರ್ ಸೋಮಣ್ಣ ಚಿತ್ರದ ನಾಯಕಿ 2
7. ಅಧ್ಯಕ್ಷ ಇನ್ _ _ _ _ 4
9. ಆದಿತ್ಯ - ರಕ್ಷಿತಾಳ ಆಂಗ್ಲ 'ಪ್ರೇಮ' 2
11. ದುನಿಯಾ ವಿಜಯ್ - ಶುಭಾಪೂಂಜಾ ಅಭಿನಯದ ಚಿತ್ರ ಇಲ್ಲಿ ತಿರುಗಿದೆ 2
12. ಚಿಕ್ಕ ವಯಸ್ಸಿನ ಗಂಡು ಮಕ್ಕಳಿಗೆ ಹೀಗೊಂದು ಪದ 4
14. ಜಿ.ವಿ. ಅಯ್ಯರ್ ಅವರ ಸಾಂಸ್ಕೃತಿಕ ನಗರಿಯ ಕುದುರೆ ಗಾಡಿ 5
15. ಅನಂತ್‌ನಾಗ್ - ಗೀತಾ ಅಭಿನಯದಲ್ಲಿ ಬಂದ 'ನೌಕೆ' 6
17. ಶಶಿಕುಮಾರ್ - ದ್ವಾರಕೀಶ್ ಅವರ ಕಾಂಬಿನೇಷನ್ 8

ಮೇಲಿನಿಂದ ಕೆಳಕ್ಕೆ

1. ಅನಂತ್ ನಾಗ್, ಲಕ್ಷ್ಮಿ, ಶಂಕರ್‌ನಾಗ್, ಗಾಯತ್ರಿ ಅಭಿನಯಕ್ಕೆ ಟಿ.ಎಸ್. ನಾಗಾಭರಣ ನಿರ್ದೇಶಕ 10
2. ಶಿವಣ್ಣನ ಯುದ್ಧ ಭೂಮಿ 4
3. ವಿಷ್ಣುವರ್ಧನ್ ನಾಯಕತ್ವದಿ ವಿಗ್ರಹ ಚೋರರು ಚಾಲಾಕಿಗಳು 6
4. ಯಶ್ ಹೊಸ ಚಿತ್ರ 'ಟಾಕ್ಸಿಕ್' ಕನ್ನಡದಲ್ಲಿ ಹೀಗೆ 4
8. ತರೀಕೆರೆ ಏರಿ _ _ _ _ _ _ _ _ ಮರಿ ಮೆಯ್ತಿತ್ತು 8
10. ವಿಷ್ಣುವರ್ಧನ್ - ರೂಪಿಣಿ ಅಭಿನಯದ ಚಿತ್ರ 7
13. ಅನಂತ್ ನಾಗ್ - ಖುಷ್ಬುವಿನ ಆಕಾಶ 3
16.ಉಗ್ರ ನರಸಿಂಹ ಚಿತ್ರದ ನಾಯಕ 3

ಸಿನಿ ಪದಬಂಧ 631ರ ಉತ್ತರ

ನಾ	ರಾ	ದ	ವಿ	ಜ	ಯ				ತು	ತ್ತಾ
ನೊಂ		ಳ			ದು	ಡ್ಡೇ	ದೊ	ಡ್ಡ	ಪ್ಪ	
ದು		ಪ	ರ್ವ		ಕು				ಬೇ	
ತೀ		ತಿ			ಲ		ಸಾ	ಹು	ಕಾ	ರ
ರ	ಮ್ಯ		ಸ		ರಾ	ಜ		ಡು		
ನೀ		ರ	ವಿ	ತೇ	ಜ			ಗಾ		ಪಾ
ನೊಂ			ಸ			ವಿ	ರಾ	ಟ	ಪ	ರ್ವ
ದು	ನಿ	ಯಾ	ವಿ	ಜ	ಯ್			ದ		ತಿ
ತೀ			ನೆ			ಮ		ಹು		
ರ		ಮ	ನ	ಮೆ	ಚ್ಚಿ	ದ	ಹು	ಡು	ಗಿ	
			ಪು			ನ		ಗಿ		

ವಿಜೇತರು: ನಂಜುಂಡಸ್ವಾಮಿ, ನಂ.157, ರಾಷ್ಟ್ರಪತಿ ರಸ್ತೆ, ನಂಜನಗೂಡು

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಅಯೋಗ್ಯ-2'ರ ಪುಟ್ಟಲಕ್ಷ್ಮಿ ಹಾಡು ಸಿದ್ ಶ್ರೀರಾಮ್ ಧ್ವನಿಗೆ ಭಿನ್ನರಾಗ!



ನೀನಾಸಂ ಸತೀಶ್, ರಚಿತಾ ರಾಮ್ ಅಭಿನಯದ ಅಯೋಗ್ಯ-2 ಚಿತ್ರದ 'ಮುದ್ದು ಮುದ್ದು ಪುಟ್ಟಲಕ್ಷ್ಮಿ' ಹಾಡನ್ನು ಬಾಲಿವುಡ್‌ನ ಸಿದ್ ಶ್ರೀರಾಮ್ ಕೈಲಿ ಹಾಡಿಸಿದ್ದು ಕನ್ನಡಾಭಿಮಾನಿಗಳನ್ನು ಕೆರಳಿಸಿದ್ದಲ್ಲದೆ ಸಾಕಷ್ಟು ವಿವಾದ ಹುಟ್ಟುಹಾಕಿತ್ತು.

ಮಹೇಶ್ ನಿರ್ದೇಶನದ ಈ ಚಿತ್ರಕ್ಕೆ ಅರ್ಜುನ್ ಜನ್ಯಾ ಸಂಗೀತ ನೀಡಿದ್ದಾರೆ. ಈಗ ಬಿಡುಗಡೆಯಾಗಿರುವ 'ಮುದ್ದು ಮುದ್ದು ಪುಟ್ಟಲಕ್ಷ್ಮಿ' ಹಾಡನ್ನ ಹಳ್ಳಿಯ ಪರಿಸರದಲ್ಲಿ ಸೊಗಸಾಗಿ ಸೆರೆಹಿಡಿಯಲಾಗಿದೆ. ಆದರೆ ಎಲ್ಲಾ ಸರಿ ನಾಯಕ ಸತೀಶ್ ನೀನಾಸಂಗೆ ತಮಿಳು ಗಾಯಕ ಸಿದ್ ಶ್ರೀರಾಮ್ ಅವರ ಧ್ವನಿ ಸೂಟ್ ಆಗ್ತಿಲ್ಲ. ಮಂಡ್ಯ ಸೊಗಡಿನ ಹಾಡಿಗೂ ಸಿಂಕ್ ಆಗ್ತಿಲ್ಲ. ಕನ್ನಡದಲ್ಲಿ ಗಾಯಕರೇ ಇಲ್ವಾ ಎಂದು ಸಾಕಷ್ಟು ಜನ ವಿರೋಧ ವ್ಯಕ್ತಪಡಿಸಿದ್ದರು.

ಚೆನ್ನೈಮೂಲದ ಗಾಯಕ ಸಿದ್ ಶ್ರೀರಾಮ್ ಈಗಾಗಲೇ ಸಾಕಷ್ಟು ಗೀತೆಗಳಿಗೆ ದನಿಯಾಗಿದ್ದಾರೆ. ಆದರೆ ಈ ಹಾಡಿಗೆ ಅವರ ದನಿ ಹೊಂದಿಕೆ ಆಗ್ತಿಲ್ಲ. ಮಂಡ್ಯ ಸೊಗಡು, ಸಹಜತೆ ಮಾಯವಾಗಿದೆ. ಈ ಹಿಂದೆ ವಿಜಯ್‌ಪ್ರಕಾಶ್ ಹಾಡಿದ್ದ 'ಏನಮ್ಮಿ ಏನಮ್ಮಿ...' ಸೂಪರ್ ಹಿಟ್ ಆಗಿತ್ತು, ಅವರಿಂದಲೇ ಹಾಡಿಸಬಹುದಿತ್ತು ಎಂದು ಸಾಕಷ್ಟು ಜನ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಈ ಹಾಡಿನ ಬಗ್ಗೆಯೇ ಚರ್ಚೆ ನಡೆದಿತ್ತು. ನಿರ್ದೇಶಕ ಮಹೇಶ್ ಹಾಗೂ ಸತೀಶ್ ಸ್ಪಷ್ಟನೆ ನೀಡುವ ಪ್ರಯತ್ನ ಮಾಡಿದ್ದರು. ಪ್ರತಿ ಸಿನಿಮಾದಲ್ಲೂ ವಿಜಯ್ ಪ್ರಕಾಶ್ ಹಾಡುವುದಕ್ಕೆ ಆಗುವುದಿಲ್ಲ. ಅರ್ಜುನ್ ಜನ್ಯಾ ಒಂದು ಪ್ರಯೋಗ ಮಾಡಿದ್ದಾರೆ. ಹಾಡುಗಳ ಸಂಪೂರ್ಣ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡಿದ್ದರು. ಹಾಗಾಗಿ ಈ ವಿಚಾರದಲ್ಲಿ ಅವರೇ ಎಲ್ಲಾ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ತಿಳಿಸಿದ್ದರು.

ಸೂಪರ್‌ಹಿಟ್ ಸಾಂಗ್ 'ಜಗವೇ ನೀನು ಗೆಳತಿಯೇ...' ಕೂಡ ಸಿದ್ ಶ್ರೀರಾಮ್ ಹಾಗೂ ಅರ್ಜುನ್ ಜನ್ಯಾ ಕಾಂಬಿನೇಷನ್‌ನಲ್ಲಿ ಮೂಡಿಬಂದಿತ್ತು. ಈ ಚಿತ್ರದಲ್ಲೂ ಅಂಥದ್ದೇ ಮ್ಯಾಜಿಕ್ ಮಾಡಲು ಜನ್ಯಾ ಟ್ರೈ ಮಾಡಿದ್ದಾರೆ ಎಂದು ಚಿತ್ರತಂಡ ಸ್ಪಷ್ಟನೆ ನೀಡಿದೆ. ಮುಂದಿನ ದಿನಗಳಲ್ಲಿ ಸಿದ್ ಶ್ರೀರಾಮ್ ಬದಲು ವಿಜಯ್ ಪ್ರಕಾಶ್ ಅವರಿಂದ ಚಿತ್ರತಂಡ ಈ ಹಾಡನ್ನು ಹಾಡಿಸುತ್ತಾ ಎಂದು ಕಾದುನೋಡಬೇಕಿದೆ. ಅಂದಹಾಗೆ ಈ ಚಿತ್ರದಲ್ಲಿ ವಿಜಯ್‌ಪ್ರಕಾಶ್ ಬೇರೆ ಹಾಡುಗಳನ್ನು ಹಾಡಿದ್ದಾರೆ ಎಂದೂ ಚಿತ್ರತಂಡ ಹೇಳಿದೆ.

ಇಂದಿನಿಂದ 'ಬಲರಾಮನ ದಿನಗಳು'



ಕೆ.ಎಂ.ಚೈತನ್ಯ ಅವರ ನಿರ್ದೇಶನದ 'ಬಲರಾಮನ ದಿನಗಳು' ಇಂದಿನಿಂದ ರಾಜ್ಯಾದ್ಯಂತ ತೆರೆಕಾಣುತ್ತಿದೆ. ಇತ್ತೀಚೆಗೆ ಈ ಚಿತ್ರದ ಟ್ರೈಲರನ್ನು ನಟ ಧ್ರುವಸರ್ಜಾ ಬಿಡುಗಡೆಗೊಳಿಸಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ನಿರ್ಮಾಪಕ ಶ್ರೇಯಸ್, ನಿರ್ಮಾಪಕಿ ಪದ್ಮಾವತಿ ಜಯರಾಮ್, ನಾಯಕಿ ಪ್ರಿಯಾ ಆನಂದ್ ಅಲ್ಲದೆ ನಿರ್ದೇಶಕ ಚೈತನ್ಯ ಕೂಡ ಹಾಜರಿದ್ದರು, ಈ ವೇಳೆ ಮಾತನಾಡಿದ ಧ್ರುವ ಸರ್ಜಾ ಟ್ರೈಲರ್ ನೋಡಿದಾಗ ವ್ಹಾವ್ ಎನಿಸುತ್ತದೆ. ಚಿತ್ರದ ವಿಂಟೇಜ್ ಮ್ಯೂಸಿಕ್ ಗಮನ ಸೆಳೆಯುತ್ತದೆ. ಆ ದಿನಗಳು ಚಿತ್ರ ರಿಲೀಸಾದಾಗ ನಾನು ಆಗ್ತೇ ಪಿಯುಸಿ ಪಾಸಾಗಿದ್ದೆ. ಆ ಚಿತ್ರದ ನಂತರ ಅದೇ ವೈಬ್ಸ್ ಸಿಕ್ಕಿದ್ದು 'ಬಲರಾಮನ ದಿನಗಳಿಗೆ' ಎಂದು ಹೇಳಿದರು.

ನಿರ್ಮಾಪಕ ಶ್ರೇಯಸ್ ಮಾತನಾಡಿ ಇದು ರೌಡಿಶೀಟರ್ ಬಲರಾಮನ ಬಯೋಪಿಕ್ ಅಲ್ಲ. ಇದೊಂದು ಫಿಕ್ಷನಲ್ ಸ್ಟೋರಿ ಎಂದರು. ನಂತರ ಮಾತನಾಡಿದ ಪದ್ಮಾವತಿ ಜಯರಾಂ ಇಷ್ಟು ದಿನ ಹೇಗೆ ಕಳೆದೆವೋ ಗೊತ್ತಾಗಿಲ್ಲ. ಈಗ ಎಲ್ಲರೂ ಆನೆಬಲವಾಗಿ ನಿಂತಿರುವುದಕ್ಕೆ ಖುಷಿಯಾಗ್ತಿದೆ ಎಂದರು.

ನಿರ್ದೇಶಕ ಚೈತನ್ಯ ಮಾತನಾಡಿ ರಾಣಾ ದಗ್ಗುಬಾಟಿ ಅವರು ನಮ್ಮ ಚಿತ್ರದ ಟ್ರೈಲರನ್ನು ಡಿಜಿಟಲ್ ಲಾಂಚ್ ಮಾಡಿದ್ದಾರೆ. ವಿನೋದ್ ಅವರು ಬಿಡುವಿಲ್ಲದ ಪ್ರಚಾರದಲ್ಲಿ ಭಾಗವಹಿಸಿದ್ದರಿಂದ ಸ್ವಲ್ಪ ಸ್ಟ್ರೆಸ್ ಆಗಿತ್ತು ಈಗವರು ಆರಾಮಾಗಿದ್ದಾರೆ. ಇಲ್ಲಿಗೂ ಬರುತ್ತೇನೆ ಅಂದಾಗ ನಾವೇ ಬೇಡ, ರೆಸ್ಟ್ ಮಾಡಿ ಎಂದು ಹೇಳಿದ್ದೇವೆ ಎಂದರು. ವಿತರಕ ಸುಪ್ರೀತ್ ಮಾತನಾಡಿ ವರ್ಷದ ಹಿಂದೆ ಮೇಡಂ ನಮ್ಮನ್ನು ಮೀಟ್ ಮಾಡಿದ್ದರು. ಆಗಲೇ ಈ ಸಿನಿಮಾನ ನಾವೇ ರಿಲೀಸ್ ಮಾಡುತ್ತೇವೆ ಅಂತ ಹೇಳಿದ್ದೆವು. ಚಿತ್ರಕ್ಕೆ ತುಂಬಾ ಬೇಡಿಕೆ ಇದೆ. ಸುಮಾರು 100ರಿಂದ 150 ಥಿಯೇಟರ್‌ಗಳಲ್ಲಿ ರಿಲೀಸ್ ಮಾಡುತ್ತಿದ್ದೇವೆ ಎಂದರು. ನಾಯಕಿ ಪ್ರಿಯಾ ಆನಂದ್ ಮಾತನಾಡಿ ನಾನು ಕೂಡ ಸಿನಿಮಾ ನೋಡಲು ಎಕ್ಸೈಟ್ ಆಗಿದ್ದೇನೆ ಎಂದರು.

ಪದ್ಮಾವತಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಅವರ ನಿರ್ಮಾಣದ ಈ ಚಿತ್ರದಲ್ಲಿ ನಿರ್ಮಾಪಕರಿಬ್ಬರೂ ಬಣ್ಣ ಹಚ್ಚಿರುವುದು ವಿಶೇಷ. 'ಬಲರಾಮನ ದಿನಗಳು' ಎಂಬತ್ತರ ದಶಕದಲ್ಲಿ ನಡೆಯುವ ಫಿಕ್ಷನಲ್‌ಸ್ಟೋರಿ. ಇಲ್ಲಿ ನಟ ವಿನೋದ್ ಪ್ರಭಾಕರ್ ಬಲರಾಮನಾಗಿ ಕಾಣಿಸಿಕೊಂಡಿದ್ದು, ಅವರ 25ನೇ ಚಿತ್ರವೂ ಹೌದು.

ಮೈಸೂರು ಮಹಿಳೆಯ ವರ್ಣಚಿತ್ರಗಳು ನ್ಯೂಯಾರ್ಕ್‌ನಲ್ಲಿ ಪ್ರದರ್ಶನ



ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ತಮ್ಮ ಕಲಾಕೃತಿಯೊಂದಿಗೆ ನಮಿತಾ ಕುಲಕರ್ಣಿ

ಮೈಸೂರು, ಜೂ.25– ಮೈಸೂರು ಮೂಲದ ಕಲಾವಿದೆ, ಕಾನೂನು ಮತ್ತು ಯೋಗ ಶಿಕ್ಷಕಿ ನಮಿತಾ ಕುಲಕರ್ಣಿ ಅವರ ಕೈಚಳಕದಿಂದ ಮೂಡಿಬಂದ ವರ್ಣಚಿತ್ರಗಳು ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆಯುತ್ತಿರುವ ಚಿತ್ರಕಲಾ ಪ್ರದರ್ಶನದಲ್ಲಿ ಪ್ರದರ್ಶನಗೊಂಡಿವೆ.

ವಸಾಹತುಶಾಹಿ ಮತ್ತು ಹವಾಮಾನ ಬಿಕ್ಕಟ್ಟು ಶೀರ್ಷಿಕೆಯಡಿಯಲ್ಲಿ ಆಯೋಜನೆಗೊಂಡಿರುವ ಈ ಪ್ರದರ್ಶನ ಜುಲೈ 10ರಂದು ಸಮಾರೋಪಗೊಳ್ಳಲಿದೆ. ಈ ಸಂಬಂಧ ವಿಶ್ವಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ (www.un-.org) ಮಾಹಿತಿ ಲಭ್ಯವಿದೆ.

ನಮಿತಾ ತಮ್ಮ ಕಲೆಯ ಪ್ರದರ್ಶನದ ಜೊತೆಗೆ ವರ್ಣಚಿತ್ರಗಳು ಸಾರುವ ಸಂದೇಶವನ್ನು ವೀಕ್ಷಕರಿಗೆ ಮನಮುಟ್ಟುವಂತೆ ವಿವರಿಸಿದ್ದಾರೆ. ಇವರು 2008ರಲ್ಲಿ ಮುಂಬೈನ ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್‌ನಲ್ಲಿ 'ಟೈಮ್‌ಲೆಸ್ ವಾಟರ್ಸ್ ಟು ವಾಟರ್‌ಲೆಸ್ ಟೈಮ್ಸ್' ಶೀರ್ಷಿಕೆಯಡಿ ಏಕವ್ಯಕ್ತಿ ಪ್ರದರ್ಶನದ ಮೂಲಕ ತಮ್ಮ 23 ವರ್ಣಚಿತ್ರಗಳನ್ನು ಭಿತ್ತರಿಸಿದ್ದರು.

ವಿಶ್ವಸಂಸ್ಥೆಯು 2005 ರಿಂದ 2015ರ ನಡುವಿನ ದಶಕವನ್ನು 'ನೀರು ಉಳಿಸಿ' ದಶಕವೆಂದು ಆಚರಿಸಿತ್ತು. ವಿಶ್ವಸಂಸ್ಥೆಯ ಜಲ ಸಚಿವಾಲಯವು ಅವರ ವರ್ಣಚಿತ್ರ ಪ್ರದರ್ಶನದಲ್ಲಿ ತಮ್ಮ ಲೋಗೋವನ್ನು ಬಳಸಲು ಅನುಮತಿ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿತ್ತು. ಮೈಸೂರಿನ ನಿವಾಸಿಯಾಗಿರುವ ನಮಿತಾ ಅವರು, ಕರ್ನಾಟಕ ಮತ್ತು ಗೋವಾದಲ್ಲಿ ಆದಾಯ ತೆರಿಗೆ ಇಲಾಖೆ ಪ್ರಧಾನ ಮುಖ್ಯ ಆಯುಕ್ತರಾಗಿ ಸೇವೆ ಸಲ್ಲಿಸಿರುವ ನೂತನ್ ಒಡೆಯರ್ ಅವರ ಪುತ್ರಿ.

ಆಶೀರ್ವಾದ



ರಾಜ್ಯ ಒಬಿಸಿ ಮೋರ್ಚಾ ಅಧ್ಯಕ್ಷರೂ ಆದ ನೂತನ ವಿಧಾನ ಪರಿಷತ್ ಸದಸ್ಯ ರಘು ಕೌಟಿಲ್ಯ ಮೈಸೂರಿನಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರನ್ನು ಭೇಟಿಯಾಗಿ, ಆಶೀರ್ವಾದ ಪಡೆದರು.

ಸಂಚಾರ ನಿಯಮ ಉಲ್ಲಂಘನೆ ದಂಡದಲ್ಲಿ ಶೇ.50ರಷ್ಟು ರಿಯಾಯ್ತಿ

ಆರ್‌ಟಿಓ ಪಶ್ಚಿಮದಿಂದ ಸಾರ್ವಜನಿಕ ಮಾಹಿತಿಗಾಗಿ ಬ್ಯಾನರ್ ಬಿಡುಗಡೆ

● ಬ್ಯಾನರ್ ಬಿಡುಗಡೆಗೊಳಿಸಿದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ● ಆರ್‌ಟಿಓ ಪಶ್ಚಿಮದಲ್ಲಿ 1998ರಿಂದ 2022ರವರೆಗೆ 3,740 ಪ್ರಕರಣಗಳು ದಾಖಲು ; ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ್ ಚವ್ಹಾಣ್ ಮಾಹಿತಿ

ಮೈಸೂರು,ಜೂ.25(ಪಿಎಂ)– ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ (ಆರ್‌ಟಿಓ) ಮೈಸೂರು ಪಶ್ಚಿಮ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ (ಡಿಎಸ್‌ಎಲ್‌ಎ) ಜಂಟಿ ಆಶ್ರಯದಲ್ಲಿ ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ಡಿಎಸ್‌ಎ ಪ್ರಕರಣಗಳ ದಂಡ ಪಾವತಿಗೆ ರಾಜ್ಯ ಸರ್ಕಾರ ಕಲ್ಪಿಸಿರುವ ಶೇ.50ರಷ್ಟು ರಿಯಾಯಿತಿ ಕುರಿತಂತೆ ಸಾರ್ವಜನಿಕ ಮಾಹಿತಿಗಾಗಿ ಹೊರತಂದಿರುವ ಬ್ಯಾನರ್ ಅನ್ನು ಗುರುವಾರ ಬಿಡುಗಡೆ ಮಾಡಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಅವರು ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ಕೋರ್ಟ್ ಆವರಣದಲ್ಲಿನ ತಮ್ಮ ಕಚೇರಿಯಲ್ಲಿ ಬ್ಯಾನರ್ ಅನ್ನು ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿದ ಅವರು, ರಾಜ್ಯದ ಸಾರಿಗೆ ಇಲಾಖೆಯಲ್ಲಿ 1991–92ರಿಂದ 2021–22ರ ಅವಧಿಯಲ್ಲಿ ಮೋಟಾರ್ ವಾಹನ ಕಾಯ್ದೆ, ನಿಯಮಗಳ ಉಲ್ಲಂಘನೆ ಸಂಬಂಧ ದಾಖಲಾದ ಬಾಕಿ ಇರುವ ಡಿಎಸ್‌ಎ (ಇಲಾಖಾ ಶಾಸನಬದ್ಧ



ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಉಷಾರಾಣಿ ಅವರು ಆರ್‌ಟಿಓ ಪಶ್ಚಿಮದ ಬ್ಯಾನರ್ ಬಿಡುಗಡೆ ಮಾಡಿದರು.

ಕ್ರಮ) ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ಕಲ್ಪಿಸಲಾಗಿದೆ. ಜೂ.21ರಿಂದ ಜು.10ರವರೆಗಿನ ಅವಧಿಯಲ್ಲಿ ಕಚೇರಿಗೆ ಖುದ್ದು ಆಗಮಿಸಿ ರಿಯಾಯಿತಿಯಡಿ ದಂಡ ಪಾವತಿಸಬಹುದು. ಆರ್‌ಟಿಓ ಮೈಸೂರು ಪಶ್ಚಿಮ ಸಂಬಂಧ ಇಂದು ಸಾರ್ವಜನಿಕರ ಮಾಹಿತಿಗಾಗಿ ಬ್ಯಾನರ್ ಬಿಡಗಡೆ ಮಾಡಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಬ್ಯಾನರ್‌ಗಳನ್ನು ಅಳವಡಿಸಲಾಗುತ್ತದೆ ಎಂದು ತಿಳಿಸಿದರು.

ಮೈಸೂರು ಪಶ್ಚಿಮ ಪ್ರಾದೇಶಿಕ ಸಾರಿಗೆ ಅಧಿಕಾರಿ ವಸಂತ್ ಈಶ್ವರ್ ಚವ್ಹಾಣ್ ಮಾತನಾಡಿ, ಪ್ರಾದೇಶಿಕ ಸಾರಿಗೆ ಕಚೇರಿ ಮೈಸೂರು ಪಶ್ಚಿಮಕ್ಕೆ ಸಂಬಂಧಿಸಿದಂತೆ 1991ರಿಂದ 98ರವರೆಗೆ ಯಾವುದೇ ದಂಡದ ಪ್ರಕರಣಗಳು ಬಾಕಿ ಉಳಿದಿಲ್ಲ. 1998ರಿಂದ 2022ರವರೆಗೆ 3,740 ಪ್ರಕರಣಗಳು ದಾಖಲಾಗಿವೆ. ಈಗಾಗಲೇ ವಾಹನ ಮಾಲೀಕರು ಕಚೇರಿಗೆ ಭೇಟಿ ನೀಡಿ ತಮ್ಮ ವಾಹನಗಳ ದಂಡ ಸಂಬಂಧ ಮಾಹಿತಿ ಪಡೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು.

1.64 ಲಕ್ಷ ರೂ. ದಂಡ ಪಾವತಿ: ಈಗಾಗಲೇ ಶೇ.50ರಷ್ಟು ರಿಯಾಯಿತಿ ಅಡಿಯಲ್ಲಿ 47 ಪ್ರಕರಣಗಳ ಸಂಬಂಧ ಲಕ್ಷದ 64 ಸಾವಿರ ರೂ. ದಂಡ ಪಾವತಿಯಾಗಿದೆ. ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪಾವತಿಯಾಗುವ ಸಾಧ್ಯತೆ ಇದೆ. ಈಗಾಗಲೇ ಸಂಘ–ಸಂಸ್ಥೆಗಳು, ವಾಹನ ಮಾಲೀಕರೊಂದಿಗೆ ಸಭೆ ಮಾಡಿದ್ದು, ವ್ಯಾಪಕ ಪ್ರಚಾರ ನೀಡಲಾಗುತ್ತಿದೆ. ಇದೀಗ ಬ್ಯಾನರ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳೂ ಆದ ಹಿರಿಯ ಸಿವಿಲ್ ನ್ಯಾಯಾಧೀಶ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ಆರ್‌ಟಿಓ ಪಶ್ಚಿಮ ಅಧೀಕ್ಷಕರಾದ ಶಿವಕುಮಾರ್, ಮನೋಹರ್, ಎಫ್‌ಡಿಎ ಎಂ.ಆರ್.ರವಿ ಮತ್ತಿತರರು ಹಾಜರಿದ್ದರು.

ಶ್ರೇಯಸ್ ಗೋಪಾಲ್ ಆಲ್‌ರೌಂಡ್ ಪ್ರದರ್ಶನ: ಕೋಸ್ಟಲ್ ಕಿಂಗ್ಸ್‌ಗೆ 6 ವಿಕೆಟ್ ಜಯ

ಮೈಸೂರು, ಜೂ.25(ವಿವಿಹೆಚ್)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ನಾಯಕ ಕರಣ್ ನಾಯರ್ ಹಾಗೂ ಶ್ರೇಯಸ್ ಗೋಪಾಲ್ ಅದ್ಭುತ ಬ್ಯಾಟಿಂಗ್ ಪ್ರದರ್ಶನದಿಂದ ಕೋಸ್ಟಲ್ ಕಿಂಗ್ಸ್ ಮಂಗಳೂರು ತಂಡ ಮೈಸೂರು ವಾರಿಯರ್ಸ್ ವಿರುದ್ಧ 6 ವಿಕೆಟ್‌ಗಳ ನಿರಾಯಾಸದ ಗೆಲುವು ಸಾಧಿಸಿತು.

ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ 11ನೇ ಲೀಗ್ ಪಂದ್ಯದಲ್ಲಿ ವಾರಿಯರ್ಸ್ ನೀಡಿದ್ದ 192 ರನ್‌ಗಳ ಗುರಿ ಬೆನ್ನತ್ತಿದ ಕರಾವಳಿ ಕಿಂಗ್ಸ್ ಆರಂಭದಲ್ಲೇ 42 ರನ್‌ಗೆ 3 ವಿಕೆಟ್ ಕಳೆದು ಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ನಾಲ್ಕನೇ ವಿಕೆಟ್‌ಗೆ ಜೊತೆಯಾದ ಕರಣ್ ನಾಯರ್ ಮತ್ತು ಶ್ರೇಯಸ್ ಗೋಪಾಲ್ ಕೇವಲ 60 ಎಸೆತಗಳಲ್ಲಿ 123 ರನ್‌ಗಳ ಅಮೋಘ ಜೊತೆಯಾಟ ಆಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಕರಣ್ ನಾಯರ್ 32 ಎಸೆತಗಳಲ್ಲಿ 6 ಬೌಂಡರಿ ಹಾಗೂ 3 ಸಿಕ್ಸರ್‌ಗಳ ನೆರವಿನಿಂದ 61 ರನ್ ಸಿಡಿಸಿದರು. ಮತ್ತೊಂದೆಡೆ ಶ್ರೇಯಸ್ ಗೋಪಾಲ್ ಅಜೇಯ 84 ರನ್‌ಗಳ (43 ಎಸೆತ, 9 ಬೌಂಡರಿ, 3 ಸಿಕ್ಸರ್) ಪಂದ್ಯಶ್ರೇಷ್ಠ ಇನ್ನಿಂಗ್ಸ್ ಆಡಿದರು. ಗೋಪಾಲ್ ಬೌಲಿಂಗ್‌ನಲ್ಲೂ 25 ರನ್ ನೀಡಿ 2 ವಿಕೆಟ್ ಕಬಳಿಸಿ ಆಲ್‌ರೌಂಡ್ ಪ್ರದರ್ಶನ ನೀಡಿದರು.

ಆ ಮೂಲಕ 17.4 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 195 ರನ್ ಗಳಿಸಿದ ಕರಾವಳಿ ಕಿಂಗ್ಸ್ 6 ವಿಕೆಟ್‌ಗಳ ಜಯ ದಾಖಲಿಸಿತು.



ಶ್ರೇಯಸ್ ಗೋಪಾಲ್ ಬ್ಯಾಟಿಂಗ್ ವೈಖರಿ.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 191 ರನ್ ಕಲೆಹಾಕಿತು. ಆರಂಭಿಕ ಬ್ಯಾಟರ್ ಎಲ್.ಆರ್. ಚೇತನ್ 35 ಎಸೆತಗಳಲ್ಲಿ 67 ರನ್ (4 ಬೌಂಡರಿ, 6 ಸಿಕ್ಸರ್) ಗಳಿಸಿ ಮಿಂಚಿದರು. ಯುವರಾಜ್ ಅರೋರಾ 22 ಎಸೆತಗಳಲ್ಲಿ 37 ರನ್ ಸೇರಿಸಿದರು. ಕರಾವಳಿ ಕಿಂಗ್ಸ್ ಪರ ವಾಸುಕಿ ಕೌಶಿಕ್ 3 ವಿಕೆಟ್ ಪಡೆದು ಮಿಂಚಿದರು.

ಈ ಗೆಲುವಿನೊಂದಿಗೆ ಕರಾವಳಿ ಕಿಂಗ್ಸ್ ನಾಲ್ಕು ಪಂದ್ಯಗಳಿಂದ 5 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿದೆ. ಮೈಸೂರು ವಾರಿಯರ್ಸ್ ನಾಲ್ಕು ಪಂದ್ಯಗಳಲ್ಲಿ ಮೂರನೇ ಸೋಲು ಅನುಭವಿಸಿ 2 ಅಂಕಗಳೊಂದಿಗೆ ಕೊನೆಯ ಸ್ಥಾನದಲ್ಲಿ ಉಳಿದಿದೆ.

ಮೈಸೂರು ಆರ್‌ಬಿಐ ಪೇಪರ್ ಮಿಲ್ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಅನಂತ ಹೆಗ್ಡೆ ನೇಮಕ



ಮೈಸೂರು, ಜೂ.25– ಮೈಸೂರಿನ ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್(ಬಿಎನ್‌ಪಿಎಂಐಪಿಎಲ್)ನ ನೂತನ ವ್ಯವಸ್ಥಾಪಕ ನಿರ್ದೇಶಕರಾಗಿ ಅನಂತ ಹೆಗ್ಡೆ ನೇಮಕಗೊಂಡಿದ್ದು, ಇವರು ಇತ್ತೀಚೆಗೆ ಅಧಿಕಾರ ವಹಿಸಿಕೊಂಡರು.

ಇದಕ್ಕೂ ಮೊದಲು ಬಿಎನ್‌ಪಿಎಂಐಪಿಎಲ್ ಮತ್ತು ಕಂಪನಿಯ ಮುಖ್ಯ ಜನರಲ್ ಮ್ಯಾನೇಜರ್(ತಾಂತ್ರಿಕ) ಆಗಿ ಸೇವೆಯಿಂದ ನಿವೃತ್ತರಾದರು. ಭಾರತೀಯ ರಿಸರ್ವ್ ಬ್ಯಾಂಕ್ ನೋಟು ಮುದ್ರಣ ಪ್ರೈವೇಟ್ ಲಿಮಿಟೆಡ್, ವಿಕ್ರಾಂತ್ ಟೈರ್ಸ್ ಲಿಮಿಟೆಡ್ ಮತ್ತು ಎಸ್‌ಡಿಎಂ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನಲ್ಲೂ ಕಾರ್ಯ ನಿರ್ವಹಿಸಿದ್ದಾರೆ. ರಸಾಯನಶಾಸ್ತ್ರದೊಂದಿಗೆ ಡಿಪ್ಲೋಮಾ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ಸುಮಾರು 37 ವರ್ಷಗಳಿಗೂ ಹೆಚ್ಚು ಕಾಲ ವಿವಿಧ ಕಂಪನಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆ ಮೇಲಿನ ನಿರ್ಬಂಧ ತೆರವು

ನವದೆಹಲಿ: ಪಶ್ಚಿಮ ಏಷ್ಯಾ ಬಿಕ್ಕಟ್ಟು ಸುಧಾರಿಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆ ಮೇಲೆ ವಿಧಿಸಿದ್ದ ಎಲ್ಲಾ ನಿರ್ಬಂಧಗಳನ್ನು ಇದೀಗ ತೆರವುಗೊಳಿಸಿದೆ. ಅಮೆರಿಕ ಹಾಗೂ ಇರಾನ್ ಶಾಂತಿ ಒಪ್ಪಂದದ ಬಳಿಕ ಮಧ್ಯಪ್ರಾಚ್ಯದಲ್ಲಿ ಸಕಾರಾತ್ಮಕ ಬೆಳವಣಿಗೆಗಳು ಕಂಡುಬಂದ ಬೆನ್ನಲ್ಲೇ ಕೇಂದ್ರ ಸರ್ಕಾರ, ಸ್ಥಳೀಯ ಎಲ್‌ಪಿಜಿ ಉತ್ಪಾದನೆಯಲ್ಲಿ ಸುಧಾರಣೆ ಮತ್ತು ಆಮದು ಮಾಡಿಕೊಂಡ ಎಲ್‌ಪಿಜಿ ಸರಕುಗಳ ಅಂದಾಜು ಲಭ್ಯತೆಯನ್ನು ಗಮನಿಸಿ ಈ ನಿರ್ಧಾರ ಕೈಗೊಂಡಿದೆ. ಜೊತೆಗೆ ಬೃಹತ್ ಎಲ್‌ಪಿಜಿ ಪೂರೈಕೆಯನ್ನು ಬಳಕೆಯ ಮಟ್ಟದ ಶೇ.50ರಷ್ಟು ಸಡಿಲಿಸಿದೆ.

ಐದನೇ ಪುಟದಿಂದ

ಅರಸರ ಹೋಲುವ ಪ್ರತಿಮೆ ಪ್ರತಿಷ್ಠಾಪನೆ

ಹಳೆಯ ಪ್ರತಿಮೆಯನ್ನು ಕ್ರೇನ್ ಸಹಾಯದಿಂದ ತೆರವುಗೊಳಿಸುವ ವೇಳೆ ಆಕಸ್ಮಿಕವಾಗಿ ಕ್ರೇನ್ ಸರಪಳಿ ಕಳಚಿ ಪ್ರತಿಮೆ ಕೆಳಗೆ ಬಿದ್ದು ತುಂಡಾಯಿತು. ಸುಮಾರು 92 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಈ ಪ್ರತಿಮೆಯ ಬಗ್ಗೆ ಜನಪ್ರತಿನಿಧಿಗಳು, ದೇವರಾಜ ಅರಸು ಅವರ ಕುಟುಂಬ ಸದಸ್ಯರು ಹಾಗೂ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದರು.

ಯದುವೀರ್ ಶಿಫಾರಸ್ಸಿನ ಬಳಿಕ ಕ್ರಮ: ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪ್ರತಿಮೆಯಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿ ದೇವರಾಜ ಅರಸು ಅವರ ನೈಜ ರೂಪಕ್ಕೆ ಹತ್ತಿರವಾಗಿರುವಂತೆ ಕ್ರಮ ಕೈಗೊಳ್ಳಿ ಎಂದು ಶಿಫಾರಸು ಮಾಡಿದ್ದರು. ಇದರ ಬೆನ್ನಲ್ಲೇ ಜಿಲ್ಲಾಡಳಿತ ಹೊಸ ಪ್ರತಿಮೆ ಸ್ಥಾಪಿಸುವ ನಿರ್ಧಾರ ಕೈಗೊಂಡಿತ್ತು.

ಈ ಕುರಿತು ಮಾತನಾಡಿದ ಅರುಣ್ ಯೋಗಿರಾಜ್, 'ದೇವರಾಜ ಅರಸು ಅವರ ವ್ಯಕ್ತಿತ್ವವನ್ನು ಅಧ್ಯಯನ ಮಾಡಿದ್ದೇನೆ. ಅವರು ತಮ್ಮ ಯೌವನದಲ್ಲಿ ಕುಸ್ತಿಪಟುವಾಗಿಯೂ ಗುರುತಿಸಿ ಕೊಂಡಿದ್ದರು. ಕಪ್ಪು ಕಲ್ಲಿನಲ್ಲಿ ಪ್ರತಿಮೆಯನ್ನು ಕೆತ್ತಲಾಗಿದೆ. ಪ್ರತಿಮೆ ಪೂರ್ಣಗೊಂಡ ಬಳಿಕ ಅವರ ಕುಟುಂಬ ಸದಸ್ಯರಿಗೆ ತೋರಿಸಿದ್ದು, ಅವರು ತೃಪ್ತಿ ವ್ಯಕ್ತಪಡಿಸಿದ್ದಾರೆ. ಪ್ರತಿಮೆಯ ಯಶಸ್ವಿ ಕೆತ್ತನೆಗೆ ದೈವಾನುಗ್ರಹವಿದೆ ಎಂದು ಅವರು ತಿಳಿಸಿದರು.

ಮೈಸೂರು, ಚಾಮರಾಜನಗರ ಉಸ್ತುವಾರಿ

ಸಚಿವ ಬೈರತಿ ಸುರೇಶ್ ಅವರಿಗೆ ಕೋಲಾರ, ಚಿಕ್ಕಬಳ್ಳಾಪುರ, ಕೆ.ಎಚ್.ಮುನಿಯಪ್ಪ ಅವರಿಗೆ ಬೆಂಗಳೂರು ಗ್ರಾಮಾಂತರ, ಬಳ್ಳಾರಿ ಹಾಗೂ ವಿಜಯನಗರ, ಎಂ.ಬಿ. ಪಾಟೀಲ್ ಅವರಿಗೆ ವಿಜಯಪುರ ಮತ್ತು ಬಾಗಲಕೋಟೆ. ಸಚಿವ ಕೆ.ಜೆ.ಜಾರ್ಜ್ ಅವರಿಗೆ ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆ, ಸಚಿವ ಈಶ್ವರ್ ಖಂಡ್ರೆ ಅವರಿಗೆ ಬೀದರ್, ಗದಗ, ಸಚಿವ ಸತೀಶ್ ಜಾರಕಿಹೊಳಿ ಅವರಿಗೆ ಬೆಳಗಾವಿ, ಧಾರವಾಡ ಮತ್ತು ಹಾವೇರಿ ಜಿಲ್ಲೆ ಉಸ್ತುವಾರಿ ವಹಿಸಲಾಗಿದೆ

ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕಲಬುರಗಿ ಮತ್ತು ಯಾದಗಿರಿ ಉಸ್ತುವಾರಿ, ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರಿಗೆ ರಾಯಚೂರು, ಕೊಪ್ಪಳ ಜಿಲ್ಲೆಗಳ ಹೊಣೆಗಾರಿಕೆ ವಹಿಸಿ ಮುಖ್ಯಮಂತ್ರಿ ಆದೇಶ ಹೊರಡಿಸಿದ್ದಾರೆ.


ಕೆಎಸ್‌ಓಯು ನೂತನ ಕುಲಪತಿ

ವಯಸ್ಸಾಗುವವರೆಗೆ ನೇಮಕಗೊಳಿಸಿ ಅಧಿಕೃತವಾಗಿ ಆದೇಶ ಹೊರಡಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವರಾಗಿ ಸೇವೆ ಸಲ್ಲಿಸಿರುವ ಪ್ರೊ.ಎ.ಪಿ. ಜ್ಞಾನಪ್ರಕಾಶ್, ಮೈಸೂರು ವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದ್ದಾರೆ. ನ್ಯಾಕ್ ಪೀರ್ ಟೀಂನ ಸಂಯೋಜಕ ಮತ್ತು ಸದಸ್ಯರಾಗಿ, ಯುಪಿಎಸ್‌ಸಿ, ಕೆಪಿಎಸ್‌ಸಿ, ಎಪಿಎಸ್‌ಸಿ ಮತ್ತು ಇನ್ನಿತರೆ ಸಂಸ್ಥೆಗಳ ಮೌಲ್ಯಮಾಪನ ಮಂಡಳಿ ಸದಸ್ಯರಾಗಿ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ 155ಕ್ಕೂ ಹೆಚ್ಚು ಸಂಶೋಧನಾ ಪತ್ರಿಕೆಗಳನ್ನು ಪ್ರಕಟಿಸಿರುವ ಪ್ರೊ.ಜ್ಞಾನ ಪ್ರಕಾಶ್, ಅಮೆರಿಕಾ, ಬ್ರೆಜಿಲ್, ತೈವಾನ್, ಚೀನಾ, ದುಬೈ ಮತ್ತು ನೆದರ್ಲ್ಯಾಂಡ್ ದೇಶಗಳಿಗೆ ಭೇಟಿ ಕೊಟ್ಟಿದ್ದಾರೆ. 2024ರಲ್ಲಿ ಕರ್ನಾಟಕ ಸರ್ಕಾರವು ಭೌತಶಾಸ್ತ್ರ ಸಂಶೋಧನೆಗೆ ನೀಡಿರುವ ಕೊಡುಗೆಗಳಿಗಾಗಿ 'ಸರ್ ಸಿ.ವಿ.ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ.

ಪ್ರೊ. ಎ.ಪಿ.ಜ್ಞಾನ ಪ್ರಕಾಶ್ ನೇಮಕ ಸ್ವಾಗತಿಸಿದ ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಚಂದ್ರಶೇಖರ್

ಮೈಸೂರು, ಜೂ.25– ರಾಜ್ಯಪಾಲ ಹಾಗೂ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳಾದ ಥಾವರ್‌ಚಂದ್ ಗೆಹ್ಲೋಟ್ ಅವರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ(ಕರಾಮುವಿ)ದ ಕುಲಪತಿಯಾಗಿ ಖ್ಯಾತ ಶಿಕ್ಷಣ ತಜ್ಞ, ವಿಜ್ಞಾನಿ ಹಾಗೂ ಆಡಳಿತ ಪರಿಣಿತರಾದ ಪ್ರೊ.ಎ.ಪಿ.ಜ್ಞಾನಪ್ರಕಾಶ್ ಅವರನ್ನು ನೇಮಕಗೊಳಿಸಿರುವುದು ಶೈಕ್ಷಣಿಕ ವಲಯದಲ್ಲಿ ಹರ್ಷ ತಂದಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್. ಚಂದ್ರಶೇಖರ್ ಅಭಿಪ್ರಾಯಿಸಿದ್ದಾರೆ. ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರಕ್ಕೆ ನೀಡಿದ ಮಹತ್ವದ ಕೊಡುಗೆಗಾಗಿ ಕರ್ನಾಟಕ ಸರ್ಕಾರವು ಜ್ಞಾನಪ್ರಕಾಶ್ ಅವರಿಗೆ ಸರ್ ಸಿ.ವಿ.ರಾಮನ್ ಯುವ ವಿಜ್ಞಾನಿ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ನೇಮಕದಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಹೊಸ ಶೈಕ್ಷಣಿಕ ದೃಷ್ಟಿಕೋನ, ಸಂಶೋಧನಾ ಶ್ರೇಷ್ಠತೆ, ತಂತ್ರಜ್ಞಾನ ಆಧಾರಿತ ಮುಕ್ತ ಮತ್ತು ದೂರಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿ ಹಾಗೂ ರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಸಾಧನೆಗಳತ್ತ ಮತ್ತಷ್ಟು ವೇಗವಾಗಿ ಮುನ್ನಡೆಯಲಿದೆ ಎಂದು ಟಿ.ಆರ್. ಚಂದ್ರಶೇಖರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಯಮುನಾ ಮನೆಯಲ್ಲಿ ಸತತ 21 ಗಂಟೆ ಇಡಿ ಶೋಧ

ಮನೆ ಮೇಲೆ ನಿನ್ನೆ ಬೆಳಿಗ್ಗೆ 5.30 ಗಂಟೆಗೆ ಇಡಿ ಅಧಿಕಾರಿಗಳು ದಾಳಿ ಮಾಡಿದ್ದರು. ಮುಂಜಾನೆ ಆರಂಭವಾದ ವಿಚಾರಣೆ ಇಂದು ಮುಂಜಾನೆ 2 ಗಂಟೆಗೆ ಕೊನೆಗೊಂಡಿದೆ. ಮೊದಲು ಯಮುನಾ ಅವರ ಮನೆಯ ಪ್ರತಿಯೊಂದು ಸ್ಥಳವನ್ನು ಜಾಲಾಡಿದ ಇಡಿ ಅಧಿಕಾರಿಗಳು ಚಿನ್ನಾಭರಣ, ನಗದು, ದಾಖಲಾತಿಗಳನ್ನು ಪರಿಶೀಲನೆ ನಡೆಸಿದರು. ತರುವಾಯ ಯಮುನಾ ಅವರ ಖಾತೆ ಇರುವ ಬ್ಯಾಂಕ್‌ಗೆ ಕರೆದೊಯ್ದು ಲಾಕರ್ ಪರಿಶೀಲನೆ ನಡೆಸಿದರು. ಮತ್ತೆ ದಟ್ಟಗಳ್ಳಿಯ ಅವರ ಮನೆಗೆ ಕರೆತಂದ ಬ್ಯಾಂಕ್‌ನ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆದರು. ನಂತರ ಡಾ.ಮಂಜುನಾಥ್ ಅವರ ಜೊತೆಗಿರುವ ಆರ್ಥಿಕ ವ್ಯವಹಾರ, ಹಣಕಾಸು ವಹಿವಾಟು ಸೇರಿದಂತೆ ಹಲವು ವಿಚಾರಗಳ ಬಗ್ಗೆ ಯಮುನಾ ಅವರನ್ನು ಸುದೀರ್ಘ ವಿಚಾರಣೆಗೊಳಪಡಿಸಿದರು.

ಸತತ 21 ಗಂಟೆಗಳ ಕಾರ್ಯಾಚರಣೆ ವೇಳೆ ಇಡಿ ಅಧಿಕಾರಿಗಳು ಪ್ರತಿಯೊಂದು ವಿಚಾರವನ್ನು ದಾಖಲಿಸಿಕೊಂಡಿದ್ದಾರೆ.

ಉಪ್ಪು ತಿಂದವರು ನೀರು ಕುಡಿಯುತ್ತಾರೆ

ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಡಾ.ಮಂಜುನಾಥ್ ಅವರ ಮನೆ ಮೇಲಿನ ಇಡಿ ದಾಳಿ ಕುರಿತಂತೆ ಮಾಜಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. 'ನನ್ನ ಇಲಾಖೆಯಲ್ಲಿ ಐಎಎಸ್ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಮಂಜುನಾಥ್ ಮನೆ ಮೇಲಿನ ಇಡಿ ದಾಳಿ ಬಗ್ಗೆ ಸದ್ಯಕ್ಕೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಸ್ಪಷ್ಟನೆ ನೀಡಿದರು. ಈ ಹಿಂದೆ ಡಾ.ಮಂಜುನಾಥ್ ವಿರುದ್ಧ ಒಂದೆರಡು ಬಾರಿ ತನಿಖೆ ಆಗಿತ್ತು. ಆದರೆ ಹವಾಲಾ ಬಗ್ಗೆ ನನಗೇನು ಮಾಹಿತಿ ಇಲ್ಲ. ಇದೇನೆ ಇರಲಿ, ಉಪ್ಪು ತಿಂದವರು ನೀರು ಕುಡಿಯುತ್ತಾರೆ ಎಂದು ತಿಮ್ಮಾಪುರ ಅವರು ಹೇಳಿದರು.

ನಂತರ ಮನೆಯಲ್ಲಿ ದೊರೆತ ದಾಖಲಾತಿ, ಚಿನ್ನಾಭರಣ, ನಗದು ಮಹಜರು ನಡೆಸಿದರು. ಈ ಮೂಲಕ ಇಡಿ ಅಧಿಕಾರಿಗಳ ತಂಡ ಇಂದು ಮುಂಜಾನೆ 2 ಗಂಟೆಗೆ ಕಾರ್ಯಾಚರಣೆ ಪ್ರಕ್ರಿಯೆ ಪೂರ್ಣಗೊಳಿಸಿ ಯಮುನಾ ಅವರ ಮನೆಯಿಂದ ನಿರ್ಗಮಿಸಿದೆ. ಇಡಿ ಅಧಿಕಾರಿಗಳು ಯಮುನಾ ಅವರ ಮನೆಯಲ್ಲಿ ಸತತ 21 ಗಂಟೆ ಕಾಲ ಕಾರ್ಯಾಚರಣೆ ನಡೆಸಿದ ವೇಳೆ ಕೇಂದ್ರದ ಅರೆ ಸೇನಾ ಪಡೆಯ ಸಿಬ್ಬಂದಿ ಭದ್ರತೆ ಕಲ್ಪಿಸಿದ್ದರು. ಇಡೀ ದಿನ ಅವರ ಮನೆಗೆ ಯಾರಿಗೂ ಪ್ರವೇಶ ಇಲ್ಲ.

ಇಡಿ ಅಧಿಕಾರಿಗಳು ಯಮುನಾ ಅವರ ಮನೆ ಮೇಲೆ ದಾಳಿಗೆ ಮುನ್ನ ಹಿಂದಿನ ದಿನ ರಾತ್ರಿ ಅಂದರೆ ಮಂಗಳವಾರವೇ ಮೈಸೂರಿಗೆ ಆಗಮಿಸಿ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿ, ಬೆಳಿಗ್ಗೆ 5.30 ಗಂಟೆಗೆ ದಾಳಿ ನಡೆಸಿದ್ದಾರೆ.

ಇಡಿ ಕಾರ್ಯಾಚರಣೆ ಪೂರ್ಣಗೊಂಡ ಬಳಿಕ ಹಿನ್ನೆಲೆಯಲ್ಲಿ ಯಮುನಾ ಅವರ ಮನೆ ಗೇಟ್‌ಗೆ ಬೀಗ ಹಾಕಿದ್ದು, ಸಿಸಿಟಿವಿ ದೃಶ್ಯ ನೋಡಿ ಪರಿಚಯಸ್ಥರು ಹಾಗೂ ಆಪ್ತರಿಗೆ ಮಾತ್ರವೇ ಬಾಗಿಲು ತೆರೆಯುತ್ತಿದ್ದರು.

ಇಡಿ ಅಧಿಕಾರಿಗಳಿಗೆ ನನ್ನ ಮನೆಯಲ್ಲಿ ಏನೂ ಸಿಗಲಿಲ್ಲ

ಇಡಿ ಅಧಿಕಾರಿಗಳು ನಿನ್ನೆ ಇಡೀ ದಿನ ಪರಿಶೀಲನೆ ನಡೆಸಿ ಇಂದು ಮುಂಜಾನೆ 2 ಗಂಟೆಗೆ ಕಾರ್ಯಾಚರಣೆ ಪೂರ್ಣಗೊಳಿಸಿದರು. ಆದರೆ ಅವರ ಪರಿಶೀಲನೆ ವೇಳೆ ಆಸ್ತಿ ದಾಖಲಾತಿ ಸೇರಿದಂತೆ ಏನೂ ಸಿಗಲಿಲ್ಲ ಎಂದು ಯಮುನಾ ಸ್ಪಷ್ಟಪಡಿಸಿದರು. ದಟ್ಟಗಳ್ಳಿಯ ಅವರ ಮನೆಗೆ ಭೇಟಿ ನೀಡಿದ 'ಮೈಸೂರು ಮಿತ್ರ'ನಿಗೆ ಇಡಿ ಕಾರ್ಯಾಚರಣೆಯ ಬಗ್ಗೆ ಯಮುನಾ ಮಾಹಿತಿ ನೀಡಿದರು.

ಮನೆಯಲ್ಲಿ ಪರಿಶೀಲನೆ ನಡೆಸಿದ ನಂತರ ನನ್ನ ಅಕೌಂಟ್ ಇರುವ ಬ್ಯಾಂಕ್‌ಗೆ ಕರೆದೊಯ್ದರು. ಆದರೆ ಬ್ಯಾಂಕ್ ಲಾಕರ್‌ನಲ್ಲಿ ಇಡಿ ಅಧಿಕಾರಿಗಳಿಗೆ ಏನೂ ಸಿಗಲಿಲ್ಲ ಎಂದರು. ಡಾ.ಮಂಜುನಾಥ್ ಅವರಿಗೆ ನಾನು ಪರಿಚಯ ಇರುವ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ನನ್ನ ಮನೆ ಮೇಲೆ ದಾಳಿ ಮಾಡಿದ್ದಾರೆ. ಆದರೆ ಇಡಿ ಅಧಿಕಾರಿಗಳಿಗೆ ನನ್ನ ಮನೆಯಲ್ಲಿ ಏನೂ ಸಿಗಲಿಲ್ಲ. ಯಾರೋ ತಪ್ಪು ಮಾಹಿತಿ ನೀಡಿರುವ ಕಾರಣ ಅವರು ದಾಳಿ ಮಾಡಿದ್ದಾರೆ ಎಂದು ಸ್ಪಷ್ಟನೆ ನೀಡಿದರು.

ಈ ಮನೆ ನನ್ನ ಸ್ವಂತದ್ದಾಗಿದೆ. ಇದು ಬಿಟ್ಟು ಇಡಿ ಅವರಿಗೆ ಯಾವುದೇ ದಾಖಲಾತಿ ದೊರೆತಿಲ್ಲ. ಅಷ್ಟೇ ಏಕೆ ನನ್ನ ಮನೆಯಲ್ಲಿ ಏನೂ ಇಲ್ಲ ಎಂದು ಹೇಳಿದರು. ಇನ್ನು 15 ದಿನದೊಳಗೆ ಬೆಂಗಳೂರಿನ ಇಡಿ ಕಚೇರಿಗೆ ಕೆಲವು ದಾಖಲಾತಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ. ವಿಚಾರಣೆ ಅಗತ್ಯವಿದ್ದರೆ ನೋಟಿಸ್ ನೀಡುವುದಾಗಿ ತಿಳಿಸಿದ್ದಾರೆ. ಒಂದು ವೇಳೆ ಇಡಿ ಅವರು ನೋಟಿಸ್ ನೀಡಿದರೆ ವಿಚಾರಣೆಗೆ ಹಾಜರಾಗುತ್ತೇನೆ ಎಂದರು.

ಅವರು ಸಮಗ್ರವಾಗಿ ಪರಿಶೀಲನೆ ನಡೆಸಿದ್ದಾರೆ. ಅಲ್ಲದೆ ಮಹಜರು ಪ್ರಕ್ರಿಯೆ ಕೂಡ ನಡೆಸಿದ್ದಾರೆ. ಇದರಿಂದ ಸಹಜವಾಗಿಯೇ ಕಾರ್ಯಾಚರಣೆ ಸುದೀರ್ಘ ಸಮಯ ತೆಗೆದುಕೊಂಡಿದೆ. ಬೆಳಿಗ್ಗೆಯಿಂದ ಮುಂಜಾನೆ ತನಕ ವಿಚಾರಣೆ ಮಾಡಿದ್ದಾರೆ ಎಂದ ಮಾತ್ರಕ್ಕೆ ಇದಕ್ಕೆ ಹೆಚ್ಚಿನ ಮಹತ್ವ ನೀಡುವ ಅಗತ್ಯವಿಲ್ಲ ಎಂದು ಯಮುನಾ ಅಭಿಪ್ರಾಯಪಟ್ಟರು.

ಮತ್ತೊಂದು ಹೊಸ ತಲೆನೋವು

ಮೃತರ ಸದಸ್ಯ ದೃಢೀಕರಣ ಪತ್ರ, ಮೃತರ ಜೀವಂತ ಸದಸ್ಯರ ದೃಢೀಕರಣ ಪತ್ರ, ಭೂ ಹಿಡುವಳಿ, ಸಾಮಾಜಿಕ ಭದ್ರತೆ, ವಿಧವಾ ವೇತನ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ, ಅಂಗವಿಕಲರ ದೃಢೀಕರಣ ಇನ್ನಿತರೆ ಪತ್ರ ಪಡೆಯಲು ಅರ್ಜಿ ಸಲ್ಲಿಸಿದ್ದಾರೆ. ಈ ಕಟ್ಟುನಿಟ್ಟಿನ ನಿಯಮದಿಂದ ಆರೋಗ್ಯ, ಶಿಕ್ಷಣ, ಉದ್ಯೋಗ ಕ್ಷೇತ್ರದಲ್ಲಿ ಸೌಲಭ್ಯ ಪಡೆಯುವಲ್ಲಿ ವಂಚಿತರಾಗುವಂತಾಗಿದೆ.

ಎದುರಾಗುತ್ತಿರುವ ಸಮಸ್ಯೆಗಳು: ಪೊಲೀಸ್ ಇಲಾಖೆಯ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ವಿವಿಧ ಪ್ರಮಾಣ ಪತ್ರ ಲಗತ್ತಿಸಬೇಕಾಗಿದೆ. ಹಾಗೆಯೇ ಶಾಲಾ–ಕಾಲೇಜು ದಾಖಲಾತಿ ವೇಳೆ ಶುಲ್ಕ ರಿಯಾಯಿತಿ ಸೌಲಭ್ಯ, ಹಾಸ್ಟೆಲ್ ಸೀಟ್ ಪಡೆಯಲು, ವಿದ್ಯಾರ್ಥಿ ವೇತನಕ್ಕಾಗಿ ಜಾತಿ, ಆದಾಯ ಪ್ರಮಾಣ ಪತ್ರ ಅಗತ್ಯವಿದೆ.


ಅಲ್ಲದೆ, ಅನಾರೋಗ್ಯ ಪೀಡಿತರು ಆಸ್ಪತ್ರೆ ಶುಲ್ಕದಲ್ಲಿ ವಿನಾಯಿತಿ ಪಡೆಯಲು, ಸರ್ಕಾರದ ವಿವಿಧ ಸೌಲಭ್ಯ ಪಡೆಯಲು, ಆರ್ಥಿಕ ನೆರವು ಪಡೆಯುವುದಕ್ಕೂ ಜಾತಿ, ಆದಾಯ ಪ್ರಮಾಣ ಪತ್ರ ನೀಡಬೇಕಾಗಿದೆ. ಎಸ್‌ಟಿಸಿ ಗೇಣಿ ಪಡೆಯಲು ಅರ್ಜಿದಾರರು ಬೇರೆ ಕಡೆ ವಾಸವಿದ್ದರೆ, ಭೂಮಿ ಮತ್ತೊಂದು ಕಡೆ ಇದ್ದರೆ ಅದರ ಪ್ರಮಾಣ ಪತ್ರ ನೀಡಲು ಸಾಧ್ಯವಾಗುತ್ತಿಲ್ಲ. ಈ ಪ್ರಮಾಣ ಪತ್ರವನ್ನು ಹೇಗೆ ನೀಡಬೇಕೆಂಬ ನಿರ್ದೇಶನ ನೀಡಿಲ್ಲ. ಇದರಿಂದ ಎಸ್‌ಟಿಸಿ ಗೇಣಿಗಾಗಿ ಅರ್ಜಿ ಸಲ್ಲಿಸಿರುವವರು ಪರದಾಡುವಂತಾಗಿದೆ.

15 ನಿಮಿಷದೊಳಗೆ ಪೂರ್ಣಗೊಳಿಸಬೇಕು: ವಿವಿಧ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸುವವರು ಕೆಲವು ದಾಖಲೆಗಳನ್ನು ಸ್ಕ್ಯಾನ್ ಮಾಡಬೇಕಾಗಿದೆ. ಅಗತ್ಯ ದಾಖಲೆಗಳನ್ನು ಸ್ಕ್ಯಾನ್ ಮಾಡಲು 10 ನಿಮಿಷ ಬೇಕಾಗುತ್ತದೆ. ಆ ನಂತರ ಅರ್ಜಿದಾರರ ಮೊಬೈಲ್‌ಗೆ ಓಟಿಪಿ ಬರುತ್ತದೆ. ಕೆಲವರಿಗೆ ಓಟಿಪಿ ಸೆಂಡ್ ಆಗುವುದಿಲ್ಲ. 15 ನಿಮಿಷ ಆಗುತ್ತಿದ್ದಂತೆ ಲಾಗ್‌ಔಟ್ ಆಗುತ್ತದೆ. ಇದರಿಂದ ಮತ್ತೆ ಪ್ರಯತ್ನಿಸ ಬೇಕಾಗುತ್ತದೆ. ಕೆಲವೊಮ್ಮೆ ಸರ್ವರ್ ಡೌನ್ ಆಗಿ ಅರ್ಜಿ ಸಲ್ಲಿಸುವುದಕ್ಕೂ ಯಾತನೆ ಪಡುವಂತಾಗುತ್ತಿದೆ.

ದಿನಕ್ಕೆ 100 ಅರ್ಜಿ ವಿಲೇವಾರಿ, 400 ಅರ್ಜಿ ಸಲ್ಲಿಕೆ: ಮೈಸೂರು ತಾಲೂಕು ಕಚೇರಿಗೆ ವಿವಿಧ ಪ್ರಮಾಣ ಪತ್ರಕ್ಕಾಗಿ ದಿನಕ್ಕೆ 400ರಿಂದ 500 ಅರ್ಜಿ ಸಲ್ಲಿಕೆಯಾಗುತ್ತಿದೆ. ಇದುವರೆಗೂ 2100 ಅರ್ಜಿಗಳು ವಿಲೇವಾರಿಗಾಗಿ ಕಾದಿವೆ. ಅದರಲ್ಲಿ ಪ್ರತಿಯೊಂದು ಅರ್ಜಿಗೂ ತಹಶೀಲ್ದಾರರು ಬೆರಳಚ್ಚು (ತಮ್) ನೀಡಬೇಕಾಗುತ್ತದೆ. ದಿನವೊಂದಕ್ಕೆ ನಾನಾ ಕೆಲಸ, ಸಭೆ ನಡುವೆಯೂ ತಹಶೀಲ್ದಾರರು ಲಾಗಿನ್ ಮೂಲಕ 100 ರಿಂದ 120 ಅರ್ಜಿಗಳಿಗೆ ಬೆರಳಚ್ಚು ನೀಡಿ ವಿಲೇವಾರಿ ಮಾಡುತ್ತಿದ್ದಾರೆ. ಆದರೂ, ಸಾವಿರಾರು ಅರ್ಜಿದಾರರಿಗೆ ನಿಗದಿತ ಸಮಯದಲ್ಲಿ ಅಗತ್ಯ ಪ್ರಮಾಣ ಪತ್ರ ನೀಡಲು ಸಾಧ್ಯವಾಗುತ್ತಿಲ್ಲ.

ಬೈರಮಂಗಲಕ್ಕೆ ಬರುವಂತೆ ಮತ್ತೆ ಸಿಎಂ ಡಿಕೆಶಿಗೆ ಪತ್ರ ಬರೆದ ಕೇಂದ್ರ ಹೆಚ್‌ಡಿಕೆ

ನವದೆಹಲಿ, ಜೂ.25– ಬಿಡದಿ ಉಪನಗರ(ಟೌನ್‌ಶಿಪ್) ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಲು ಬೈರಮಂಗಲಕ್ಕೆ ಬರುವಂತೆ ಕೋರಲಾಗಿದ್ದ ಪತ್ರಕ್ಕೆ ಯಾವುದೇ ಪ್ರತ್ಯುತ್ತರ ಬಾರದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಿಗೆ ಮತ್ತೊಂದು ಪತ್ರ ಬರೆದಿದ್ದಾರೆ.



ಕುಮಾರಸ್ವಾಮಿ

ನೊಂದ ರೈತರ ಸಮ್ಮುಖದಲ್ಲಿಯೇ ಚರ್ಚೆ ನಡೆಯಬೇಕು ಎಂಬ ನಿಲುವಿಗೆ ಬದ್ಧರಾಗಿರುವ ಕೇಂದ್ರ ಸಚಿವರು, ತಮ್ಮ ಅಧಿಕಾರಿಗಳೊಂದಿಗೆ ಬೈರಮಂಗಲಕ್ಕೆ ಬರುವಂತೆ ಮುಖ್ಯಮಂತ್ರಿಗಳನ್ನು ಮತ್ತೊಮ್ಮೆ ಆಹ್ವಾನಿಸಿದ್ದು, ತಮ್ಮ ಆಪ್ತಸಿಬ್ಬಂದಿ ಮೂಲಕ ಮುಖ್ಯಮಂತ್ರಿಗಳ ಕಚೇರಿಗೆ ತಲುಪಿಸಿರುವ ಪತ್ರವನ್ನು ಮಾಧ್ಯಮಗಳಿಗೂ ಬಿಡುಗಡೆ ಮಾಡಿದ್ದಾರೆ.

ಹೆಚ್‌ಡಿಕೆ ಪತ್ರದ ಒಕ್ಕಣೆ: ಶ್ರೀ ಡಿ.ಕೆ. ಶಿವಕುಮಾರ್‌ರವರೇ, ತಾವು ದಿನಾಂಕ: 22–06–2026ರಂದು ನನಗೆ ಬರೆದಿರುವ ಪತ್ರ ಮತ್ತು ನಾನು ಅದೇ ದಿನ ಉತ್ತರವಾಗಿ ಬರೆದಿರುವ ಪತ್ರದ ಕಡೆ ತಮ್ಮ ಅವಧಾನ ಗಮನ ಸೆಳೆಯಬಯಸುತ್ತೇನೆ. ನನ್ನ ಆ ಪತ್ರವನ್ನು ತಾವು ಗಮನಿಸಿದ್ದೀರಿ ಎಂದು ಭಾವಿಸುತ್ತೇನೆ ಮತ್ತು ನನ್ನ ಈ ಪತ್ರಕ್ಕೆ ತಮ್ಮಿಂದ ಉತ್ತರದ ನಿರೀಕ್ಷೆಯಲ್ಲಿದ್ದೇನೆ. ನನ್ನ ಪತ್ರದಲ್ಲಿ ಕಾಣಿಸಿದಂತೆ ಬಿಡದಿಯಲ್ಲಿ ರೂಪಿಸಲಾಗಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯಿಂದ ಬಾಧಿತರಾಗುವ ರೈತರು, ಕೃಷಿ ಕಾರ್ಮಿಕರು, ಹೈನುಗಾರಿಕೆಯಲ್ಲಿ ತೊಡಗಿರುವ ರೈತ ಮಹಿಳೆಯರು, ಸಣ್ಣ ಉದ್ದಿಮೆಗಳು ಹಾಗೂ ಗ್ರಾಮಸ್ಥರ ಅಹವಾಲನ್ನು ಮತ್ತು ಭಾವನೆಗಳನ್ನು ಕೇಳಲು ದಿನಾಂಕ:27–06–2026ರಂದು ನಾನು ಬೈರಮಂಗಲ ಗ್ರಾಮಕ್ಕೆ ಭೇಟಿ ನೀಡಲಿದ್ದೇನೆ. ಆದ್ದರಿಂದ, ಅಂದು ತಾವು ಕೂಡ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಈ ಬೈರಮಂಗಲ ಗ್ರಾಮಕ್ಕೆ ಭೇಟಿ ನೀಡಿದರೆ ನಾವಿಬ್ಬರು ಖುದ್ದಾಗಿ ಬಾಧಿತ ವರ್ಗದ ಜನರ ಸಂಕಷ್ಟಗಳನ್ನು ಆಲಿಸಿ ಸ್ಥಳದಲ್ಲಿಯೇ ಪರ್ಯಾಯ ಮಾರ್ಗಗಳನ್ನು ಯೋಚಿಸಲು ಸಾಧ್ಯವಾಗುತ್ತದೆ ಎಂದು ನಾನು ಭಾವಿಸಿದ್ದೇನೆ.

ಚಿನ್ನಾಭರಣ, ನಗದು, ವಿದೇಶಿ ಕರೆನ್ಸಿ ವಶಕ್ಕೆ

ಮತ್ತು ವಿವಿಧ ವ್ಯವಹಾರಗಳಲ್ಲಿ ಹೂಡಿಕೆ ಮಾಡುವ ಮೂಲಕ ಹಣ ಅಕ್ರಮ ವರ್ಗಾವಣೆ (ಮನಿ ಲಾಂಡರಿಂಗ್) ಚಟುವಟಿಕೆಗಳಲ್ಲಿ ತೊಡಗಿಸುವ ಬಗ್ಗೆ ಜಾರಿ ನಿರ್ದೇಶನಲಾಯಕ್ಕೆ ಲಭಿಸಿದ ದಾಖಲೆಗಳು ಮತ್ತಷ್ಟು ದೃಢಪಡಿಸಿದ್ದವು.

ಆಪ್ತರು ಶಾಮೀಲು: ಅಬಕಾರಿ ಇಲಾಖೆಯ ಅಧಿಕಾರಿಗಳಾದ ಜಗದೀಶ್ ನಾಯಕ್, ಕೆ.ಎಂ.ತಮ್ಮಣ್ಣ ಮತ್ತು ವೈ.ಡಿ.ಮಂಜುನಾಥ್ ಅವರಿಗೆ ಸಂಬಂಧಿಸಿದಂತೆ ಶೋಧ ಕಾರ್ಯಾಚರಣೆ ನಡೆದಿದ್ದು, ಅವರ ಕುಟುಂಬ ಸದಸ್ಯರು, ವ್ಯವಹಾರ ಪಾಲುದಾರರು ಹಾಗೂ ಆಪ್ತ ಸಹಚರರ ನಿವಾಸ, ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ.

ಈ ವೇಳೆಯಲ್ಲಿ ಅನೇಕ ಅಂಶಗಳು ಬಹಿರಂಗಗೊಂಡಿವೆ. ಈ ಅಧಿಕಾರಿಗಳು ಹಾಗೂ ಅವರ ಸಹಚರರು ಸಂಘಟಿತ ಸಿಂಡಿಕೇಟ್ ಜಾಲದಂತೆ ಕಾರ್ಯನಿರ್ವಹಿಸಿದ್ದು, ಇವರ ವ್ಯವಹಾರ ವಿವಿಧ ಅಬಕಾರಿ ಅಂಗಡಿಗಳಿಂದ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ಮಾಸಿಕವಾಗಿ ನಿಗದಿ ಪ್ರಮಾಣದಲ್ಲಿ ನೀಡಲಾಗುವ ಲಂಚದ ಹಣದ ಮೇಲೆ ಅವಲಂಬಿತವಾಗಿದೆ.

ಪರವಾನಗಿಗಳ ನವೀಕರಣ, ಸ್ಥಳಾಂತರ ಹಾಗೂ ಹೊಸ ಪರವಾನಗಿಗಳ ಮಂಜೂರಾತಿ ಪ್ರಕ್ರಿಯೆಗಳ ಸಂದರ್ಭದಲ್ಲಿ ಸಹ ಲಂಚದ ಹಣ ಸಂಗ್ರಹಿಸಲಾಗುತ್ತಿದೆ. ಆ ಮೂಲಕ ಲಂಚವನ್ನು ಮಧ್ಯವರ್ತಿಗಳು ಮತ್ತು ಸಹವರ್ತಿಗಳ ಸಹಾಯದಿಂದ ಒಟ್ಟುಗೂಡಿಸುವುದು ಹಾಗೂ ವಿತರಿಸುವುದು ಕಂಡುಬಂದಿದೆ. ಈ ಸಂಬಂಧ ಅನಧಿಕೃತ ನಗದು ಪುಸ್ತಕದಲ್ಲಿ ಸ್ವೀಕಾರ ಮತ್ತು ಪಾವತಿಯ ನಿರ್ವಹಣೆ ಮಾಡಲಾಗುತ್ತಿದೆ (ಅಂತಹ ಒಂದು ದಾಖಲೆಯು ಕಾರ್ಯಾಚರಣೆ ವೇಳೆ ಪತ್ತೆಯಾಗಿದ್ದು, ಅದನ್ನು ವಶಪಡಿಸಿಕೊಳ್ಳಲಾಗಿದೆ). ಈ ರೀತಿ ಸಂಗ್ರಹಿಸಿದ ಲಂಚದ ಹಣವನ್ನು ವೈಯಕ್ತಿಕ ಖರ್ಚು, ಆಸ್ತಿ ಖರೀದಿ ಮತ್ತು ವಿವಿಧ ವ್ಯವಹಾರಗಳಲ್ಲಿ ಹೂಡಿಕೆ ಮಾಡಲು ಬಳಸಿದ್ದಾರೆ. ತನಿಖೆ ವೇಳೆ ಪತ್ತೆಯಾದ ಹಣ ಅಕ್ರಮ ವರ್ಗಾವಣೆ (ಮನಿ ಲಾಂಡರಿಂಗ್) ವಿಧಾನವೆಂದರೆ, ಅಧಿಕಾರಿಗಳಾದ ಇವರು, ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಅಥವಾ ಸದಸ್ಯರ ನಿಯಂತ್ರಣದಲ್ಲಿರುವ ಸಂಸ್ಥೆಗಳ ಹೆಸರಿನಲ್ಲಿ ಮದ್ಯ ಮಾರಾಟ ಪರವಾನಗಿಗಳನ್ನು ಪಡೆದು, ಅವುಗಳ ಮೂಲಕ ಅಕ್ರಮವಾಗಿ ಮದ್ಯ ವ್ಯವಹಾರ ನಡೆಸುತ್ತಿರುವುದು ಬಹಿರಂಗವಾಗಿದೆ.

ಅಕ್ರಮವಾಗಿ ಗಳಿಸುವ ಆದಾಯವನ್ನು ಕಾನೂನುಬದ್ಧ ವ್ಯವಹಾರಗಳಿಂದ ಗಳಿಸಿದ ಆದಾಯವೆಂದು ಬಿಂಬಿಸುತ್ತಾರೆ. ಆ ಮೂಲಕ ಸಾಮಾನ್ಯ ಆರ್ಥಿಕ ವ್ಯವಸ್ಥೆಯಲ್ಲಿ ಅದನ್ನು ತೋರ್ಪಡಿಸಲಾಗುತ್ತದೆ. ಶೋಧ ಕಾರ್ಯಾಚರಣೆ ವೇಳೆ ವಿವಿಧ ಸ್ಥಳಗಳಲ್ಲಿ ಡಿಜಿಟಲ್ ಸಾಧನ, ಹಣ ಹಂಚಿಕೆ ದಾಖಲೆಗಳು, ಆಸ್ತಿ ದಾಖಲೆಗಳು ಸೇರಿದಂತೆ ಮಹತ್ವದ ಸಾಕ್ಷ್ಯಗಳನ್ನು ವಶಪಡಿಸಿಕೊಳ್ಳಲಾಗಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ಇಡಿ ಗುರುವಾರ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದೆ.

ಮೈಸೂರಿನಲ್ಲಿ ಎಸ್ಐಆರ್ ಕುರಿತ ವಿಶೇಷ ಚರ್ಚಾ ಸಭೆ

ಮುಂಬರುವ ಪ್ರತಿ ಚುನಾವಣೆ ಹಣೇಬರಹ ಎಸ್ಐಆರ್ ನಿರ್ಧರಿಸಲಿದೆ

●ಲಘುವಾಗಿ ಪರಿಗಣಿಸಿದರೆ ಭವಿಷ್ಯದಲ್ಲಿ ಪಕ್ಷಕ್ಕೆ ಭಾರೀ ಹಿನ್ನಡೆ ●ಬಿಜೆಪಿ ಕಾರ್ಯಕರ್ತರಿಗೆ ಮಾಜಿ ಶಾಸಕ ಪ್ರೀತಂ ಗೌಡ ಎಚ್ಚರಿಕೆ ●ಜೂನ್ 26ರಿಂದ ಜುಲೈ 30ರವರೆಗೆ ಎಸ್ಐಆರ್ ●ಒಂದು ದೇಶ ಒಂದು ಚುನಾವಣೆ, ಕ್ಷೇತ್ರ ಮರು ವಿಂಗಡಣೆ ಮೇಲೆ ಪರಿಣಾಮ ●ನಿರ್ಲಕ್ಷ್ಯ ತೋರಿದರೆ ಶಾಸಕರ ಹೆಸರೇ ಮತದಾರರ ಪಟ್ಟಿಯಿಂದ ಡಿಲೀಟ್ ●ಮೈಯೆಲ್ಲಾ ಕಣ್ಣಾಗಿರಿ, ಮತದಾರರ ಜೊತೆ ಸದಾ ಸಂಪರ್ಕದಲ್ಲಿರಿ

ಮೈಸೂರು, ಜೂ.25(ಬಿಎಲ್‌ಯು)– ಮುಂಬರುವ ಲೋಕಸಭೆ, ವಿಧಾನಸಭೆ ಸೇರಿದಂತೆ ಪ್ರತಿಯೊಂದು ಚುನಾವಣೆಯ ಹಣೆಬರಹವನ್ನು ಎಸ್ಐಆರ್ (ವಿಶೇಷ ತೀವ್ರ ಪರಿಷ್ಕರಣೆ) ನಿರ್ಧರಿಸಲಿದ್ದು, ಇದನ್ನು ಲಘುವಾಗಿ ಪರಿಗಣಿಸಿದರೆ ಭವಿಷ್ಯದಲ್ಲಿ ಪಕ್ಷಕ್ಕೆ ಭಾರೀ ಹಿನ್ನಡೆಯಾಗಲಿದೆ ಎಂದು ಮಾಜಿ ಶಾಸಕರೂ ಆದ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಕಾರ್ಯಕರ್ತರನ್ನು ಎಚ್ಚರಿಸಿದರು.

ಮೈಮರೆಯದಿರಿ: ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಇಂದು ಬಿಜೆಪಿ ಆಯೋಜಿಸಿದ್ದ ಎಸ್ಐಆರ್ ಕುರಿತ ವಿಶೇಷ ಚರ್ಚಾ ಸಭೆಯಲ್ಲಿ ಮಾತನಾಡಿದ ಅವರು, ಎಸ್ಐಆರ್ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ನನ್ನನ್ನೂ ಸೇರಿದಂತೆ ಹಾಲಿ ಶಾಸಕರಾಗಿರುವ ಹಾಗೂ ಶಾಸಕರಾಗಲು ಇಚ್ಛಿಸುವವರ ಮತಗಳು ಮತದಾರರ ಪಟ್ಟಿಯಿಂದ ಡಿಲೀಟ್ ಆಗುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ಸಂದೇಶ ರವಾನಿಸಿದರು.

ಒಂದು ದೇಶ, ಒಂದು ಚುನಾವಣೆ, ಕ್ಷೇತ್ರ ಮರು ವಿಂಗಡಣೆ ಪ್ರಕ್ರಿಯೆಗಳ ಹಣೇಬರಹವನ್ನು ಎಸ್ಐಆರ್ ನಿರ್ಧರಿಸಲಿದ್ದು, ಈ ಬಗ್ಗೆ ಕಾರ್ಯಕರ್ತರು ಗಂಭೀರತೆ ವಹಿಸಬೇಕು. ಯಾರೂ ನಿರ್ಲಕ್ಷ್ಯ ತೋರಬಾರದು ಎಂದು ಪ್ರೀತಂ ಗೌಡ ಸಲಹೆ ನೀಡಿದರು.

ಎಸ್ಐಆರ್ ಪ್ರಕ್ರಿಯೆ ಬಗ್ಗೆ ಕಳೆದ ಆರು ತಿಂಗಳಿಂದ ಮಾತನಾಡುತ್ತಾ ಕಾಲ ಕಳೆದಿದ್ದೇವೆ. ಆದರೆ, ಎಸ್ಐಆರ್ ನಡೆಯುವ ಕಾಲ ಈಗ ಸನಿಹದಲ್ಲೇ ಇದ್ದು, ಜೂನ್ 26 ರಿಂದ ಜುಲೈ 30 ರವರೆಗೆ ಎಸ್ಐಆರ್ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿಯ ಪ್ರತಿ ಶಕ್ತಿ ಕೇಂದ್ರ, ಮಹಾ ಶಕ್ತಿ ಕೇಂದ್ರಗಳ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ಕಾರ್ಪೋರೇಟರ್‌ಗಳನ್ನು ಒಳಗೊಂಡ ಪ್ರತ್ಯೇಕ ತಂಡ ರಚಿಸಿ, ತುರ್ತು ಸಭೆಗಳನ್ನು ನಡೆಸಿ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರ ಹೋಗದಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಎಸ್ಐಆರ್ ವಿಚಾರವಾಗಿ ನಾವು ನಿರ್ಲಕ್ಷ್ಯ ತೋರಿ ಮನೆಯಲ್ಲಿ ಮಲಗಬಾರದು. ಇದೊಂದು ಅತ್ಯಂತ ಗಂಭೀರ ಪ್ರಕ್ರಿಯೆಯಾಗಿರುವ ಕಾರಣ ಕಾರ್ಯಕರ್ತರು ಮೈಯೆಲ್ಲಾ ಕಣ್ಣಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಜಾತಿ ಲೆಕ್ಕಾಚಾರ ವರ್ಕ್ ಔಟ್ ಆಗಲ್ಲ: ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ದಾಖಲಾತಿ ಸಲ್ಲಿಸಲು ಕಾರ್ಯಕರ್ತರು ಮತದಾರರಿಗೆ ನೆರವಾಗಬೇಕು. ಜಾತಿ ಲೆಕ್ಕಾಚಾರ ಹಾಗೂ ಆಮಿಷಗಳಿಂದ ಚುನಾವಣೆ ಗೆಲ್ಲಬಹುದು ಎಂಬ ಭ್ರಮೆಯಿಂದ ನಾಯಕರು ಹೊರ ಬರಬೇಕು. ಎಸ್ಐಆರ್ ಯಶಸ್ವಿಯಾದರೆ ಮಾತ್ರ ನೈಜ ಮತದಾರರ ಪ್ರಮಾಣ ಶೇಕಡ 95 ಕ್ಕಿಂತ ಹೆಚ್ಚಾಗಲಿದೆ. ಇದು ಬಿಜೆಪಿ ಗೆಲುವಿಗೆ ಸುಲಭವಾಗುತ್ತದೆ ಎಂದು ಪ್ರೀತಂ ಗೌಡ ಅಭಿಪ್ರಾಯಪಟ್ಟರು.

ಜಗತ್ತಿನ ಯಾವ ಶಕ್ತಿ ನಮ್ಮ ಮತ ಉಳಿಸಲ್ಲ: ಎಸ್ಐಆರ್‌ನಲ್ಲಿ ಮತದಾರರ ಪಟ್ಟಿಗೆ ಹೊಸ ಹೆಸರು ಸೇರ್ಪಡೆ ಮಾಡುವ ಅಥವಾ ತೆಗೆಯುವ ಸಾಂಪ್ರದಾಯಿಕ ಪ್ರಕ್ರಿಯೆಗೆ ಸೀಮಿತವಾಗಿಲ್ಲ. ಶಿಕ್ಷಕರು ತರಗತಿಯಲ್ಲಿ ಬ್ಲ್ಯಾಕ್ ಬೋರ್ಡ್ ಮೇಲಿರುವ ಹಳೆಯ ಬರಹವನ್ನು ಸಂಪೂರ್ಣವಾಗಿ ಅಳಿಸಿ, ಮೊದಲಿನಿಂದ ಹೊಸದಾಗಿ ಬರೆದಂತೆ ಎಸ್ಐಆರ್ ಪ್ರಕ್ರಿಯೆಯಾಗಲಿದೆ ಎಂದು ಪ್ರೀತಂಗೌಡ ಹೇಳಿದರು.

ಬಿಎಲ್‌ಓಗಳು ತಂದು ಕೊಡುವ ಎನ್ಯೂಮರೇಷನ್ ಫಾರ್ಮ್ ಭರ್ತಿ ಮಾಡಿ ವಾಪಸ್ಸು ತಲುಪಿಸದಿದ್ದರೆ ಜಗತ್ತಿನ ಯಾವ ಶಕ್ತಿಯೂ ನಮ್ಮ ಮತವನ್ನು ಉಳಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ನೈಜ ಮತದಾರರನ್ನು ಮತದಾರರ ಪಟ್ಟಿಗೆ ಸೇರಿಸುವ ಕೆಲಸ ಮಾಡಿ. ಚುನಾವಣೆಯಲ್ಲಿ ನಾವು ಗೆಲುವು ಸಾಧಿಸಲು ಮತದಾರರ ಜೊತೆಗಿನ ಸಂಪರ್ಕ ಮುಖ್ಯವೇ ಹೊರತು ಬೇರೇನು ಅಲ್ಲ. ಈ ಹಿನ್ನೆಲೆಯಲ್ಲಿ ಕಾರ್ಯಕರ್ತರು ಪ್ರತಿಯೊಂದು ಬೂತ್ ಮಟ್ಟದಲ್ಲಿ ಮತದಾರರ ಹೆಸರು, ಮತದಾರರ ಸಂಖ್ಯೆ, ಮೊಬೈಲ್ ಸಂಖ್ಯೆಯನ್ನು ಪುಸ್ತಕದಲ್ಲಿ ದಾಖಲಿಸಿ ಅದನ್ನು ನಿರ್ವಹಣೆ ಮಾಡಬೇಕು.

ಈ ವೇಳೆ ಶಾಸಕರಾದ ಟಿ.ಎಸ್.ಶ್ರೀವತ್ಸ ರಘು ಕೌಟಿಲ್ಯ, ಮಾಜಿ ಶಾಸಕರಾದ ತೋಂಟದಾರ್ಯ, ಎನ್.ಮಹೇಶ್, ಹರ್ಷವರ್ಧನ್, ನಿರಂಜನ್ ಕುಮಾರ್, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮೈಸೂರು ನಗರಾಧ್ಯಕ್ಷ ನಾಗೇಂದ್ರ, ಜಿಲ್ಲಾಧ್ಯಕ್ಷ ಸುಬ್ಬಣ್ಣ, ಮಂಡ್ಯ ಜಿಲ್ಲಾಧ್ಯಕ್ಷ ಇಂದ್ರೇಶ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಕವೀಶ್‌ಗೌಡ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ರಿಯೋ ಮೆರಿಡಿಯನ್ ಹೋಟೆಲ್‌ನಲ್ಲಿ ಗುರುವಾರ ಬಿಜೆಪಿ ಆಯೋಜಿಸಿದ್ದ ಎಸ್ಐಆರ್ ಕುರಿತ ವಿಶೇಷ ಚರ್ಚಾ ಸಭೆಯಲ್ಲಿ ಮಾಜಿ ಶಾಸಕ ಪ್ರೀತಂಗೌಡ ಮಾತನಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಅಂಗಿಕಾರನ್(ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಬಲರಾಮನ ಆ ದಿನಗಳು (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವೆಲ್‌ಕಮ್ ಟು ದಿ ಜಂಗಲ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಬಲರಾಮ(ಕ)	4 ಪ್ರದರ್ಶನಗಳು
ಗಾಯಿತ್ರಿ	
ಪೆದ್ದಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾನ್ ಸಿಟಿ (ತ)	4 ಪ್ರದರ್ಶನಗಳು
ಸಂಗಂ	
ವೆಲ್‌ಕಮ್ ಟು ದಿ ಜಂಗಲ್ (ಹಿ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ) + ಒಕ್ಕಡು (ತೆ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರೈತರ ಮಕ್ಕಳಿಗೆ ಹೆಣ್ಣು ಕೊಡಿ (ಕ) + ಕಾಲಘಟ್ಟ (ಕ)	2+2 ಪ್ರದರ್ಶನಗಳು

ಸಂಚಾರ ದಂಡದಲ್ಲಿ ಶೇ.50 ರಿಯಾಯ್ತಿ

ಮೈಸೂರು ಜಿಲ್ಲೆಯಲ್ಲಿ 4 ದಿನಗಳಲ್ಲಿ 28.438 ಪ್ರಕರಣಗಳಿಂದ 70,21,700 ರೂ ದಂಡ ಸಂಗ್ರಹ

ಮೈಸೂರು, ಜೂ.25(ಎಂಟಿವೈ)– ದಾಖಲಾಗಿದ್ದ ಸಂಚಾರಿ ನಿಯಮ ಉಲ್ಲಂಘನೆ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50 ರಷ್ಟು ರಿಯಾಯಿತಿ ಅಭಿಯಾನದಲ್ಲಿ ಮೈಸೂರು ನಗರ ಪೊಲೀಸ್ ವ್ಯಾಪ್ತಿಯಲ್ಲಿ 27,357 ಪ್ರಕರಣದಲ್ಲಿ 67,69,200 ರೂ. ಸಂಗ್ರಹವಾಗಿದ್ದರೆ, ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ 1081 ಪ್ರಕರಣದಲ್ಲಿ 2,52,500 ರೂ. ಸಂಗ್ರಹವಾಗಿದೆ. ಒಟ್ಟು ಜಿಲ್ಲೆಯಲ್ಲಿ ನಾಲ್ಕು ದಿನಗಳಿಂದ 28,438 ಪ್ರಕರಣಗಳಿಂದ 70,21,700 ರೂ. ಸಂಗ್ರಹವಾದಂತಾಗಿದೆ.

ಸಾರಿಗೆ ಇಲಾಖೆಯಲ್ಲಿ 1991–92 ರಿಂದ 2021–22ರ ಅವಧಿಯಲ್ಲಿ ದಾಖಲಾಗಿರುವ ಡಿಎಸ್ಎ ಪ್ರಕರಣಗಳ ದಂಡದ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ನೀಡಲು ಸರ್ಕಾರ ಆದೇಶಿಸಿದ್ದು, ಸಾರ್ವಜನಿಕರು ಜೂ.21ರಿಂದ ಜು.10ರವರೆಗೆ ರಿಯಾಯಿತಿ ಸೌಲಭ್ಯದಲ್ಲಿ ದಂಡ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

ಮೈಸೂರು ನಗರ ವ್ಯಾಪ್ತಿ: ಮೈಸೂರು ನಗರ ಪೊಲೀಸ್ ವ್ಯಾಪ್ತಿಯಲ್ಲಿ ನಾಲ್ಕು ದಿನಗಳಿಂದ 27,357 ಪ್ರಕರಣಗಳಿಂದ 67,69,200 ರೂ. ದಂಡದ ಮೊತ್ತ ಸಂಗ್ರಹವಾಗಿದೆ ಅಭಿಯಾನ ಆರಂಭವಾದ ಮೊದಲ ದಿನ(ಜೂ.21) 6085 ಪ್ರಕರಣಗಳಿಂದ 15,29,950 ರೂ. ದಂಡದ ಮೊತ್ತ ಸಂಗ್ರಹವಾಗಿತ್ತು. ಜೂ.22ರಂದು 8337 ಪ್ರಕರಣಗಳಿಂದ 20,88,300 ರೂ., ಜೂ.23 ರಂದು 6177 ಪ್ರಕರಣದಲ್ಲಿ 14,61,700 ರೂ., ಜೂ.24ರಂದು 6758 ಪ್ರಕರಣಗಳಿಂದ 16,89,250 ರೂ. ಸಂಗ್ರಹವಾಗಿತ್ತು.

ಜಿಲ್ಲಾ ಪೊಲೀಸ್ ವ್ಯಾಪ್ತಿ: ಮೈಸೂರು ಜಿಲ್ಲಾ ಪೊಲೀಸ್ ವ್ಯಾಪ್ತಿಯಲ್ಲಿ ನಾಲ್ಕು ದಿನಗಳಿಂದ 1081 ಪ್ರಕರಣ ಇತ್ಯರ್ಥಗೊಂಡು 2,52,500 ರೂ. ಸಂಗ್ರಹವಾಗಿದೆ. ಜೂ.21ರಂದು 292 ಪ್ರಕರಣದಿಂದ 73,500 ರೂ. ಸಂಗ್ರಹವಾಗಿದ್ದರೆ, ಜೂ.22ರಂದು 140 ಪ್ರಕರಣಗಳಲ್ಲಿ 35 ಸಾವಿರ ರೂ., ಜೂ.23ರಂದು 294 ಪ್ರಕರಣಗಳಲ್ಲಿ 73,750 ರೂ., ಜೂ.24ರಂದು 355 ಪ್ರಕರಣದಿಂದ 90,250 ರೂ. ಸಂಗ್ರಹವಾಗಿದೆ.

ಒಟ್ಟು ಜಿಲ್ಲೆಯಲ್ಲಿ ನಾಲ್ಕು ದಿನಗಳಿಂದ 28,438 ಪ್ರಕರಣಗಳಿಂದ 70,21,700 ರೂ. ಸಂಗ್ರಹವಾದಂತಾಗಿದೆ.

ಪೋಕ್ಸೋ ಕೇಸ್‌ನಲ್ಲಿ ವಚನಾನಂದ ಶ್ರೀಗಳಿಗೆ ನೀಡಿದ್ದ ನಿರೀಕ್ಷಣಾ ಜಾಮೀನು ರದ್ದು

ಬೆಂಗಳೂರು: ಪೋಕ್ಸೋ ಪ್ರಕರಣದಲ್ಲಿ ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಅವರಿಗೆ ನೀಡಿದ್ದ ನಿರೀಕ್ಷಣಾ ಜಾಮೀನನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಪೀಠ ನಿರೀಕ್ಷಣಾ ಜಾಮೀನು ರದ್ದುಗೊಳಿಸಿ ಆದೇಶ ಪ್ರಕಟಿಸಿದೆ.



ಆದಾಗ್ಯೂ ರೆಗ್ಯುಲರ್ ಜಾಮೀನಿಗೆ ಅರ್ಜಿ ಸಲ್ಲಿಸಲು ಮೂರು ವಾರಗಳ ಕಾಲಾವಕಾಶ ನೀಡಿರುವುದರಿಂದ ಮೂರು ವಾರಗಳವರೆಗೆ ನಿರೀಕ್ಷಣಾ ಜಾಮೀನಿನ ರಕ್ಷಣೆ ಮುಂದುವರಿಯಲಿದೆ ಎಂದು ಕೋರ್ಟ್ ಹೇಳಿದೆ. ಹೀಗಾಗಿ ಬಂಧನ ಭೀತಿಯಿಂದ ವಚನಾನಂದ ಶ್ರೀಗಳು ಪಾರಾಗಿದ್ದಾರೆ. ಪೋಕ್ಸೋ ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಪ್ರಶ್ನಿಸಿ ಸಂತ್ರಸ್ತ ಬಾಲಕನ ತಾಯಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದ ವಿಧಾನ ಸರಿಯಲ್ಲ. ದೂರು ನೀಡುವ ಒಂದು ವಾರ ಮೊದಲೇ ನಿರೀಕ್ಷಣಾ ಜಾಮೀನು ನೀಡಲಾಗಿದೆ, ಆದ್ದರಿಂದ ಈ ಕ್ರಮ ಸರಿಯಲ್ಲ ಎಂದು ಹೈಕೋರ್ಟ್ ಜಾಮೀನು ರದ್ದುಗೊಳಿಸಿತು.

ಯುವ ಸಮೂಹ ದುಶ್ಚಟಗಳಿಂದ ದೂರವಿರಬೇಕು

●ಹಿರಿಯ ಶಾಸಕ ತನ್ವೀರ್ ಸೇಠ್ ಸಲಹೆ ●ಮಾದಕ ವಸ್ತುಗಳ ಜಾಗೃತಿ ಜಾಥಾಗೆ ಚಾಲನೆ

ಮೈಸೂರು,ಜೂ.25(ಎಂಟಿವೈ)– ದೇಶ ಕಟ್ಟುವ ಕಾಯಕದಲ್ಲಿ ಯುವ ಜನರ ಪಾತ್ರ ಬಹು ಮುಖ್ಯವಾಗಿದ್ದು, ಅತ್ಯುನ್ನತ ಸಂಪನ್ಮೂಲವಾದ ಯುವ ಸಮೂಹ ದುಶ್ಚಟಗಳಿಂದ ದೂರ ಇರಬೇಕು ಎಂದು ಮಾಜಿ ಸಚಿವ ತನ್ವೀರ್ ಸೇಠ್ ಸಲಹೆ ನೀಡಿದ್ದಾರೆ.

ಮೈಸೂರಿನ ಉದಯಗಿರಿಯಲ್ಲಿ ಪೊಲೀಸ್ ಇಲಾಖೆ ವಿವಿಧ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ 'ಮಾದಕ ವಸ್ತುಗಳ ವಿರೋಧಿ ದಿನ'ದ ಅಂಗವಾಗಿ ಆಯೋಜಿಸಿದ್ದ ಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ಮಾದಕ ವಸ್ತುಗಳ ಬಳಕೆಯಿಂದ ಯುವ ಜನರು ಹಾಳಾಗುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳ ಮೇಲೆ ನಿಗಾ ಇಡಬೇಕು. ವಿದ್ಯಾರ್ಥಿದೆಸೆಯಲ್ಲಿದ್ದಾಗ ಅತ್ಯಂತ ಜಾಗರೂಕವಾಗಿ ನೋಡಿಕೊಳ್ಳಬೇಕಾಗಿದೆ. ಮಾದಕ ವಸ್ತುಗಳ ಚಟಕ್ಕೆ ಬಿದ್ದರೆ ಜೀವನ ಹಾಳಾಗುತ್ತದೆ. ಇದರಿಂದ ತಮ್ಮ ಪೋಷಕರು ಯಾತನೆ ಪಡುವಂತಾಗುತ್ತದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು, ಯುವಜನರು ಎಚ್ಚರಿಕೆಯಿಂದ ಇರಬೇಕು ಎಂದರು.



ಆರೋಗ್ಯಕರ ದೇಶ, ಆರೋಗ್ಯಕರ ಸಮಾಜ ಕಟ್ಟಲು ಯುವಜನರ ಪಾತ್ರ ಬಹುಮುಖ್ಯ. ದೇಶದ ಬಹುಮುಖ್ಯ ಸಂಪತ್ತಾಗಿರುವ ಯುವ ಸಮುದಾಯ ಭವಿಷ್ಯ ಭಾರತ ನಿರ್ಮಾಣದ ಜವಾಬ್ದಾರಿ ಹೊರುವ ನಿಟ್ಟಿನಲ್ಲಿ ಯುವಕರು ಪಣತೊಡಬೇಕು. ಈ ನಿಟ್ಟಿನಲ್ಲಿ ದುಶ್ಚಟಗಳಿಂದ ದೂರ ಇದ್ದು, ಆರೋಗ್ಯಕರ ಜೀವನ ನಡೆಸಬೇಕು ಎಂದು ತಿಳಿಸಿದರು.

ಉದಯಗಿರಿಯ ವಿವಿಧ ರಸ್ತೆಗಳಲ್ಲಿ ಮಾದಕ ವಸ್ತುಗಳ ವಿರೋಧಿ ಜಾಥಾ ನಡೆಯಿತು. ಜಾಥಾದಲ್ಲಿ ಜಿಲ್ಲಾ ಕೆಮಿಸ್ಟ್ ಮತ್ತು ಡ್ರಗ್ಗಿಸ್ಟ್ ವೆಲ್ಫೇರ್ ಅಸೋಸಿಯೇಷನ್, ವಿಕ್ಟರಿ ಚಾರಿಟಬಲ್ ಟ್ರಸ್ಟ್ ಪದಾಧಿಕಾರಿಗಳು, ಮೆಜೆಸ್ಟಿಕ್ ಪ್ರಾಥಮಿಕ ಮತ್ತು ಪ್ರೌಢಶಾಲೆ, ಫಾರೂಕಿಯಾ ಫಾರ್ಮಸಿ ಕಾಲೇಜು ಹಾಗೂ ಜೆಎಸ್‌ಎಸ್. ಫಾರ್ಮಸಿ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಎಸಿಪಿ ರಾಜೇಂದ್ರ, ಉಪ ಔಷಧ ನಿಯಂತ್ರಕರು ಹಾಗೂ ಸಹಾಯಕ ಔಷಧ ನಿಯಂತ್ರಕರು ಉಪಸ್ಥಿತರಿದ್ದರು.


ಮೈಸೂರು ನಗರ ಬಿಜೆಪಿ
ಯುವಮೋರ್ಚಾ
ಉಪಾಧ್ಯಕ್ಷರಾದ
ಉಮೇಶ್ ರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು : ದುರ್ಗಾ ಗ್ರೂಪ್ಸ್
VISMAYA
ADVERTISERS
8050302424